# ಅಧ್ಯಯನ – 2 Study - II

# “ಅಂತಿಮ ಸಮಯ” ಅಥವಾ ಆತನ “ಸಿದ್ಧತೆಯ ದಿನ”

**ದಾನಿಯೇಲ 11**

## "The Time of the End" or "Day of His Preparation"

**Daniel - XI**

**ಅಂತಿಮ ಸಮಯ. ಅದರ ಪ್ರಾರಂಭ ಕ್ರಿ.ಶ. 1799, ಅದರ ಅಂತ್ಯ ಕ್ರಿ.ಶ. 1914. ಸಿದ್ದತೆಮಾಡಬೇಕಾದುದೇನು? ಮತ್ತು ಅದರ ಉದ್ಧೇಶ, ಪ್ರಪಂಚದ ಇತಿಹಾಸವನ್ನು ಪ್ರವಾದನೀಯವಾಗಿ ಅದರ ಮುಖ್ಯ ಆಡಳಿತಗಾರರ ಮೂಲಕ ಪತ್ತೆಹಚ್ಚಲಾಗಿದೆ. ಕ್ರಿ.ಪೂ 405 ರಿಂದ ಈ ಸಿದ್ಧತಾ ದಿನದವರೆಗೆ. ಅಂತಿಮ ದಿನದ ಪ್ರಾರಂಭದ ಸಮಯವನ್ನು ನಿಶ್ಚಿತವಾಗಿ ಗುರುತುಪಡಿಸಲಾಗಿದೆ, ಆದಾಗ್ಯೂ ಹೆಸರುಗಳು ಅಥವಾ ದಿನಾಂಕಗಳಿಲ್ಲದೆ ಗುರುತಿಸಲಾಗಿದೆ.**

ಅಂತಿಮ ಸಮಯವು ಕ್ರಿ.ಶ. 1799 ರಿಂದ ಕ್ರಿ.ಶ. 1914ರ ವರೆಗೆ ನೂರಾ ಹದಿನೈದು (115) ವರ್ಷಗಳ ಕಾಲಾವಧಿ ಎಂಬುದನ್ನು ಪರಿಶುದ್ಧ ಬರಹಗಳನ್ನು ನಿರ್ದಿಷ್ಟವಾಗಿ ಗುರುತುಪಡಿಸಲಾಗಿದೆ. ‘ಆತನ ಸಿದ್ಧತೆಯ ದಿನ’ ಎಂಬುದು ಅದೇ ಕಾಲಾವಧಿಗೆ ನೀಡಿರುವ ಮತ್ತೊಂದು ಹೆಸರು. ಯಾಕೆಂದರೆ, ಅದರಲ್ಲಿ ಜ್ಞಾನದ ಸಾಮಾನ್ಯ ಹೆಚ್ಚಳದ, ಶೋಧನೆಗಳು ಮತ್ತು ಅನ್ವೇಷಣೆಗಳು ಮುಂತಾದವುಗಳ ಫಲಿತಾಂಶಗಳಲ್ಲಿ ಬರಲಿರುವ ಅನುಕೂಲಕರ ಸಹಸ್ರಮಾನಕ್ಕೆ ದಾರಿಮಾಡಿ ಕೊಡುವವುಗಳಾಗಿದ್ದು, ಯಾಂತ್ರಿಕ ತಂತ್ರಗಳನ್ನು ಸಿದ್ಧಪಡಿಸುತ್ತವೆ ಮತ್ತು ಅವುಗಳು ಕಠಿಣ ಕೆಲಸಗಳ ಸಮಯ ಮತ್ತು ಅನುಕೂಲತೆಗಳೊಂದಿಗೆ ಮಿತವ್ಯಯಗೊಳಿಸುತ್ತದೆ ಹಾಗೂ ಲೋಕಕ್ಕೆ ಸಾಮಾನ್ಯವಾಗಿ, ಕ್ರಿಸ್ತನ ನೀತಿವಂತಿಕೆಯ ಆಳ್ವಿಕೆಯಲ್ಲಿ ಎಲ್ಲರಿಗೂ ಆಶೀರ್ವಾದದಾಯಕವೂ, ಕರ್ತನ ಜ್ಞಾನವನ್ನು ಈ ಲೋಕದಲ್ಲಿ ತುಂಬಲು ಸಹಾಯಕವೂ ಆಗಿದೆ. ಅದು ಮತ್ತೊಂದು ಅರ್ಥದಲ್ಲಿಯೂ ಸಹಸಿದ್ಧತೆಯ ದಿನ ಅಥವಾ ಕಾಲಾವಧಿಯಾಗಿದೆ. ಯಾಕೆಂದರೆ, ಜನಸಮೂಹಗಳಲ್ಲಿ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದರಿಂದ, ಈ ಪ್ರಪಂಚವನ್ನು ಸರಿಯಾದ ರೀತಿಯಲ್ಲಿ ಕ್ರಮಪಡಿಸುವಂತೆ ಕ್ರಿಸ್ತನ ಆಡಳಿತದ ಸ್ಥಾಪನೆಯ ಮೊದಲು ಎಲ್ಲರಿಗೂ ಸ್ವತಂತ್ರ ಮತ್ತು ಸುಖಭೋಗದ ರುಚಿಯನ್ನು ನೀಡಿದಂತಾಗುತ್ತದೆ ಮತ್ತು ಈ ಆಶೀರ್ವಾದಗಳು ಕ್ರಮೇಣವಾಗಿ ಅಧಿಕಾರ ವರ್ಗದವರ ಪಾರುಪತ್ಯವಾಗುತ್ತದೆ ಮತ್ತು ಸಮೂಹಗಳ ಏಳಿಗೆಗೆ ಮತ್ತು ಸಾಮುದಾಯಿಕ ಸಂಸ್ಥೆ ಮುಂತಾದವುಗಳನ್ನು ಇದರೊಂದಿಗೆ ಪ್ರಪಂಚದಲ್ಲಿ ಪ್ರಸ್ತುತವಿರುವ ಎಲ್ಲಾ ನಾಗರಿಕ ಮತ್ತು ಕ್ರೈಸ್ತ ಧರ್ಮದ ಸಾಮ್ರಾಜ್ಯಗಳನ್ನೂ ಪರಾಭವಗೊಳಿಸುವಂತೆ ಫಲಿಸುತ್ತವೆ. ಹೀಗಾಗಿ ಪ್ರಸ್ತುತ ಕಾಲವು ದೀರ್ಘಕಾಲ ಪ್ರಾರ್ಥಿಸಿದ ದೇವರ ರಾಜ್ಯದ ವಿಶ್ವ ಸಾಮ್ರಾಜ್ಯವನ್ನು (ಅಂಥವುಗಳ ಪರಾಭವಗೊಳಿಸುವಿಕೆಯ ಮೂಲಕ) ಸ್ಥಾಪಿಸುವುದಕ್ಕೆ ಸಿದ್ಧತೆಯ ದಿನವಾಗಿದೆ.

ಅಂತಿಮ ಸಮಯದ ಕಡೆಯ ನಾಲ್ವತ್ತು ವರ್ಷಗಳನ್ನು ಮತ್ತಾಯ 13:39 ರಲ್ಲಿ “ಸುಗ್ಗಿಯ ಕಾಲ ಅಂದರೆ ಯುಗದ ಸಮಾಪ್ತಿ” ಎಂದು ನಾವು ಓದುವಂತೆ ಅಂತಿಮ ಅಥವಾ ಸುವಾರ್ತಯುಗದ ಸುಗ್ಗಿ ಎಂದು ಕರೆಯಲಾಗುತ್ತದೆ. ಈ ಅವಧಿಯ ಬಗ್ಗೆ ಮೊದಲೇ ಹೇಳಿದ ಸಾಮಾನ್ಯ ಗುಣಲಕ್ಷಣಗಳು ಮತ್ತು ಘಟನೆಗಳಿಗೆ ನಾವು ಸುಗ್ಗಿಯ ವಿಶೇಷ ಲಕ್ಷಗಳನ್ನು ಕಾದಿರಿಸಿ ನಿರ್ದಿಷ್ಟ ಗಮನವನ್ನು ನಂತರದ ಅಧ್ಯಾಯದಲ್ಲಿ ಹೇಗೂ ಸೆಳೆಯುತ್ತೇವೆ.

ಈ ದಿನಾಂಕವನ್ನು ಸೂಚಿಸುವ ನಮ್ಮ ಮಾಹಿತಿಯು ದಾನಿಯೇಲನ ಪ್ರವಾದನೆಯಲ್ಲಿ ಒದಗಿಸಿರುವುದಾದರೂ, ಆತನು ಈ ಬಗ್ಗೆ ಏನನ್ನೂ ಅರ್ಥಮಾಡಿ ಕೊಳ್ಳಲಿಲ್ಲವೆಂಬುದು ನಮಗೆ ತಿಳಿದದೆ. ಯಾಕೆಂದರೆ “ನನಗೆ ಕೇಳಿಸಿದರೂ ಅರ್ಥವಾಗಲಿಲ್ಲ” (ದಾನಿ. 12:8) ಎಂದು ಆತನೇ ಹೇಳಿದ್ದಾನೆ. ಆತನ ಕಾತರದ ವಿಚಾರಣೆಗೆ ಉತ್ತರವಾಗಿ “ಈ ಮಾತುಗಳು ಅಂತ್ಯಕಾಲದವರೆಗೆ ಮುಚ್ಚಲ್ಪಟ್ಟು ಮುದ್ರಿಸಲಾಗಿದೆ (ದಾನಿ. 12:8) ಎಂದು ತಿಳಿಸಲಾಗಿದೆ. ಆದ ಕಾರಣ, ಈ ಪ್ರವಾದನೆಯನ್ನು ಕ್ರಿ.ಶ. 1799 ವರೆಗೆ ಯಾರೊಬ್ಬರೂ ಅರ್ಥಮಾಡಿಕೊಳ್ಳಲಾರರು; ಈ ಪ್ರಸ್ತಾಪವನ್ನು ಬಿಟ್ಟುಹೋಗುವ ಮೊದಲು ಅದನ್ನು ಸೂಚಿಸುವ ಪ್ರವಾದನೆಯು ಕ್ರಿ.ಶ. 1829ರ ಮುಂಚೆ ಅರ್ಥವಾಗಲು ಪ್ರಾರಂಭವಾಗುವುದಿಲ್ಲ, ಅಥವಾ ಕ್ರಿ.ಶ. 1874ರವರೆಗೆ ಅದು ಸ್ಪಷ್ಟವಾಗಿ ಪ್ರಕಟವಾಗುವುದಿಲ್ಲ ಎಂಬುದನ್ನು ನಾವು ತೋರಿಸುತ್ತೇವೆ.

ದಾನಿಯೇಲನ ಪ್ರವಾದನೆಯ 11ನೇ ಅಧ್ಯಾಯದಲ್ಲಿ ‘ಅಂತ್ಯಕಾಲ’ದವರೆಗಿನ ಗಮನಾರ್ಹ ಘಟನೆಗಳು ನಿವೇದಿಸಲ್ಪಟ್ಟಿವೆ. ಅದೇ ಸಮಯದಲ್ಲಿ 12ನೇ

ಅಧ್ಯಾಯದಲ್ಲಿ ಅಲ್ಲಿಂದ ಅಂತ್ಯದವರೆಗೆ ಅಥವಾ ಸುಗ್ಗಿಯವರೆಗೆ ನಮ್ಮನ್ನು ನಡೆಸಿಕೊಂಡು ಹೋಗುತ್ತದೆ. ಪ್ರವಾದನಾ ವಿದ್ಯಾರ್ಥಿಗಳು ಅಂತ್ಯಕಾಲದ ಸಮಯನ್ನು ನೀಡಿರುವ ವಿಶಿಷ್ಟವಾದ ರೀತಿಯನ್ನು ಗಮನಿಸುವರು – ಈ ರೀತಿಯು ಆ ದಿನವನ್ನು ಗೊತ್ತುಪಡಿಸುವ ನಿಖರತೆ ಮತ್ತು ಅದು ಅರ್ಥವಾಗುವತನಕದ ನೇಮಿತವಾದ ಸಮಯದವರೆಗಿನ ಅದರ ಮುಚ್ಚುಮರೆ ಇವೆರಡಕ್ಕೂ ಗಮನಾರ್ಹವಾಗಿದೆ. ಈ ಸಮಯದ ನಿರ್ದಿಷ್ಟ ಕಾಲವು ಹನ್ನೆರಡನೆಯ ಅಧ್ಯಾಯದಲ್ಲಿ ಈ ರೀತಿಯಲ್ಲಿ ವಿಶಿಷ್ಟವಾಗಿ ಗುರುತುಪಡಿಸಿರುವ ನಂತರದಲ್ಲಿ, ಯಾವ ಹೆಸರೂ ಹಾಗೂ ದಿನಾಂಕವನ್ನು ಹೇಳದೇ, ಹನ್ನೆರಡನೆಯ ಅಧ್ಯಾಯವು ಮೂರು ಕಾಲಾವಧಿಗಳನ್ನು ಸಾದರಪಡಿಸುತ್ತದೆ. ಅವುಗಳೆಂದರೆ 1260, 1290 ಮತ್ತು 1355 ಪ್ರವಾದನೀಯ ದಿನಗಳು. ಇವು ಹನ್ನೊಂದನೆಯ ಅಧ್ಯಾಯದಲ್ಲಿನ ಪಾಠವನ್ನು ಅಂದರೆ ಅಂತ್ಯಕಾಲದ ಪ್ರಾರಂಭವು ಕ್ರಿ.ಶ. 1799 ಎಂಬುದನ್ನು ಸಮರ್ಥಿಸುತ್ತದೆ ಮತ್ತು ಸ್ಥಾಪಿಸುತ್ತದೆ.

ಆದಾಗ್ಯೂ ಹನ್ನೊಂದನೆಯ ಅಧ್ಯಾಯವು ನಾವು ತೋರಿಸುವಂತೆ ಇತಿಹಾಸದ ಕೆಲವೊಂದು ಮುಖ್ಯ ಲಕ್ಷಣಗಳನ್ನು, ಘಟನೆಗಳನ್ನು ಮುಟ್ಟುವುದಾದರೂ, ಅದರ ಸಾಕ್ಷ್ಯವು ಅನೇಕ ಪ್ರವಾದನಾ ವಿದ್ಯಾರ್ಥಿಗಳಿಗೆ ಮುದ್ರೆಹಾಕಲ್ಪಟ್ಟಿವೆ, ಯಾಕೆಂದರೆ, ಹೆಚ್ಚಾದುದು ಅವಲಂಬಿತವಾಗಿರುವ ಪ್ರವಾದನೆಯ ಕೇಂದ್ರ ವಸ್ತುವು ಈಗಾಗಲೇ ಕಾಣುವಂತೆ ನೆರವೇರಿಸಲ್ಪಟ್ಟಿವೆ, ಈ ರೀತಿಯಾಗಿ ಒಂದು ಪ್ರವಾದನೆಯನ್ನು ಅದರ ಬಯಲಾಗುವಿಕೆಯ ಸೂಕ್ತ ಸಮಯ ಬರುವವರೆಗೂ ಮರೆಮಾಡುವಿಕೆ ಅಥವಾ ಮುಚ್ಚುವಿಕೆಯು ಯಾವುದೇ ರೀತಿಯಲ್ಲಿಯೂ ಅಸಾಧಾರಣವೇನಲ್ಲ. ಈ ರೀತಿಯ ದೃಢವಿಶ್ವಾಸವನ್ನು ಹಿಂದಿನ ಕೆಲವು ಪ್ರವಾದನಾ ವಿದ್ಯಾರ್ಥಿಗಳು ಹೊಂದಿದ್ದು ಈ ಕೇಂದ್ರೀಯ ವಿಷಯವು ಈಗಾಗಲೇ ನೆರವೇರಿದೆ ಎಂದು ಭಾವಿಸಿದರು. ನಮ್ಮ ಆಂಗ್ಲ ಭಾಷೆಯ ಸಾಮಾನ್ಯ ಭಾಷಾಂತರಗಳಲ್ಲಿ ಅಂಚಿನಲ್ಲಿನ ಉಲ್ಲೇಖಗಳಲ್ಲಿ ಅದು ಕ್ರಿ.ಪೂ. 171 ರಿಂದ 168ರವರೆಗಿನ ಅವಧಿಯಲ್ಲಿ ನೆರವೇರಿವೆ ಎಂದು ಓದಬಹುದು. ದಾನಿಯೇಲ 11:31 ರಲ್ಲಿ ವಾಕ್ಯವೃಂದವು "ಅವನು ಕೂಡಿಸುವ ಸೈನ್ಯವು ಆಶ್ರಯದುರ್ಗವಾದ ಪವಿತ್ರಾಲಯವನ್ನು ಹೊಲೆಗೆಡಿಸಿ ನಿತ್ಯಹೋಮವನ್ನು (ಅಕ್ಷರಶಃ ನಿರಂತರವಾದ ಹೋಮವನ್ನು) ನೀಗಿಸಿ ಹಾಳುಮಾಡುವ ಅಸಹ್ಯವಸ್ತುವನ್ನು ಪ್ರತಿಷ್ಠಿಸುವುದು" ಎಂದು ಓದುತ್ತದೆ.

ಈ ಪ್ರವಾದನೆಯು ಅಂತಿಯೋಕ್ಯದ ಅಂತರ್‌ಬೋಧಕನಾದ ಸಿರಿಯಾದ ಅರಸನಿಂದ ನೆರವೇರಿದೆ ಎಂಬ ಹಕ್ಕೇಳಿಕೆ ಇದೆ. ಆತನು ಬಲಾತ್ಕಾರವಾಗಿ ಯೆರೂಸಲೇಮನ್ನು ಪ್ರವೇಶಿಸಿ ದೇವಾಲಯದಲ್ಲಿ ದೇವರಿಗೆ ಮಾಡುವ ಯಜ್ಞವನ್ನು ನಿಲ್ಲಿಸಿದನು ಮತ್ತು ಆ ದೇವಾಲಯದಲ್ಲಿ ಜೂಪಿಟರನ ವಿಗ್ರಹವನ್ನು ಇಟ್ಟನು.

ನೆರವೇರಿದಂತೆ ತೋರಿಬರುವ ಈ ಪ್ರವಾದನೆಯು ಹೇಳಿದ್ದನ್ನು ನಂಬುವ ಸಾಮಾನ್ಯ ವಿದ್ಯಾರ್ಥಿಗಳನ್ನು ತೃಪ್ತಿಪಡಿಸಲು ಸಾಕಾಗುತ್ತದೆ. ಹಾಗಾಗಿ, ಅದು ಈಗಾಗಲೇ ನೆರವೇರಿರುವ ಪ್ರವಾದನೆ ಎಂಬ ಕಾರಣದಿಂದ ಅದರ ಬಗ್ಗೆ ಆತನಿಗೆ ಯಾವುದೇ ವಿಶೇಷ ಆಸಕ್ತಿ ಇರುವುದಿಲ್ಲ. ಆದರೆ ನಿಷ್ಠಾವಂತ ವಿದ್ಯಾರ್ಥಿಗಳು ಗಮನಿಸುವರು, ದಾನಿಯೇಲನ ಜನರನ್ನು ಕೊಳ್ಳೆಹೊಡೆದವರು ಈ ದರ್ಶನವನ್ನು ವಾಸ್ತವವಾಗಿ ನೆರವೇರಿಸಲು ಪ್ರಯತ್ನಿಸಿದರೂ ಸಹ ಅವರು ವಿಫಲರಾಗುವರು (ವಚನ 14) ಎಂಬುದು ಮುಂತಿಳಿಸಲಾಗಿತ್ತೆಂಬುದನ್ನು ಗಮನಿಸುತ್ತಾನೆ ಮತ್ತು "ಅಂತ್ಯಕಾಲವು ಕ್ಲುಪ್ತಕಾಲದಲ್ಲಿಯೇ ಆಗುವುದು" (ವಚನ 35) ಮತ್ತು ಅದರ ಪೂರ್ಣವಾದ ಮತ್ತು ಸರಿಯಾದ ಅರ್ಥವಿವರಣೆಯು ಅದುವರೆಗೆ ಹೊಂದಲು ಸಾಧ್ಯವಿಲ್ಲ. ಹಾಗಾಗಿ ಹಿಂದಿನವು ಸರಿಯಾದ ಅರ್ಥವಿವರಣೆ ಎಂದು ನಿರೀಕ್ಷಿಸುವುದಿಲ್ಲ. ಜಾಗರೂಕ ವಿದ್ಯಾರ್ಥಿಯು ನಮ್ಮ ಕರ್ತನು ಈ ಪ್ರವಾದನೆಯು ಇನ್ನೂರು ವರ್ಷಗಳ ಹಿಂದೆ ನೆರವೇರಿದೆ ಮತ್ತು ಅದು ಭವಿಷ್ಯದಲ್ಲಿ ನೆರವೇರಲಿದೆ ಎದುರು ನೋಡಲು ಎಂದು ಹೇಳಿದನು ಎಂಬ ಹೇಳಿಕೆಗೆ ಗಮನ ಸೆಳೆಯುತ್ತಾನೆ. – "ದಾನಿಯೇಲನು ಹೇಳಿದಂತೆ, ಹಾಳುಮಾಡುವ ಅಸಹ್ಯವಸ್ತುವು ಪವಿತ್ರ ಸ್ಥಾನದಲ್ಲಿ ನಿಂತಿರುವುದನ್ನು ಕಾಣುವಿರಿ" (ಮತ್ತಾಯ 24: 3,15 ನೋಡಿರಿ). ನಮ್ಮ ಕರ್ತನು ಒಂದು ಎಚ್ಚರಿಕೆಯ ಮಾತನ್ನೂ ಕೂಡಿಸಿದ್ದಾನೆ. ಅದೇನಂದರೆ ನಿಜವಾದ ಅಸಹ್ಯತೆಯನ್ನು ನಾವು ತಪ್ಪಾಗಿ ತಿಳುಕೊಳ್ಳದಂತೆ "ಓದುವವನು ಇದನ್ನು ತಿಳುಕೊಳ್ಳಲಿ" ಎಂದಿದ್ದಾನೆ.

ಪೋಪನ ಪದ್ಧತಿಯು (Papal System) ಖಿನ್ನತೆಗೊಳಿಸುವ ಅಸಹ್ಯ ಸಂಗತಿಗಳಾಗಿವೆ, ಅವು ಶತಮಾನಗಳಿಂದ ಲೋಕವನ್ನೂ, ಕ್ರೈಸ್ತ ಸಭೆಯನ್ನೂ ಕ್ರೈಸ್ತ ಸಾಮ್ರಾಜ್ಯದ ಹೆಸರಿನಲ್ಲಿ ಹಾಳುಮಾಡಿದೆ ಎಂಬ ಸತ್ಯವನ್ನು ಹಿಂದಿನ ಸಂಪುಟದಲ್ಲಿ ಪ್ರಸ್ತುತಿಪಡಿಸಿರುವ ಸಾಕ್ಷ್ಯಗಳು ಸ್ಪಷ್ಟಪಡಿಸಿವೆ ಎಂದು ನಂಬುತ್ತೇವೆ. ನಿಜವಾಗಿಯೂ ಅದು ಪವಿತ್ರಸ್ಥಾನದಲ್ಲಿ, ದೇವರ

ಆಲಯದಲ್ಲಿ, ಕ್ರೈಸ್ತ ಸಭೆಯಲ್ಲಿ ಬಹಳ ಕಾಲದಿಂದ ನಿಂತಿದೆ. ಅದರ ಅಸಹ್ಯಕರವಾದ ಗುಣಲಕ್ಷಣಗಳನ್ನು ಹೆಚ್ಚು ಸ್ಪಷ್ಟವಾಗಿ ನೋಡುವಂತೆ ಮತ್ತು ಅದರ ಎಲ್ಲಾ ತಪ್ಪುಗಳಿಂದ ತೊರೆದುಹೋಗುವಂತೆ ಅನುಕೂಲ ಮಾಡಿದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ. ಅದರ ದಿನಗಳು ಎಣಿಕೆಯಾಗಿರುವುದಕ್ಕಾಗಿ ಮತ್ತು ಶುದ್ಧೀಕರಿಸಿದ ಪವಿತ್ರ ಆರಾಧನಾ ಮಂದಿರವು ಸಧ್ಯದಲ್ಲಿಯೇ ಮೇಲೆತ್ತಲ್ಪಟ್ಟು ದೇವರ ಮಹಿಮೆಯಿಂದ ತುಂಬುವುದಕ್ಕಾಗಿ ದೇವರಿಗೆ ಸ್ತೋತ್ರ! (ದಾನಿಯೇಲ 8:14).

ಈ ಪ್ರಸ್ತಾವನೆಯೊಡನೆ, ನಾವು ದಾನಿಯೇಲನ ಪ್ರವಾದನಾ ಗ್ರಂಥದ ಹನ್ನೊಂದನೆಯ ಅಧ್ಯಾಯವನ್ನು ಕ್ರಮಾನುಗತವಾಗಿ ಪರೀಕ್ಷಿಸಲು ಮುಂದುವರೆಯುವವರಾಗಿದ್ದೇವೆ.

ಎರಡನೆಯ ವಚನವು ಮೇದ್ಯ–ಪರ್ಶಿಯಾದ ಚಕ್ರವರ್ತಿಯೂ ನಾಲ್ಕನೆಯ ಮತ್ತು ಕಡೆಯ ಅರಸನಾದ ಡೇರಿಯಸ್ III ಕೊಡೊಮಾನಸ್‌ನಿಂದ ಪ್ರಾರಂಭವಾಗುತ್ತದೆ.

ಮೂರನೆಯ ವಚನದಲ್ಲಿ ತಿಳಿಸುವ ಗ್ರೀಸಿನ ಪರಾಕ್ರಮಶಾಲಿ ಅರಸನಾದ ಅಲೆಗ್ಸಾಂಡರ್ ದಿ ಗ್ರೇಟ್ ಎಂಬಾತನು ಆತನ ಬಗ್ಗೆ ವಿಲ್ಲಾರ್ಡ್ ಎಂಬಾತನು ಬರೆದ ಕೆಳಗಣ ಇತಿಹಾಸದ ತುಣುಕನ್ನು ಆಸಕ್ತಿಯಿಂದ ಓದಲಾಗುವುದು. ಆತನು ಹೇಳುವುದೇನೆಂದರೆ :

ಅರಸನಾದ ಅಲೆಗ್ಸಾಂಡರ್ ದಿ ಗ್ರೇಟ್ ಎಂಬಾತನು ಯೂದಾಯಕ್ಕೆ ಮುತ್ತಿಗೆ ಹಾಕಿ ಯೆರೂಸಲೇಮಿಗೆ ಒಂದು ಆಜ್ಞೆಯನ್ನು ಕಳುಹಿಸಿ ತನ್ನ ಸೈನ್ಯಕ್ಕೆ ದವಸ ಧಾನ್ಯಗಳನ್ನು, ಸೈನಿಕರ ದಂಡನ್ನು ಒದಗಿಸುವಂತೆ ಆಜ್ಞಾಪಿಸುತ್ತಾನೆ. ಆಗ ಮಹಾಯಾಜಕನಾಗಿದ್ದ ಜಡ್ಡಸ್ ಎಂಬಾತನು ತಾನು ಪರ್ಶಿಯಾದ ಅರಸನಿಗೆ ರಾಜನಿಷ್ಠೆಯುಳ್ಳವನಾಗಿದ್ದೇನೆ ಮತ್ತು ಆತನು ಜೀವಿಸುತ್ತಿರುವಾಗ ತನ್ನ ಉದ್ದೇಶವನ್ನು ಪರಿತ್ಯಜಿಸಲಾರೆ ಎಂದು ಉತ್ತರವನ್ನು ಬರೆದು ಹಿಂತಿರುಗಿಸಿದನು. ಅಲೆಗ್ಸಾಂಡರನು ತೂರ್ ದೇಶವನ್ನು ವಶಪಡಿಸಿಕೊಂಡ ಕೂಡಲೇ ಜಡ್ಡಸ್‌ನ ತಿರಸ್ಕಾರಕ್ಕೆ ತನ್ನ ಪ್ರತೀಕಾರವನ್ನು ತೆಗೆದುಕೊಳ್ಳುವುದಕ್ಕೋಸ್ಕರ ಯೆರೂಸಲೇಮಿಗೆ ಬಂದನು. ಆತನ ಉದ್ದೇಶವನ್ನು ತಿಳಿದವನಾಗಿ, ಆತನೊಡನೆ ಹೋರಾಡಲು ಸಾಧ್ಯವಿಲ್ಲದೇ, ಮಹಾಯಾಜಕನು ತನ್ನ ದುರವಸ್ಥೆಯಲ್ಲಿ ರಕ್ಷಣೆಗಾಗಿ ಪರಲೋಕಕ್ಕೆ ಮೊರೆಹೋದನು. ರಾತ್ರಿಯಲ್ಲಿ ಉಂಟಾದ ದರ್ಶನವೊಂದರಲ್ಲಿ ಸೂಚಿಸಿದಂತೆ ಆತನು ನಗರದ ದ್ವಾರಗಳನ್ನು ತೆರೆದು ಮಾರ್ಗದಲ್ಲಿ ಹೂವನ್ನು ಚೆಲ್ಲಿಸಿದನು. ವೈಭಯುತವಾದ ಲೇವಿಯ ಯಾಜಕನ ಅಧಿಕಾರ ವಸ್ತ್ರಗಳನ್ನು ಧರಿಸಿ ಆತನು ಆ ವಿಜಯಶಾಲಿಯನ್ನು ಸಂಧಿಸಲು ಮುಂದಾದನು. ಆತನನ್ನು ಎಲ್ಲಾ ಯಾಜಕರುಗಳೂ ಶ್ವೇತವಸ್ತ್ರ ಧರಿಸಿದವರಾಗಿ ಹಿಂಬಾಲಿಸಿದರು. ಅಲೆಗ್ಸಾಂಡರನು ಆತನನ್ನು ಸಂಧಿಸಿ, ಆತನಿಗೆ ತಲೆಬಾಗಿ ಸನ್ಮಾನಿಸಿದನು. ಆತನ ಆಶ್ಚರ್ಯಚಕಿತನಾದ ಸ್ನೇಹಿತನು – ತಾನೇ ಸನ್ಮಾನಕ್ಕೆ ಯೋಗ್ಯನಾಗಿದ್ದರೂ ಯಾಕೆ ಮಹಾಯಾಜಕನನ್ನು ಸನ್ಮಾನಿಸಿದೆ ಎಂದು ಕೇಳಿದಾಗ ಆತನು “ನಾನು ಆತನನ್ನು ಸನ್ಮಾನಿಸಲಿಲ್ಲ, ಆದರೆ ಈತನು ಸೇವಕನಾಗಿರುವ ಆ ದೇವರನ್ನು ಆರಾಧಿಸಿದೆ”. ಈತನ ಅಭ್ಯಾಸವನ್ನು ನೋಡಿದಾಕ್ಷಣ ನಾನು ಮೆಕೆದೋನ್ಯದಲ್ಲಿ ಪರ್ಶಿಯಾದ ಮೇಲಣ ವಿಜಯದ ಬಗ್ಗೆ ಧ್ಯಾನಿಸುತ್ತಿರುವಾಗ ದರ್ಶನದಲ್ಲಿ ಕಂಡಾತನು ಈತನೇ ಎಂದು ಅರಿತುಕೊಂಡೆ. ಈತನು–ನನ್ನ ದೇವರು ನಿನ್ನ ಮುಂದೆ ಹೋಗಿ ನಿನಗೆ ವಿಜಯವನ್ನುಂಟುಮಾಡುವನು ಎಂದು ಹೇಳಿದ್ದನು” ಎಂದು ಉತ್ತರಿಸಿದನು. ನಂತರದಲ್ಲಿ ಅಲೆಗ್ಸಾಂಡರನು ಯಾಜಕರನ್ನು ಆಲಂಗಿಸಿಕೊಂಡನು. ಅವರ ಮಧ್ಯದಲ್ಲಿ ನಡೆಯುತ್ತಾ ಯೆರೂಸಲೇಮನ್ನು ಪ್ರವೇಶಿಸಿದನು. ಅಲ್ಲಿನ ದೇವಾಲಯದಲ್ಲಿ ಆತನು ವಿಧಿಯುಕ್ತವಾಗಿ ಯಜ್ಞಗಳನ್ನು ಸಮರ್ಪಿಸಿದನು. ನಂತರದಲ್ಲಿ ಮಹಾಯಾಜಕನು ಅವನಿಗೆ ದಾನಿಯೇಲನ ಪ್ರವಾದನೆಯನ್ನು ತೋರಿಸಿದನು ಮತ್ತು ಪರ್ಶಿಯನ್ ಅಧಿಕಾರವನ್ನು ಆತನು ತೆಗೆದುಹಾಕುವನು ಎಂಬ ಅದರ ಅರ್ಥವಿವರಣೆಯನ್ನು ನೀಡಿದನು.

ಹದಿಮೂರು ವರ್ಷಗಳ ಅಲ್ಪಸಮಯದಲ್ಲಿ ಅಲೆಗ್ಸಾಂಡರನು ಲೋಕವನ್ನೆಲ್ಲಾ ಜಯಿಸಿದನಾದರೂ, ಆತನ ಮರಣಾನಂತರ ಆತನ ಸಾಮ್ರಾಜ್ಯವು ಆತನ ಕುಟುಂಬದಲ್ಲಿ ಒಂದು ದೇಶವಾಗಿ ಮುಂದುವರೆಯಲಿಲ್ಲ. ಅದು ಆತನ ನಾಲ್ಕು ಸೇನಾಧಿಪತಿಗಳಿಂದ ವಿಭಜಿಸಲ್ಪಟ್ಟು ನಂತರದಲ್ಲಿ ಚೂರುಚೂರಾಗಿ ಹೋಯಿತು (ವಚನ 4).

ದಾನಿಯೇಲ 8:3–9,20–25ರೊಂದಿಗೆ ಈ ಪ್ರವಾದನೆಯ ಅನುರೂಪತೆಯನ್ನು ಗಮನಿಸಿರಿ. ಅಲೆಗ್ಸಾಂಡರನ ಚಕ್ರಾಧಿಪತ್ಯದ ಒಂದು ಭಾಗದೊಳಗಿಂದ (ವಚನ 8,9 ಮತ್ತು 21ರೊಂದಿಗೆ ಹೋಲಿಸಿರಿ) ಒಂದು ಕೊಂಬು ಅಥವಾ ಅಧಿಕಾರವು ಮುಂದಕ್ಕೆ ಬರುವುದು, ಅದು ಬಹಳಷ್ಟು ದೊಡ್ಡದಾಗುವುದು. ಇದು ಸ್ಪಷ್ಟವಾಗಿ ರೋಮ್ ಅನ್ನು ಸೂಚಿಸುತ್ತದೆ. ಅದು ಗ್ರೀಸಿನ ನಾಶನಗಳ ಮೇಲೆ ಪ್ರಭಾವಯುಕ್ತವಾಗಿ ಉದಯಿಸಿತು. ಒಬ್ಬ ಮಹತ್ವವಲ್ಲದ ಪ್ರಜೆಯಾಗಿ ಅದರ ರಾಯಭಾರಿಗಳು

ಗ್ರೀಸಿನ ಪರಮಾಧಿಕಾರವನ್ನು ಒಪ್ಪಿಕೊಂಡರು ಮತ್ತು ಅಲೆಗ್ಸಾಂಡರನ ಅಡಿಯಲ್ಲಿ ಚಕ್ರಾಧಿಪತ್ಯದ ಭಾಗವಾದರು. ಕ್ರಮೇಣದಲ್ಲಿ ರೋಮ್ ಪ್ರಾಬಲ್ಯ ಗೊಂಡಿತು.

ದಾನಿಯೇಲನ ಪ್ರವಾದನಾ ಗ್ರಂಥದ 8:9,10ರ ಕೆಲವೇ ಮಾತುಗಳಲ್ಲಿ ತಿಳಿಸಿರುವ ಈ ಚರಿತ್ರೆಯು ಅಧ್ಯಾಯ 11:5–19ರಲ್ಲಿ ಹೆಚ್ಚಿನ ವಿವರಗಳೊಂದಿಗೆ ವಿವರಿಸಲಾಗಿದೆ. ಈ ವಿವರವಾದ ಹೇಳಿಕೆಯಲ್ಲಿ, ಐಗುಪ್ತವನ್ನು "ದಕ್ಷಿಣದ ರಾಜ" ಎಂದು ಹೇಳಲಾಗಿದೆ. ಅದೇ ಸಮಯದಲ್ಲಿ ಗ್ರೀಕರು, ನಂತರದಲ್ಲಿ ರೋಮನ್ನರು, ಅಧಿಕಾರದಲ್ಲಿ ಅವರ ಉತ್ತರಾಧಿಕಾರಿಗಳು, ಗ್ರೀಕಿನಿಂದ ಮೂಡಿಬಂದ ಕೊಂಬು ಇವುಗಳನ್ನು "ಉತ್ತರದ ರಾಜ" ಎಂಬುದಾಗಿ ವಿಶ್ಲೇಷಿಸಲಾಗಿದೆ. ಇವುಗಳ ಮಧ್ಯೆ ಹೆಣಿಯಲ್ಪಟ್ಟು, ಈಗ ಒಂದರ, ನಂತರ ಮತ್ತೊಂದರೊಂದಿಗೆ ಜೋಡಿಸಿರುವ ದೇವರ ಜನರ – ದಾನಿಯೇಲನ ಜನರ ಚರಿತ್ರೆಯಾಗಿದೆ. ದೇವರಿಂದ ವಾಗ್ದಾನ ಮಾಡಲ್ಪಟ್ಟಂತೆ ಅದರಲ್ಲಿನ ಅಂತಿಮ ಆಶೀರ್ವಾದವನ್ನು ದಾನಿಯೇಲನು ನಂಬಿದ್ದನು. ಈ ಇತಿಹಾಸವನ್ನು ಅಲೆಗ್ಸಾಂಡರನ ಸೇನಾಧಿಪತಿಗಳೊಂದಿಗೆ ಮತ್ತು ಅವರ ಉತ್ತರಾಧಿಕಾರಿ ಗಳೊಂದಿಗೆ ನಡೆದ ಘರ್ಷಣೆಗಳ ಅನೇಕ ವಿವರಣೆಗಳೊಂದಿಗೆ ಪತ್ತೆಹಚ್ಚುವುದು ವಚನ 17ರವರೆಗೆ ಆಯಾಸಕರ ಮತ್ತು ಅನವಶ್ಯಕ. ಆ ವಚನವು ಕ್ಲಿಯೋಪಾತ್ರ ಎಂಬ ಐಗುಪ್ತದ ರಾಣಿಯನ್ನು ಉಲ್ಲೇಖಿಸುತ್ತದೆ. ಎಲ್ಲರೂ ಇದುವರೆಗೆ ಒಪ್ಪಿ ಕೊಂಡಿರುವಂತೆ ನಾವು ಇದ್ದಕ್ಕಿಂತ ಹಿಂದಿನವುಗಳತನಕ ಹೋಗಬೇಕಾಗಿರುವುದಿಲ್ಲ.

18ನೇ ವಚನದಲ್ಲಿ, Antiochus Epiphanesಗೆ 31ನೇ ವಚನವು ಅನ್ವಯವಾಗುತ್ತದೆ ಎಂದು ಹೇಳುವವರೆಲ್ಲರೂ Seleucus, Philopater, Antiochus Epiphane ಮತ್ತು Ptolemeus Philomater ಇವರುಗಳ ನಡುವೆ ಚಿಲ್ಲರೆ ಜಗಳಗಳು ಮತ್ತು ಕದನಗಳಿಗೆ ಅದರಲ್ಲಿನ ಪ್ರವಾದನೆಗಳು ಮುಂದುವರೆದು ಅಧ್ಯಾಯದ ಕೊನೆಯವರೆಗೂ ಅನ್ವಯವಾಗುತ್ತವೆ ಎಂದು ಹೇಳುವವರು – ಯಾಕೆಂದರೆ, ಯೆಹೂದ್ಯರು ಇದನ್ನು ಅನ್ವಯ ಮಾಡಿಕೊಳ್ಳುವಂತೆ ಅಭ್ಯಾಸಮಾಡಿಕೊಂಡಿದ್ದಾರೆ. ಯೆಹೂದ್ಯರು ಈ ಅರ್ಥವಿವರಣೆಯನ್ನು ದಾನಿಯೇಲ 12ನೇ ಅಧ್ಯಾಯಕ್ಕೆ ಮುಂದುವರಿಸುತ್ತಾ ಮೆಸ್ಸೀಯನ ಮೂಲಕ ತ್ವರಿತವಾದ ಬಿಡುಗಡೆಗೆ ಬಲವಾದ ನೆಲೆಯನ್ನು ನಿರೀಕ್ಷಿಸುತ್ತಾರೆ. ಹೀಗಾಗಿ ನಾವು ನಮ್ಮ ಕರ್ತನ ಜನನದ ಸಂದರ್ಭದಲ್ಲಿ, ಎಲ್ಲಾ ಜನರೂ ಆತನನ್ನು ಆತನ ಮೂಲಕವಾಗಿ ರೋಮ್‌ನ ನೊಗದಿಂದ ತಮ್ಮ ಬಿಡುಗಡೆಯನ್ನು ನಿರೀಕ್ಷಿಸುತ್ತಿದ್ದರು. ಆದರೆ ವಚನ ಹದಿನೆಂಟರ ನಂತರ ನಿಜವಾದ ಅಸಹ್ಯ ವಸ್ತುವು ಅವರ ಸಹವಾಸದಿಂದ ದೂರವಾಗುವುದನ್ನು ನೋಡುವ ನಾವುಗಳು ಈ ಪ್ರವಾದನೆಯು ಪೋಪನ ಅಧಿಕಾರದವರೆಗೆ ಕೇವಲ ಮುಖ್ಯ ಪಾತ್ರಗಳನ್ನು ಮಾತ್ರವೇ ಮುಟ್ಟುತ್ತವೆ ಎಂಬುದನ್ನು ತಿಳಿಯುತ್ತೇವೆ. ನಂತರದಲ್ಲಿ ಅದನ್ನು ಮುಟ್ಟುವ, ಗುರ್ತುಹಿಡಿಯುವ ಮತ್ತು ಅದರ ಹಿಂಸೆಪಡಿಸುವ ಶಕ್ತಿಯು ಕೊನೆಗಾಣುವವರೆಗೆ ಮುಂದುವರೆಯುತ್ತದೆ ಮತ್ತು ಆ ದಿನವನ್ನು ಇತಿಹಾಸದ ಒಬ್ಬ ಪ್ರಾಮುಖ್ಯ ಪಾತ್ರನಾದ ನೆಪೋಲಿಯನ್ ಬೋನಾಪಾರ್ಟೆ ಎಂಬುವವನ ಬಗ್ಗೆ ಇರುವ ವಿವರವಾದ ಹೇಳಿಕೆಗಳಲ್ಲಿ ಗುರುತಿಸುತ್ತಾರೆ.

ಆದರೆ, ಹೀಗೆ ಮುಂಚಿತವಾಗಿ ಬರುವ ವಚನಗಳನ್ನು ಇತಿಹಾಸದ ಪ್ರಾಮುಖ್ಯ ಲಕ್ಷಣಗಳನ್ನು ಮುಟ್ಟುವಂತೆ ನಿರ್ದಿಷ್ಟವಾಗಿ ಬದಲಾಯಿಸುವ ವಿಧಾನ ಯಾಕೆ? ಎಂದು ಕೇಳಬಹುದು. ಅದು ಪ್ರವಾದನೆಯನ್ನು ಮುಗಿಸಿ ಮುದ್ರೆಹಾಕುವ ದೇವರ ವಿಧಾನವಾಗಿದೆ ಎಂದು ನಾವು ಉತ್ತರಿಸುತ್ತೇವೆ. ಅಲ್ಲದೇ, ಪ್ರವಾದನೆಯಲ್ಲಿ ಎಲ್ಲವೂ ಇಸ್ರಾಯೇಲ್ಯರು ಮೊದಲನೆಯ ಆಗಮನದಲ್ಲಿ ಮುಗ್ಗರಿಸದ ಹಾಗೆ ವ್ಯವಸ್ಥೆ ಮಾಡಲಾಗಿದೆ. ಇಪ್ಪತ್ತು ಶತಮಾನಗಳ ಸೂಕ್ಷ್ಮವಾದ ಮತ್ತು ವಿವರವಾದ ಸಂಗತಿಗಳು ಈ ಅಧ್ಯಾಯದ 3 ರಿಂದ 17ನೇ ವಚನಗಳಲ್ಲಿರುವ ಪ್ರವಾದನೆಯಂತೆ ಹರಡಿದ್ದರೆ ಅದು ದೀರ್ಘವೂ, ಪ್ರಯಾಸಕರವೂ, ಮತ್ತು ಗ್ರಹಿಕೆಗೆ ಮೀರಿದ್ದೂ ಆಗಿರುತ್ತಿತ್ತು. ಮತ್ತು ಅದು ಯೆಹೂದ್ಯರಿಗೆ ಮತ್ತು ಆದಿ ಕ್ರೈಸ್ತ ಸಭೆಗೆ ದೇವರ ರಾಜ್ಯವು ಬರುವ ಮುಂಚಿನ ಕಾಲದ ವಿಸ್ತಾರದ ಬಗ್ಗೆ ಕಲ್ಪನೆಯನ್ನು ನೀಡುತ್ತಿತ್ತು. ಇದು ದೇವರ ಉದ್ದೇಶವಾಗಿರಲಿಲ್ಲ.

ನಂತರ ಮುಂದುವರೆಯುವಾಗ, 17 ರಿಂದ 19 ವಚನಗಳು ಮಾರ್ಕ್ ಅಂಥೋಣಿ ಮತ್ತು ಕ್ಲಿಯೋಪಾತ್ರ ಇವರುಗಳು ಚಿತ್ರಿಸಲ್ಪಟ್ಟ ಸಮಯಗಳು ಮತ್ತು ಘಟನೆಗಳನ್ನು ಅನ್ವಯಿಸುವುದಕ್ಕಾಗಿ ಎಂಬುದು ನಮಗೆ ಅರ್ಥವಾಗುತ್ತದೆ. ದಕ್ಷಿಣದ, ಐಗುಪ್ತದ ಅರಸನಾದ ಆಂಥೋಣಿಯು ಬಿದ್ದಾಗ ರೋಮ್ ಸಾಮ್ರಾಜ್ಯದಲ್ಲಿ ಕಬಳಿಸಲ್ಪಟ್ಟನು. 20ನೇ ವಚನವನ್ನು ನಾವು ಆಗಸ್ಟಸ್ ಸೀಸರನಿಗೆ ಅನ್ವಯಿಸುತ್ತೇವೆ. ಆತನು ಎಲ್ಲಾ ಅಧೀನ ದೇಶಗಳಿಂದ ಕ್ರಮಬದ್ಧವಾಗಿ ಹೆಚ್ಚು ಕರಗಳನ್ನು

ಶೇಖರಿಸುವದಕ್ಕೆ ಪ್ರಖ್ಯಾತನಾಗಿದ್ದನು. ಮತ್ತು ಯೂದಾಯದಲ್ಲಿ ಮತ್ತು ಅಂದಿನ ನಾಗರೀಕ ಪ್ರಪಂಚದಲ್ಲಿ ಆತನ ಕರಗಳ ಬಲವಂತ ಸುಲಿಯುವಿಕೆಯನ್ನು ನಮ್ಮ ಕರ್ತನ ಜನನದ ಸಮಯದಲ್ಲಿ ದೇವರ ವಾಕ್ಯದಲ್ಲಿ (ಲೂಕ 2:1) ಗಮನಿಸಬಹುದಾಗಿದೆ. ಆಗಸ್ಟಸ್ (ಔಗುಸ್ತನು) ಇಡೀ ಪ್ರಪಂಚವು ತೆರಿಗೆ ಕಟ್ಟಬೇಕು ಎಂಬ ಆಜ್ಞೆಯನ್ನು ಹೊರಡಿಸಿದನು ಎಂಬುದು "ಅವನ ಸ್ಥಾನದಲ್ಲಿ ಮತ್ತೊಬ್ಬನು ಎದ್ದು ರಾಜ್ಯದಲ್ಲಿ ಶಿರೋಮಣಿ ಯಾವ ದೇಶವನ್ನೆಲ್ಲಾ ದೋಚಿಕೊಳ್ಳತಕ್ಕವನನ್ನು ನೇಮಿಸುವನು" ಎಂಬ ವಿವರಣೆಗೆ ಅನುಗುಣವಾಗಿದೆ. ಆತನ ಸ್ಥಿರಾಸ್ತಿಯಲ್ಲಿ ರಾಜ್ಯದ ವೈಭವಕ್ಕಾಗಿ ತೆರಿಗೆಗಳು ಹೆಚ್ಚಳವಾಗಬೇಕು. ವಿವರಣೆಯ ಎರಡನೆಯ ಭಾಗವು ಸಹ ಸರಿಯಾಗಿ ಹೊಂದಿಕೊಳ್ಳುತ್ತದೆ. ಆಗಸ್ಟಸ್ ಸೀಸರನ ಆಳ್ವಿಕೆಯ ಕಾಲವು ಇತಿಹಾಸದಲ್ಲಿ ರೋಮ್ ಸಾಮ್ರಾಜ್ಯದ ಒಂದು ಭವ್ಯವಾದ ಶಕವೆಂದು ಬರೆಯಲ್ಪಟ್ಟಿದೆ ಮತ್ತು ಆ ಕಾಲವನ್ನು "ರೋಮಿನ ಸುವರ್ಣಯುಗ"ವೆಂದು ಕರೆಯುತ್ತಾರೆ.

20ನೇ ವಚನದ ಮತ್ತೊಂದು ಭಾಷಾಂತರವು ಹೀಗಿದೆ: "ವೈಭವಯುತ ದೇಶದ ಅಧಿಪತ್ಯ ಮುಂದೆ ಸಾಗುವಂತೆ ತೆರಿಗೆ ಸುಲಿಗೆ ಮಾಡುವನೊಬ್ಬನು ತನ್ನ ಸ್ಥಾನದಲ್ಲಿ ನಿಂತುಕೊಳ್ಳುತ್ತಾನೆ". ಇದು ವಿಶೇಷವಾಗಿ ಪಾಲೆಸ್ಟೈನಿಗೆ ಅನ್ವಯವಾಗುವುದಾಗಿ ಕಂಡು ಬರುತ್ತದೆ. ಮತ್ತು ಇದು ಲೂಕನ ಸುವಾರ್ತೆಯ ಹೇಳಿಕೆಗೆ ವಿಶೇಷವಾಗಿ ಹೊಂದುತ್ತದೆ. ಎರಡೂ ಅನ್ವಯಗಳೂ ಸರಿಯಾಗಿಯೇ ಅವೆ. ಅದು ರೋಮನ್ ಸಾಮ್ರಾಜ್ಯದ ಭವ್ಯವಾದ ಕಾಲವಾಗಿತ್ತು. ಕಂದಾಯ ವಸೂಲಿಗಾರರನ್ನು ಆ ರಾಜ್ಯದ ಭವ್ಯವಾದ ಸ್ಥಳ ಪಾಲೆಸ್ಟೈನಿನಲ್ಲಿ ಹಾದುಹೋಗುವಂತೆ ಮಾಡಲಾಗುತ್ತಿತ್ತು. ಇದಕ್ಕೂ ಹೆಚ್ಚಾಗಿ, ಆಗಸ್ಟಸ್ ಸೀಸರನು ಇಡೀ ಪ್ರಪಂಚಕ್ಕೆ ಕ್ರಮಬದ್ಧವಾದ ಕರಗಳನ್ನು ಪರಿಚಯಿಸಿದವರಲ್ಲಿ ಮೊದಲಿಗನು.

ನಾವು ಈ ಪ್ರಮುಖ ಆಡಳಿತಗಾರನ ಬಗ್ಗೆ ಇನ್ನೂ ಹೆಚ್ಚಾಗಿ ಓದುತ್ತೇವೆ – "ಕೆಲವು ದಿನಗಳಲ್ಲಿ ಆತನು ನಾಶವಾಗುವನು. ಆದರೆ ಕೋಪದ ಪೆಟ್ಟಿನಿಂದಲೂ ಅಲ್ಲ, ಯುದ್ಧದಿಂದಲೂ ಅಲ್ಲ". ಆಗಸ್ಟಸ್ ಸೀಸರನು ಶಾಂತವಾದ ಸಾವನ್ನು ಅನುಭವಿಸಿದನೆಂದು ದಾಖಲಾಗಿದೆ. ಅದೇ ಸಮಯದಲ್ಲಿ ಸಾರ್ವಭೌಮಿಕ ಅಧಿಕಾರ ಹೊಂದಿದ್ದ ಆತನ ಪೂರ್ವಾಧಿಕಾರಿ ಮತ್ತು ಆತನ ಏಳು ಮಂದಿ ಉತ್ತರಾಧಿಕಾರಿಗಳು ಹಿಂಸಾತ್ಮಕ ಮರಣವನ್ನಪ್ಪಿದರು. ಆತನು ತನ್ನ ಅಧಿಕಾರದ ಉತ್ತುಂಗವನ್ನು ತಲುಪಿದ ಕೆಲವು ವರ್ಷಗಳಲ್ಲಿಯೇ ತೀರಿಕೊಂಡನು. ಈ ರೀತಿ ಕಂದಾಯ ಸುಲಿಗೆಗಾರನೊಬ್ಬನು ತನ್ನ ರಾಜ್ಯದ ಭವ್ಯತೆಯಲ್ಲಿ ಹಾದುಹೋಗಲು ಕಾರಣವಾಯಿತು.

ವಚನ 21 ಸರಿಯಾದ ರೀತಿಯಲ್ಲಿ ಔಗುಸ್ತನ ಉತ್ತರಾಧಿಕಾರಿಯಾದ ತಿಬೇರಿಯಸ್ ಸೀಸರ (Tiberius Ceaser) ನ ಬಗ್ಗೆ ವಿವರಿಸುತ್ತದೆ: "ಆತನ ಸ್ಥಾನದಲ್ಲಿ ರಾಜ್ಯ ಪದವಿಗೆ ಹಕ್ಕುದಾರನಲ್ಲದ ಒಬ್ಬ ನೀಚನು ಎದ್ದು ನೆಮ್ಮದಿಯ ಕಾಲದಲ್ಲಿ ಬಂದು ನಯನುಡಿಗಳಿಂದ ರಾಜ್ಯವನ್ನು ಪಡೆದುಕೊಳ್ಳುವನು.'' ನಾವಿಲ್ಲಿ ತಿಬೇರಿಯಸ್ (Tiberius) ನ ಚರಿತ್ರೆಯು ಪ್ರವಾದಿಯ ಮಾತುಗಳಿಗೆ ಯಾವ ರೀತಿಯಲ್ಲಿ ಒಪ್ಪಿಗೆಯಾಗುತ್ತದೆ ಎಂಬುದನ್ನು ನೋಡೋಣ :

ವೈಟ್ (White) ಎಂಬುವವರು ಹೇಳುವುದೇನೆಂದರೆ: (Tiberius)ನು ಸಿಂಹಾಸನಾರೂಢನಾದಾಗ ಐವತ್ತೇಳು ವರ್ಷದವನಾಗಿದ್ದನು. ಆತನು ಅದರ ಮುಖ್ಯವಾದ ಪಾಲನೆಯನ್ನು ತನ್ನ ಮೇಲೆ ತೆಗೆದುಕೊಳ್ಳಲು ಬಹಳವಾದ ಅನಿಚ್ಛೆಯನ್ನು ವ್ಯಕ್ತಪಡಿಸಿದ್ದನು .... ಎಲ್ಲಾ ತಡೆಗಳೂ ಈಗ ತೆಗೆಯಲ್ಪಟ್ಟಿದ್ದರೂ, ದುಷ್ಟ ರಾಜನು ತನ್ನ ಕ್ರೂರ ಹಾಗೂ ಭೋಗಾಸಕ್ತಿಯ ಮೋಹಕ್ಕೆ ತಕ್ಕಂತೆ ಸ್ವೇಚ್ಛೆಯಾದ ಆಡಳಿತವನ್ನು ನೀಡಿದನು.

ವಿಲ್ಲಾರ್ಡ್ (Willard) ಎಂಬಾತನು ಹೇಳುವುದೇನೆಂದರೆ: "ಮೊದಲಿಗೆ ಆತನು ನಟನೆ ಮಾಡುವವನಾಗಿದ್ದು ಸಂಯಮದಿಂದ ಆಳಬಹುದೆಂದು ಕಂಡುಬಂದನು. ಆದರೆ, ಬೇಗನೇ ಆತನ ಮುಖವಾಡವು ಬಿದ್ದುಹೋಯಿತು .... ಆತನು ಜನರೆಲ್ಲರ ರಾಜಕೀಯ ಅಧಿಕಾರವನ್ನು ಹಸ್ತಾಂತರಿಸಿದ್ದ ಸೆನೆಟ್‌ನು ನೀತಿಭ್ರಷ್ಟನಾಗಿದ್ದನು ಮತ್ತು ಈ ರೀತಿಯಲ್ಲಿ ಮರ್ಜಿಹಿಡಿಯುವ ತನ್ನ ಕೃತ್ಯಗಳನ್ನು ಮಂಜೂರು ಪಡಿಸಿಕೊಂಡು ಸತತವಾದ ಮಿಥ್ಯಾಪ್ರಶಂಸೆಯ ಧೂಪವನ್ನು ಅವರ ರಸ್ತೆಗಳನ್ನು ರಕ್ತದಿಂದ ತುಂಬಿದಾತನಿಗೆ ಸಮರ್ಪಿಸಿದನು. ಈ ಕೀಳು ವ್ಯಕ್ತಿಯ ಆಡಳಿತ ಕಾಲದಲ್ಲಿಯೇ ನಮ್ಮ ಕರ್ತನಾದ ಯೇಸು ಕ್ರಿಸ್ತನು ಶಿಲುಬೆಗೆ ಜಡಿಯಲ್ಪಟ್ಟನು.

ಈ ಚಿತ್ರಣಗಳು ಪ್ರವಾದಿಯ ವಿವರಣೆಗಳಿಗೆ ಸರಿಯಾಗಿ ಹೊಂದಿಕೊಳ್ಳುತ್ತವೆ, ಮತ್ತು ಮುಂದಿನ ವಚನ 22ರಲ್ಲಿ ಹೀಗೆ ದೃಢಪಡುತ್ತದೆ – ತುಂಬಿತುಳುಕುವ (ಪ್ರವಾಹ) ವ್ಯೂಹಗಳೂ ದೇವರ ನಿಬಂಧನಾಪತಿಯೂ ಅವನ ರಭಸಕ್ಕೆ ಸಿಕ್ಕಿ

ಹೊಡೆದುಕೊಂಡು ಹೋಗಿ ಭಂಗವಾದರು – ಈ ಕಡೆಯ ಹೇಳಿಕೆಯು ಯಾವ ತಪ್ಪುಗಳಿಲ್ಲದೆ ನಮ್ಮ ಕರ್ತನಾದ ಯೇಸುವನ್ನು ಸೂಚಿಸುತ್ತವೆ, ಮೇಲೆ ಇತಿಹಾಸಕಾರನು ಗಮನಿಸಿದಂತೆ ತಿಬೇರಿಯಸ್ (Tiberius)ನ ಆಳ್ವಿಕೆಯಲ್ಲಿ ಆತನ ಪ್ರತಿನಿಧಿಯೂ ಯೂದಾಯದಲ್ಲಿ ರೋಮನ್ ದೇಶಾಧಿಪತಿಯೂ ಆಗಿದ್ದ ಪೊಂತಿ ಪಿಲಾತ ಮತ್ತು ರೋಮಾಯ ಸೈನಿಕರಿಂದ ಯೇಸುವು ಶಿಲುಬೆಗೆ ಹಾಕಲ್ಪಟ್ಟನು.

ಒಕ್ಕೂಟ ಮಂಡಲಿಯು (ಸೆನೆಟ್) ಆತನನ್ನು ಚಕ್ರವರ್ತಿಯೆಂದು ಮಾನ್ಯತೆ ನೀಡಿದ ಮೇಲೆ ತಾನು ಸ್ವಲ್ಪ ಜನರೊಡನೆ ಮೇಲಕ್ಕೇರಿ ಪ್ರಬಲವಾಗುವನೆಂದು ನೆನಸಿ ಆತನು ಕಪಟಯುಕ್ತವಾಗಿ ಕೆಲಸ ಮಾಡಿದನು. [ತಿಬೇರಿಯಸ್ (Tiberius)ನು ಮೊದಲಿಗೆ 10,000 ಪಹರೆ (ಕಾವಲುಪಡೆ) ಯನ್ನು ಹೊಂದಿದ್ದು ನಂತರದಲ್ಲಿ ಅದನ್ನು ದ್ವಿಗುಣಗೊಳಿಸಿದನು. ಈ ಅಲ್ಪ ಸಂಖ್ಯೆಯ ಮಂದಿಯು ಚಕ್ರವರ್ತಿಯ ಅಂಗರಕ್ಷಕರಾಗಿದ್ದು ನಿರಂತರವಾಗಿ ರೋಮಿನಲ್ಲಿಯೇ ಆತನ ನಿಯಂತ್ರಣದಲ್ಲಿಯೇ ಇರುತ್ತಿದ್ದರು. ಇದರಿಂದ ಆತನು ಜನರನ್ನೂ, ಸೆನೆಟ್ಟನ್ನು ಅತಿಯಾಗಿ ಬೆದರಿಸುತ್ತಿದ್ದನು. ಜನಪ್ರಿಯ ಚುನಾವಣೆಗಳನ್ನು, ರಾಜಸಭೆ ಮುಂತಾದವುಗಳನ್ನು ರದ್ದುಗೊಳಿಸಿದನು]. ನೆಮ್ಮದಿಯ ಕಾಲದಲ್ಲಿ ಸಂಸ್ಥಾನದ ಫಲವತ್ತಾದ ಪ್ರದೇಶಗಳ ಮೇಲೆ ನುಗ್ಗುವನು. ಆತನ ತಂದೆ, ತಾತಂದಿರು ಮಾಡದ ಕಾರ್ಯವನ್ನು ಈತನು ಮಾಡುವನು. ಸೂರೆ, ಸುಲಿಗೆ, ಕೊಳ್ಳೆ ಹೊಡೆದವುಗಳನ್ನು ತನ್ನವರಿಗೆ ಚೆಲ್ಲಿಬಿಡುವನು; "ಕೋಟೆಗಳನ್ನು ಹಿಡಿಯುವ ಕುತಂತ್ರಗಳನ್ನು ಕ್ಲುಪ್ತಕಾಲದ ತನಕ ಕಲ್ಪಿಸುತ್ತಿರುವನು" (ವಚನ 23,24).

ಆಗಸ್ಟಸ್ ಮತ್ತು ಆತನ ಉತ್ತರಾಧಿಕಾರಿಗಳ ಕಾರ್ಯನೀತಿಯೆಂದರೆ, ಇನ್ನೂ ಹೆಚ್ಚಿನ ರಾಜ್ಯಗಳ ಮೇಲೆ ವಿಜಯ ಸಾಧಿಸಿ ಅವುಗಳನ್ನು ಕೂಡಿಸಿಕೊಳ್ಳದೆ, ಹಿಂದೆ ಪಡೆದಿದ್ದ ರಾಜ್ಯಗಳ ಮೇಲೆ ಶಾಂತಿಕರವಾಗಿ ನಿಯಂತ್ರಣವನ್ನು ಕಾಪಾಡಿಕೊಳ್ಳುವುದು. ಈ ಹಿಡಿತವನ್ನು ಪಡಕೊಳ್ಳಲು ನೇಮಕವಾದ ದೇಶಾಧಿಪತಿಗಳು ಕೊಳ್ಳೆ ಹೊಡೆದದ್ದನ್ನು ಗಾಂಭೀರ್ಯದಿಂದಲೂ, ಅಧಿಕಾರದಿಂದಲೂ ಭಾಗ ಮಾಡಿಕೊಳ್ಳುವುದು, ಮತ್ತು ಅವರ ಅಧಿಕಾರದ ಅವಧಿಯು ಅವರ ಪ್ರಾಂತ್ಯದ ನೆಮ್ಮದಿಯ ಮೇಲೆ ಮತ್ತು ಸೀಜರನಿಗೆ ಸ್ವಾಮಿನಿಷ್ಠೆ ಮತ್ತು ಕ್ಷಿಪ್ರವಾದ ಕರವಸೂಲಿ ಇವುಗಳನ್ನು ಕಾಪಾಡಿಕೊಳ್ಳುವುದರ ಮೇಲೆ ಅವಲಂಬಿತವಾಗಿತ್ತು. ಮೊದಲಿನಂತೆ ಅವರು ರೋಮಿಗೆ ಕೇವಲ ವಿಜಯಚಿನ್ಹೆಯನ್ನಾಗಿ ಮಾಡಿಕೊಳ್ಳಲು ಲೋಕವನ್ನು ಲೂಟಿ ಮಾಡಿ ಹಾಳುಮಾಡುವುದನ್ನು ಬೆನ್ನುಹತ್ತಲಿಲ್ಲ. ಈ ನಿಪುಣ ಕೌಶಲ್ಯವುಳ್ಳ ರಾಜನೀತಿಯಿಂದಾಗಿ ಮತ್ತು ಈ ರೀತಿಯಲ್ಲಿ "ಕುಯುಕ್ತಿಯನ್ನು ಕಲ್ಪಿಸುವುದರಿಂದ", ರೋಮ್ ಈಗ ತನ್ನ ಸೈನ್ಯವನ್ನು ಅಲ್ಲಿ ಇಲ್ಲಿ ಸ ೦ ತ ಾ ಡಿ ಸಿ ದ ಕಿ ೦ ತ ಹೆಚ್ಚಾಗಿ ಈ ಪ್ರಪಂಚವನ್ನು ಬಹಳಷ್ಟು ಗಣನೀಯವಾದ ವರ್ಚಸ್ಸಿನೊಂದಿಗೆ ಸಂಪೂರ್ಣವಾಗಿಯೂ ಆಳುವಂತಾಯಿತು.

ಪ್ರವಾದನೆಯು ಗುರುತಿಸಿ ಹೇಳುತ್ತಿರುವಾಗ ಮತ್ತು ಆಗಸ್ಟಸ್ ಮತ್ತು ತಿಬೇರಿಯಸ್ ಇವರುಗಳ ಪ್ರಕರಣಗಳಲ್ಲಿ ವಿವರಗಳನ್ನು ಬಹುತೇಕ ವೈಯಕ್ತೀಕರಣ ಮಾಡಿರುವ ಪ್ರಯುಕ್ತ ಇವುಗಳು ಸಾಧಿಸುವ ಸಾಧನಗಳು ಎಂಬುದನ್ನು ಗ್ರಹಿಸಿಕೊಳ್ಳಬೇಕು. ಯಶಸ್ವಿಯಾಗಿ ನೆರವೇರಬೇಕಾಗಿರುವ ಅಂತ್ಯವು ವಿಶ್ವದ ರಾಜ್ಯಗಳನ್ನು ಗ್ರೀಸಿನಿಂದ ರೋಮಿಗೆ, ಚಕ್ರಾಧಿಪತ್ಯದ ನಾಲ್ಕು ಭಾಗಗಳನ್ನು ಪ್ರತಿನಿಧಿಸುವ ಅಲೆಗ್ಸಾಂಡರ್ ಮಹಾಶಯನ ನಾಲ್ಕು ಸೇನಾಪತಿಗಳಿಂದ (ಗ್ರೀಕಿನ ಹೋತದ ನಾಲ್ಕು ಕೊಂಬುಗಳು – ದಾನಿ. 8:8) ರೋಮ್ ಸಾಮ್ರಾಜ್ಯಕ್ಕೆ ವರ್ಗಾಯಿಸುವ ಕಾಲವನ್ನು ಗುರುತಿಸುವುದು. ಅದು ಆ ಸಮಯದಲ್ಲಿ ಗ್ರೀಸಿನ ಭಾಗವಾಗಿತ್ತು. ಅಲೆಗ್ಸಾಂಡರನ ಉತ್ತರಾಧಿಕಾರಿಗಳಾದ ಈ ನಾಲ್ಕು ಮಂದಿ ಸೇನಾಧಿಪತಿಗಳು ಪ್ರವಾದನೆಗಳಿಗಿಂತ ಕಡಿಮೆಯಾಗಿ ಚರಿತ್ರೆಯಲ್ಲಿ ಗುರುತಿಸಲ್ಪಟ್ಟಿಲ್ಲ* ಎಂಬುದಾಗಿ ಇತಿಹಾಸಕಾರರು** ಹೇಳುತ್ತಾರೆ.

ಗ್ರೀಕ್ ಸಾಮ್ರಾಜ್ಯವು ಈಗ ನಾಲ್ಕು ಭಾಗಗಳಾಗಿದೆ, ಒಂದೊಂದು ಭಾಗವನ್ನು ಪ್ರತಿಯೊಬ್ಬ ಸೇನಾಧಿಪತಿಯ ವಶಕ್ಕೆ ನೀಡಲಾಗಿದೆ ಮತ್ತು ಅವರು ಮಂಡಳಿಯನ್ನು ಮಾಡಿಕೊಂಡಿರುತ್ತಾರೆ. (1) ಟಾಲೆಮಿ (Ptolemy) ಎಂಬಾತನು ಐಗುಪ್ತದಲ್ಲಿ, (2) ಸೆಲ್ಯೂಕಸ್ (Seleucus) ಎಂಬಾತನು ಸಿರಿಯಾ ಮತ್ತು ಉತ್ತರ ಏಷ್ಯಾದಲ್ಲಿ; (3) ಲೈಸಿಮೆಚಸ್ (Lysimachus) ಎಂಬಾತನು ತಾಸ್‌ನಲ್ಲಿ ಮತ್ತು ಏಷ್ಯಾ ಮೈನರ್‌ನಲ್ಲಿ ಆದಷ್ಟು ವಿಸ್ತಾರವಾಗಿ ತಾರಸ್ Taurisವರೆಗೆ ಮತ್ತು (4) ಕ್ಯಾಸೆಂಡರ್ (Cassander) ಎಂಬಾತನು ಮ್ಯಾಸೆಡೊನಿಯಾದಲ್ಲಿ ತನ್ನ ಪಾಲು ತೆಗೆದುಕೊಳ್ಳುವ

* ಈ ನಾಲ್ವರ ಮಧ್ಯೆ ಇರುವ ಭಿನ್ನತೆಯನ್ನು ದಾನಿ. 8:8 ಮತ್ತು 11:4,5ರಲ್ಲಿ ಉಲ್ಲೇಖಿಸಲಾಗಿದೆ.

** ವಿಲ್ಲಾರ್ಡ್‌ರವರ ವಿಶ್ವ ಇತಿಹಾಸ, ಪುಟ 100.

ಹಾಗೆ ರಾಜೋಚಿತ ಅಧಿಕಾರವನ್ನು ಹೊಂದಿ ಕೊಂಡಿದ್ದರು.

ಈ ವಿಭಜನೆಯಲ್ಲಿ ಇಟಲಿಯು ಕ್ಯಾಸೆಂಡರ್ (Cassander)ನ ಇಲಾಖೆಗೆ ಸೇರಿತ್ತು, ಅದು ಉತ್ತರ ವಿಭಾಗವಾಗಿದ್ದು ಉತ್ತರದ ಅರಸನನ್ನು ಅಧಿಕಾರಕ್ಕೆ ಗೊತ್ತುಪಡಿಸಿತ್ತು. ಅದೇ ಸಮಯದಲ್ಲಿ ಐಗುಪ್ತವು ದಕ್ಷಿಣ ವಿಭಾಗಕ್ಕೆ ಸೇರಿದ್ದು ಅದು ದಕ್ಷಿಣದ ಅರಸನ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಮೇಣವಾಗಿ ರೋಮಿನ ಪ್ರಭಾವವು ಹೆಚ್ಚಾಗುತ್ತಿತ್ತು ಮತ್ತು ಮೂಲದಲ್ಲಿ ಸೆಲ್ಯೂಕಸ್ (Selecucus), ಲೈಸಿಮೆಚಸ್ (Lysimachus) ಮತ್ತು ಕ್ಯಾಸೆಂಡರ್ (Cassander) ಇವರುಗಳ ವಶದಲ್ಲಿದ್ದ ಉತ್ತರ ಭಾಗದ ಪ್ರದೇಶಗಳನ್ನು ತುಂಡು ತುಂಡಾಗಿ ರೋಮಿನ ವಶಕ್ಕೆ ಸೇರಿಸಿಕೊಳ್ಳಲಾಯಿತು ಮತ್ತು ಅದು ದಕ್ಷಿಣದ ಭಾಗವಾಗಿತ್ತು. ಐಗುಪ್ತವು ಮಾತ್ರವೇ ಉಳಿದುಕೊಂಡಿತು ದಕ್ಷಿಣ ಭಾಗ. ಮೇಲೆ ಹೇಳಿದಂತೆ, ದಕ್ಷಿಣ ಭಾಗವಾದ ಐಗುಪ್ತದ ಅರಸನು ಕ್ಲಿಯೋಪಾತ್ರ, ಆಂಟೊನಿ ಮತ್ತು ಆಗಸ್ಟಸ್ ಸೀಜರ್ ಇವರುಗಳ ಕಾಲದಲ್ಲಿ ಭಾಗಶಃ ಕ್ಲಿಯೋಪಾತ್ರಳ ತಂದೆಯ ಕೊನೆ ಇಚ್ಛೆಯಂತೆ ಉತ್ತರ ಭಾಗದ ಅಧಿಕಾರಕ್ಕೆ ವಶವಾದನು. ಆತನು ತನ್ನ ಮಕ್ಕಳು ಎಳೆಯಪ್ರಾಯದ ವರಾಗಿರುವಾಗಲು ಸಾಯುವ ಸ್ಥಿತಿಯಲ್ಲಿದ್ದು ತನ್ನ ರಾಜ್ಯವನ್ನು ರೋಮನ್ ಸೆನೆಟ್ಟಿನ ಸಂರಕ್ಷಣೆಗೆ ಒಪ್ಪಿಸಿಕೊಟ್ಟನು. ಮಾರ್ಕ್ ಆಂಟೋನಿಯ ಸೋಲು ಸಹ ಭಾಗಶಃ ಇದಕ್ಕೆ ಕಾರಣವಾಗಿತ್ತು. ಸ್ವಲ್ಪ ಸಮಯ, ನಿಜವಾಗಿಯೂ ಅವು ದಕ್ಷಿಣ ಭಾಗವಾದ ಐಗುಪ್ತದ ಅರಸನು ಉತ್ತರದ ರಾಜ್ಯವಾದ ರೋಮಿನ ಅರಸನಂತೆಯೇ ಬಲಶಾಲಿಯಾಗಿದ್ದನು. ಇತಿಹಾಸಕಾರರು ಹೇಳುವಂತೆ ಅದು ಆಗಿನ ಕಾಲದ ಮಹಾ ವಾಣಿಜ್ಯ ರಾಷ್ಟ್ರವಾಗಿತ್ತು. ಅದರಲ್ಲಿ 33,000 ನಗರಗಳಿದ್ದವು, ಅದರ ವಾರ್ಷಿಕ ಆದಾಯದ ಮೊತ್ತ 14,800 ಬೆಳ್ಳಿಯ ತಲಾಂತುಗಳು ಅಂದರೆ ಸುಮಾರು 2 ಕೋಟಿ (20,000,000) ಡಾಲರುಗಳು.

ಪ್ರವಾದನೆಯ ಜ್ಞಾನ ಮತ್ತು ಮಾದರಿಯನ್ನು ಗ್ರಹಿಸಿ, ನಾವು ಉತ್ತರದ ಅರಸನು ರೋಮನ್ ಚಕ್ರಾಧಿಪತ್ಯದ ಪ್ರತಿನಿಧಿ ಮತ್ತು ದಕ್ಷಿಣದ ಅರಸನು ದಕ್ಷಿಣದ ಚಕ್ರಾಧಿಪತ್ಯದ ಪ್ರತಿನಿಧಿಯ ಹೊರತುಪಡಿಸಿ ಈ ಸಾಮ್ರಾಜ್ಯಗಳ ಸಾಮ್ರಾಟರ ವಿವರವಾದ, ವೈಯಕ್ತಿಕವಾದ ವಿವರಗಳನ್ನು ನಿರೀಕ್ಷಿಸಬಾರದು. ಈ ವಿವರಣೆಯೊಂದಿಗೆ ನಾವು ಪ್ರವಾದನೆಯ ಬಗ್ಗೆ ಮುಂದುವರೆಯುತ್ತೇವೆ.

ವಚನ 25 : "ಅವನು (ರೋಮ್) ದೊಡ್ಡ ದಂಡೆತ್ತಿ ದಕ್ಷಿಣ ರಾಜನಿಗೆ (ಐಗುಪ್ತ) ವಿರೋಧವಾಗಿ ತನ್ನ ರಾಜ್ಯದ ಬಲವನ್ನೆಲ್ಲಾ ಕೂಡಿಸಿ ಧೈರ್ಯ ತಂದುಕೊಳ್ಳಲು ದಕ್ಷಿಣ ರಾಜನು ಅತ್ಯಧಿಕ ಬಲವುಳ್ಳ ಮಹಾಸೈನ್ಯ ಸಮೇತನಾಗಿ ಯುದ್ಧಕ್ಕೆ ಹೊರಡುವನು; ಆದರೆ ನಿಲ್ಲಲಾರನು; ಅವನು ಸೋಲುವ ಹಾಗೆ (ದ್ರೋಹದಿಂದ) ಕುಯುಕ್ತಿಗಳನ್ನು ಕಲ್ಪಿಸುವರು".

ಆಗಸ್ಟಸ್ ಸೀಸರನು ಐಗುಪ್ತವನ್ನು ರೋಮನ್ ಪ್ರಾಂತ್ಯವನ್ನಾಗಿ ಮಾಡಿಕೊಂಡ ವರ್ಷ ಕ್ರಿ.ಪೂ. 30ರಿಂದ, ಎರಡು ರಾಜ್ಯಗಳ ನಡುವೆ ಕ್ಲಿಯೋಪಾತ್ರಳ ಸಂತತಿಯವಳಾದ ರಾಣಿ ಜೆನೊಬಿಯ (Zenobia) ಎಂಬಾಕೆಯು ಸುಮಾರು 269 (ಕ್ರಿ.ಶ.) ಅದರ ನಿಯಂತ್ರಣವನ್ನು ಬಯಸಿ ಕಾರ್ಯಾಚರಣೆ ನಡೆಸುವವರೆಗೆ ಯಾವುದೇ ಕಾದಾಟ ನಡೆದಿರಲಿಲ್ಲ. ಆಕೆಯ ಆಡಳಿತ ಕಾಲ ಸಂಕ್ಷಿಪ್ತವಾದುದು; ರೋಮಿನ ಚಕ್ರವರ್ತಿ ಔರೇಲಿಯನ್ (Aurelian) ಎಂಬಾತನು ಆಕೆಯನ್ನು 272ರಲ್ಲಿ ಸೋಲಿಸಿದನು. ಇತಿಹಾಸಕಾರರು ಹೇಳುವಂತೆ "ಸಿರಿಯಾ, ಐಗುಪ್ತ ಮತ್ತು ಏಷ್ಯಾ ಮೈನರ್ ಪಾಲ್ಮೈರಾದ (Palmyra)ದ ರಾಣಿಯಾದ ಜೆನೊಬಿಯಾ (Zenobia)ಳ ಪ್ರಭುತ್ವವನ್ನು ಒಪ್ಪಿಕೊಂಡಿದ್ದವು. ಆದರೆ ಆಕೆಯು ಇನ್ನೂ ಆ ಕಾಲದ ಮೊದಲ ನಾಯಕನ ಮೇಲ್ಮಟ್ಟದ ಶಕ್ತಿ ಮತ್ತು ಸೈನಿಕ ಕೌಶಲ್ಯವನ್ನು ನಿಭಾಯಿಸಬೇಕಾಗಿತ್ತು. ಹೀಗಿದ್ದರೂ ಆಕೆಯ ಬಗ್ಗೆ ಔರೇಲಿಯನ್ (Aurelian) ಬರೆಯುವುದೇನೆಂದರೆ – "ರೋಮಿನ ಜನರು ಯುದ್ಧ ತಿರಸ್ಕಾರದಲ್ಲಿ ಮಾತನಾಡುತ್ತಾರೆ. ನಾನು ಅದನ್ನು ಒಬ್ಬ ಸ್ತ್ರೀಯ ವಿರುದ್ಧ ಯುದ್ಧ ನಡೆಸುವುದು ಎಂದೆಣಿಸುತ್ತೇನೆ. ಅವರಿಗೆ ಜೆನೊಬಿಯಾ (Zenobia)ಳ ಸ್ವಭಾವ/ನಡತೆಯ ಮತ್ತು ಪ್ರಖ್ಯಾತಿಯ ಬಗ್ಗೆ ತಿಳುವಳಿಕೆ ಇಲ್ಲ. ಆಕೆಯ ಯುದ್ಧರೀತಿಯ ಸಿದ್ಧತೆಗಳು ಮತ್ತು ಜೀವದ ಪರಿವೆಯಿಲ್ಲದ ಧೈರ್ಯದ ಬಗ್ಗೆ ವಿವರಿಸಲು ಸಾಧ್ಯವಿಲ್ಲ". ಐಗುಪ್ತದಲ್ಲಿ ಜೆನೊಬಿಯಾ (Zenobia)ಳ ಮಿತ್ರ ಫರ್ಮಸ್ (Firmus) ಎಂಬಾತನು ತ್ವರಿತವಾಗಿ ಸೋಲಿಸಲ್ಪಟ್ಟನು ಮತ್ತು ಕೊಲ್ಲಲ್ಪಟ್ಟನು ಮತ್ತು ಔರೇಲಿಯನ್ (Aurelian) ವಚನ 28 ರಲ್ಲಿ ಹೇಳಿರುವಂತೆ "ಉತ್ತರ ರಾಜನು ಬಹು ಆಸ್ತಿಯನ್ನು ಕೊಳ್ಳೆಹೊಡೆದು ಗೌರವದೊಡನೆ ಸ್ವದೇಶಕ್ಕೆ ಹಿಂತಿರುಗುವನು. ಆತನ ಮನಸ್ಸು ಪರಿಶುದ್ಧ ಪವಿತ್ರ ನಿಬಂಧನೆಗೆ ವಿರುದ್ಧವಾಗಿರುವುದು ಮತ್ತು ಆತನು ಅನೇಕ ಸಾಹಸಕಾರ್ಯಗಳನ್ನು ಮಾಡುವಷ್ಟೂ ಮಾಡಿ ಮತ್ತೆ ತನ್ನ ಸ್ವದೇಶಕ್ಕೆ ಹಿಂತಿರುಗುವನು".

ಗಿಬ್ಬೋನನ ವರದಿಯಲ್ಲಿ ಆತನು ಕೊಳ್ಳೆಹೊಡೆದ ಸಂಪತ್ತಿನ ಬಗ್ಗೆ ಒಂದು ನಿದರ್ಶನವಾಗಿ ರೋಮಿನ ರಸ್ತೆಗಳಲ್ಲಿ ಆತನ ವಿಜಯ ಯಾತ್ರೆಯನ್ನು ವಿವರಣೆಗಳನ್ನು ಗಮನಿಸಬೇಕಾಗುತ್ತದೆ. ಆತನು ಹೇಳುವುದೇನೆಂದರೆ:

"ಏಷ್ಯಾದ ಸಂಪತ್ತು, ಗೆದ್ದ ರಾಜ್ಯಗಳ ಯುದ್ಧ ಸಾಮಗ್ರಿಗಳೂ, ಲಾಂಛನಗಳೂ ಮತ್ತು ಸಿರಿಯಾ ರಾಣಿಯ ಸೊಗಸಾದ ಬಟ್ಟಲುಗಳು ಹಾಗೂ ವಸ್ತ್ರಾಗಾರಗಳು ಇವುಗಳನ್ನು ನಿಶ್ಚಿತವಾದ ಸಮರೂಪತೆಯಲ್ಲಿ ಅಥವಾ ಕಲಾತ್ಮಕವಾದ ಅಸ್ತವ್ಯಸ್ತವಾಗಿ ಹೊಂದಿಸಲಾಯಿತು ... ಜೆನೊಬಿಯಾ (Zenobia)ದ ಸುಂದರವಾದ ಆಕಾರವನ್ನು ಬಂಗಾರದ ಬಂಧನದಲ್ಲಿ ಬಂಧಿಸಲಾಯಿತು; ಆಕೆಯ ಕುತ್ತಿಗೆಯ ಸುತ್ತ ಆವರಿಸಿದ್ದ ಬಂಗಾರದ ಸರಪಣಿಯ ಭಾರವನ್ನು ಗುಲಾಮರು ಹೊರುತ್ತಿದ್ದರು. ಆಕೆಯು ಆಭರಣಗಳ ಸಹಿಸಲಾರದ ಭಾರದಿಂದ ಆಕೆ ಹೆಚ್ಚುಕಡಿಮೆ ಪ್ರಜ್ಞಾಶೂನ್ಯಳಾಗಿದ್ದಳು. ಆಕೆಯು ಅದ್ಭುತವಾದ ರಥದಲ್ಲಿ ಕುಳಿತು ಒಮ್ಮೆ ರೋಮಿನ ದ್ವಾರಗಳನ್ನು ಪ್ರವೇಶಿಸುವ ನಿರೀಕ್ಷೆ ಇಟ್ಟುಕೊಂಡಿದ್ದಳು, ಅದರ ಹಿಂದೆ ಕಾಲ್ನಡಿಗೆಯಲ್ಲಿ ನಡೆದಳು".

ಆತನು ಹಿಂದಿರುಗಿದ ಮೇಲೆ ಆತನ ಹೃದಯವು ಪವಿತ್ರ ನಿಬಂಧನೆಗಳ ಕ್ರೈಸ್ತತ್ವ ವಿರುದ್ಧವಾಗಿರುತ್ತದೆಂಬ ಪ್ರವಾದಿಯ ಹೇಳಿಕೆಗೆ Mosheim ಹೇಳುವುದೇನೆಂದರೆ :

"ಔರೇಲಿಯನ್‌ನು (Aurelian) ಮಿತಿಮೀರಿದ ವಿಗ್ರಹಾರಾಧನೆಗೆ ಒಳಪಟ್ಟವನೂ ಮತ್ತು ಕ್ರೈಸ್ತರೆಂದರೆ ಬಲವಾದ ತಿರಸ್ಕಾರವಿದ್ದವನಾದರೂ ನಾಲ್ಕು ವರ್ಷಗಳ ಕಾಲ ಅವರನ್ನು ಹಿಂಸಿಸುವ ಯಾವುದೇ ಹಂಚಿಕೆಯನ್ನು ಯಾವ ವಂಶದಲ್ಲಿಯೂ ಮಾಡಲಿಲ್ಲ. ಆದರೆ, ಆತನ ಆಳ್ವಿಕೆಯ ಐದನೆಯ ವರ್ಷದಲ್ಲಿ, ಆತನ ಸ್ವಂತ ಮೂಢನಂಬಿಕೆಗಳಿಂದಲೋ, ಅಥವಾ ಇತರರ ಮೂಢನಂಬಿಕೆಗಳಿಂದಲೋ ಉತ್ತೇಜಿತನಾಗಿ ಆತನು ಅವರನ್ನು ಹಿಂಸಿಸಲು ಸಿದ್ಧತೆಮಾಡಿಕೊಂಡನು; ಮತ್ತು ಆತನು ಇನ್ನೂ ಬದುಕುತ್ತಿದ್ದರೆ, ಆತನ ಪ್ರವೃತ್ತಿಯು ಬಹಳಷ್ಟು ಕ್ರೂರವೂ ಮತ್ತು ಭಯಾನಕವೂ ಆಗಿರುತ್ತಿತ್ತು. ಆತನು ಬಹಳಷ್ಟು ಮಟ್ಟಿಗೆ ಪೂಜಾರಿಗಳಿಂದ, ದೇವರುಗಳನ್ನು ಮೆಚ್ಚುವವರಿಂದ ಪ್ರಭಾವಿತ ನಾಗುತ್ತಿದ್ದರೆ, ಆತನ ಹಿಂಸೆಗಳು ಹಿಂದೆ ಇರುವವರಿಗಿಂತಲೂ ಬಹಳ ಹೆಚ್ಚು ಕ್ರೂರ ವಾಗಿರುತ್ತಿದ್ದವು. ಆದರೆ ಆತನ ನೂತನ ರಾಜಾಜ್ಞೆಗಳು ಎಲ್ಲಾ ಪ್ರಾಂತ್ಯಗಳನ್ನು ಮುಟ್ಟುವ ಮೊದಲು ಆತನನ್ನು ಹತ್ಯೆಗೈಯ್ಯಲಾಯಿತು; ಆದುದರಿಂದ ಕೆಲವು ಮಂದಿ ಕ್ರೈಸ್ತರು ಮಾತ್ರವೇ ಆತನ ಅಡಿಯಲ್ಲಿ ತಮ್ಮ ಭಕ್ತಿಗೋಸ್ಕರ ಕಷ್ಟ ಅನುಭವಿಸಿದರು".*

ಕ್ರೈಸ್ತಧರ್ಮದ ವಿರೋಧವಾದ ಈ ಹಿಂಸೆಪಡಿಸುವ ಉತ್ಸಾಹವು ಪ್ರವಾದನೆಯನ್ನು ಸೂಚಿಸಿರುವಂತೆ ಆತನು ತನ್ನ ವಿಜಯದಿಂದ ಹಿಂತಿರುಗಿದ ಮೇಲೆ ಪ್ರಕಟವಾಯಿತು. "ಔರೇಲಿಯನ್ (Aurelian) ಎಂಬುವವನು ಸೂರ್ಯನ ಆರಾಧಕನಾಗಿದ್ದನು. ಆತನು ಜೆನೊಬಿಯಾ (Zenobia) ಮೇಲಿನ ತನ್ನ ವಿಜಯಕ್ಕಾಗಿ ಸೂರ್ಯನನ್ನು ಪ್ರಶಂಸಿಸಿದನು. ಕದನವು ಮುಗಿದಕೂಡಲೇ ತನ್ನ ಕೃಪೆಯನ್ನು ಒಪ್ಪಿಕೊಳ್ಳುವಂತೆ ಆತನು ಸೂರ್ಯನ ಭವ್ಯವಾದ ದೇವಾಲಯವನ್ನು ದುರಸ್ತಿಗೊಳಿಸಿದನು. ಕ್ರೈಸ್ತರು ಸೂರ್ಯನನ್ನು ಆರಾಧಿಸುವುದು ಅನರ್ಹವಾದುದೆಂದು ತಿಳಿದಿರುವದರಿಂದಾಗಿ, ಅವರು ಈ ಸೂರ್ಯನ ಆರಾಧನೆಯಲ್ಲಿ ಭಾಗವಹಿಸಲು ನಿರಾಕರಿಸಿರುವುದು ಬಹುಶಃ ಆತನ ಶೀಘ್ರವಾದ ಉಗ್ರ ವಿರೋಧಕ್ಕೆ ಕಾರಣವಾಗಿರಬಹುದೆಂದು ಭಾವಿಸಲಾಗಿದೆ.

ವಚನ 26: ಹೌದು, "ಮೃಷ್ಟಾನ್ನವನ್ನು ತಿನ್ನುವವರೇ ಅವನನ್ನು ಭಂಗಪಡಿಸುವರು, ಉತ್ತರ ರಾಜನ ಸೈನ್ಯವು ತುಂಬಿ ತುಳುಕುವುದು; ಬಹು ಜನರು ಹತರಾಗಿ ಬೀಳುವರು". "ಔರೇಲಿಯನ್ (Aurelian)ನು ತನ್ನ ಸ್ವಂತ ಸೇನಾಧಿಕಾರಿಗಳಿಂದಲೇ ಹತ್ಯೆಮಾಡಲ್ಪಟ್ಟನು; ಅನೇಕರು ಹತ್ಯರಾದರೂ ಆತನ ಸೈನ್ಯವು ಯಶಸ್ವಿಯಾಯಿತು".

ವಚನ 27 : ಈ ವಚನವು ರೋಮಿಗಾಗಾಲೀ, ಐಗುಪ್ತಕ್ಕಾಗಲೀ ಅನ್ವಯವಾಗುವುದಿಲ್ಲ ಆದರೆ ಇದು ರೋಮನ್ ಸಾಮ್ರಾಜ್ಯದ ಇಬ್ಬರು ಅರಸರುಗಳಿಗೆ ಅಥವಾ ಅಧಿಕಾರಕ್ಕೆ ಅನ್ವಯವಾಗುತ್ತದೆ, ಸಾರ್ವಭೌಮಿಕ ಅಧಿಕಾರವು ಕ್ರಮೇಣವಾಗಿ ಸತ್ತುಹೋಗುತ್ತದೆ ಮತ್ತು ಕ್ರೈಸ್ತ ಪಾದ್ರಿಗಳ ಅಧಿಕಾರವು ನಿಧಾನವಾಗಿ ಜೀವ ಮತ್ತು ಮಹತ್ವಾಕಾಂಕ್ಷೆಗೆ ಬರುವುದು. ಪ್ರತಿಯೊಬ್ಬರೂ ತಮ್ಮ ಸ್ವಾರ್ಥಕ್ಕಾಗಿ ಅಂತಹ ಉದ್ದೇಶವನ್ನು ನಿರಾಕರಿಸುತ್ತಲೇ ಮತ್ತೊಬ್ಬರನ್ನು ಉಪಯೋಗಿಸಬಯಸುವರು. ಹೀಗೆಂದು ಓದಬಹುದು: "ಆ ಇಬ್ಬರು ರಾಜರು (ಒಬ್ಬರಿಗೊಬ್ಬರು) ಕೇಡಿನ ಮನಸ್ಸುಳ್ಳವರಾಗಿ ಸಹಪಂಕ್ತಿಯಲ್ಲಿ ಸುಳ್ಳು ಸುಳ್ಳು ಮಾತಾಡಿಕೊಳ್ಳುವರು. ಆದರೆ ಏನೂ ಸಾಗದು. ಪರಿಣಾಮವು ಕ್ಲುಪ್ತಕಾಲದಲ್ಲೇ

* History of Christianity : Vol. II, page 101

ನೆರವೇರುವುದು". ಅಥವಾ ಈ ಆಲೋಚನೆಯನ್ನು ಇನ್ನೂ ಹೆಚ್ಚು ಸರಳವಾಗಿ ಹೇಳುವಂತೆ, ಖಚಿತವಾದ 1260 ವರ್ಷಗಳು ಪೋಪನ ಅಧಿಕಾರದವರಿಂದ ಹಿಂಸೆಪಡಿಸುವುದಕ್ಕಾಗಿ ದೇವರಿಂದ ಮೀಸಲಾಗಿಟ್ಟಿರುವ ಅವಧಿಯಾಗಿದೆ; ಹೀಗಾಗಿ ಕ್ರೈಸ್ತ ಪಾದ್ರಿಗಳ ಮತ್ತು ನಾಗರೀಕ ಅಧಿಕಾರದ ನಡುವಣ ಅನ್ಯೋನ್ಯತೆ ಅಥವಾ ಒಕ್ಕೂಟವಾಗಲಿ ಕೈಗೂಡುವುದಿಲ್ಲ, ಯಾಕೆಂದರೆ, ಆ ದಿನದಿಂದ ಎಣಿಸಲಾದ 1260 ವರ್ಷಗಳು ಬೇಗನೇ ಮುಗಿಯಲಿದೆ. ಹೀಗಾಗಿ ಅದನ್ನು ಮುಂದಕ್ಕೆ ಹಾಕಬೇಕು, ಅಥವಾ ತಡೆಹಿಡಿಯಬೇಕು, ಮತ್ತು ಅದು ಕ್ರಮೇಣವಾಗಿ ಇಟಲಿಯು ಚಕ್ರಾಧಿಪತ್ಯವು ನಾಶವಾಗುವವರೆಗೆ ಬರಲು ಬಿಡಬೇಕು. ನಾವು ಕ್ರೈಸ್ತ ಸಭಾ ಚರಿತ್ರೆಯಲ್ಲಿ ರೋಮನ್ ಚಕ್ರಾಧಿಪತ್ಯದಲ್ಲಿ ಕ್ರೈಸ್ತ ಬಿಷೋಪರ ಅಧಿಕಾರಕ್ಕಾಗಿ ನಡೆದ ಒಳಸಂಚುಗಳ ಬಗ್ಗೆ ನೋಡಬಹುದು; ಮತ್ತು ಸ್ಪಷ್ಟವಾಗಿ ಚಕ್ರವರ್ತಿಗಳು ನೂತನ ಧರ್ಮವನ್ನು ಮಾನ್ಯಗೊಳಿಸುವುದರಿಂದ ತಮಗೆ ಹೆಚ್ಚಿನ ಅನುಕೂಲತೆಗಳು ಆಗುವುದಿಲ್ಲವೇನೋ ಎಂಬ ಬಗ್ಗೆ ಹೆಚ್ಚಾಗಿ ಚರ್ಚಿಸಿದರು. ಸುವ್ಯಕ್ತವಾಗಿ ಕಾನ್ಸ್ಟಂಟೈನನು ಪಕ್ವ ಸ್ಥಿತಿಗೆ ಬಂದಾಗ ಇತರರು ಹೆಚ್ಚು ಕಡಿಮೆ ಯೋಚಿಸದಿರುವಾಗ ನಿಗದಿಪಡಿಸಿದನು. ಆದರೆ ಕಾನ್ಸ್ಟಂಟೈನನಿಗೆ ಸಹ ಚರ್ಚಿನ ಮತ್ತು ದೇಶದ ಶಕ್ತಿಗಳ ಒಟ್ಟುಗೂಡಿಸುವಿಕೆಯನ್ನು ಒಮ್ಮೆಲೇ ನೆರವೇರಿಸಲು ಜನರ ಕೋಪದಿಂದ ಅಡಚಣೆಯುಂಟಾಯಿತು.

ನಾವು ವಚನ 29 ಮತ್ತು 30ನ್ನು ಹೇಳಿಕೆಯ ಸಮಯವನ್ನು ಮರೆಮಾಡಿ ಕ್ರಮವನ್ನು ತಡೆಗೊಳಿಸುವ ಉಪವಾಕ್ಯಗಳನ್ನಾಗಿ ಗಣನೆಗೆ ತೆಗೆದುಕೊಳ್ಳುತ್ತೇವೆ. ಮತ್ತು ಅವುಗಳು ರೋಮ್ ಸಾಮ್ರಾಜ್ಯದ ಮತ್ತು ಐಗುಪ್ತದ ಪ್ರತಿನಿಧಿಗಳ ನಡುವೆ ಅನಂತರದ ದೂರದ ಭವಿಷ್ಯದಲ್ಲಿ ಘರ್ಷಣೆಯುಂಟುಮಾಡುವಂತೆ ಅನ್ವಯಿಸಲಾಗುವುದು ಎಂದು ನಂಬುತ್ತೇವೆ. ಇವರುಗಳ ನಡುವೆ ಒಂದನ್ನು ಹೊರತುಪಡಿಸಿ ಬೇರೆ ಯಾವುದೇ ಘರ್ಷಣೆ ಇರುವುದಿಲ್ಲ. ಅದೇನೆಂದರೆ, ಅದು "ನಿಗದಿತವಾದ ಸಮಯದಲ್ಲಿ" (the time appointed) – 1799ರ ಅಂತಿಮ ಸಮಯದಲ್ಲಿ ಆಗುವಂತದು. ಈ ಕಾರಣದಿಂದ ನಾವು ಈ ವಾಕ್ಯಗಳ ಪರೀಕ್ಷೆಯನ್ನು ವಚನ 40–45 ರಲ್ಲಿ ವಿವರಿಸಿರುವ ಅವುಗಳ ನಡುವಣ ಕಡೆಯ ಕದನದವರೆಗೆ ಬಿಟ್ಟುಬಿಡುತ್ತೇವೆ.

31ನೇ ವಚನವು 27ನೇ ವಚನದ ಆಲೋಚನೆಗೆ ಹೊಂದಾಣಿಕೆಯಾಗುತ್ತದೆ ಮತ್ತು ನಾವು ಇದನ್ನು ರೋಮ್ ಚಕ್ರಾಧಿಪತ್ಯ ಮತ್ತು ಪೋಪನ ಅಧಿಕಾರ ಈ ಎರಡು ಶಕ್ತಿಶಾಲಿ ಅಧಿಕಾರಗಳ ಹೆಚ್ಚಿನ ಸಫಲತೆ ಹೊಂದಿರುವವರ ಬಗ್ಗೆ ಉಲ್ಲೇಖಿಸುತ್ತೇವೆ – ಪೋಪನ ಅಧಿಕಾರ. ಔರೇಲಿಯನ್ (Aurelian) ವರೆಗೆ ಗಮನಾರ್ಹ ವ್ಯಕ್ತಿಗಳ ಮೂಲಕ ಚರಿತ್ರೆಯನ್ನು ಪತ್ತೆಹಚ್ಚಿ ಮತ್ತು ನಾಗರೀಕ ಮತ್ತು ಕ್ರೈಸ್ತ ಸಭೆ ಎಂಬ ಎರಡು ಎದುರಾಳಿ ಆಡಳಿತಗಳಿಗೆ ನಮ್ಮನ್ನು ಪರಿಚಯಿಸಿದ ನಂತರದಲ್ಲಿ – ಸ್ವಲ್ಪ ಕಾಲದ ನಂತರ ಉದಯಿಸಿದ ಪೋಪನ ಅಧಿಕಾರದ ವರ್ಚಸ್ಸು, ಅದರ ಗುಣಲಕ್ಷಣಗಳು, ಅದರ ಕಾರ್ಯಗಳು ದೇವರ ಸತ್ಯ ಮತ್ತು ಸಭೆಯ ಬಗ್ಗೆ ಎತ್ತಿ ಹಿಡಿಯುತ್ತದೆ. ಇವುಗಳನ್ನು ನಂತರದಲ್ಲಿ ಅವುಗಳು ವಿವಿಧ ಪೋಪರುಗಳು ಅಥವಾ ಪ್ರಮುಖರ ಅನೇಕ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳದೆ, ಅದು ಒಂದು ಅರಸನ ಅಥವಾ ಅಧಿಕಾರವನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಗಮನಿಸುತ್ತೇವೆ. ನಾಗರೀಕ ಮತ್ತು ಧಾರ್ಮಿಕ ಆಡಳಿತಗಾರರ ಚರ್ಚೆಯಲ್ಲಿ ಪೋಪನ ಅಧಿಕಾರವು ಜಯಶಾಲಿಯಾದುದು ಎಂಬುದನ್ನು ನಾವು ಅರಿತಿದ್ದೇವೆ. ಮತ್ತು ಪ್ರವಾದನೆಯು ಇಂತಿದೆ – "ಅವನು ಕೂಡಿಸುವ ಸೈನ್ಯವು ಆಶ್ರಯದುರ್ಗವಾದ ಪವಿತ್ರಾಲಯವನ್ನು ಹೊಲೆಗೆಡಿಸಿ ನಿತ್ಯಹೋಮವನ್ನು ನೀಗಿಸಿ ಹಾಳುಮಾಡುವ ಅಸಹ್ಯವಸ್ತುವನ್ನು ಪ್ರತಿಷ್ಠಿಸುವುದು."

ನಾವು ಇದನ್ನು – ಕ್ರೈಸ್ತ ಸಭೆಯಾಗಲೀ, ನಾಗರೀಕ ಅಧಿಕಾರವಾಗಲೀ, ಒಂದು ಸಮಯದಲ್ಲಿ ಸಾಧ್ಯವೆಂದು ಕಂಡುಬಂದಂತೆ, ಒಬ್ಬರನ್ನೊಬ್ಬರು ನುಂಗಲೂ ಸಾಧ್ಯವಾಗದೇ ಇದ್ದಾಗ್ಯೂ ಇನ್ನೂ ಬಲಶಾಲಿಯಾದದ್ದು ಎದ್ದು ನಾಗರೀಕ ಸರ್ಕಾರ ಮತ್ತು ನಿಜವಾದ ಧರ್ಮ ಇವೆರಡರ ಮೂಲಭೂತ ತತ್ವಗಳನ್ನು ಕಲುಷಿತಗೊಳಿಸಿತು ಎಂದು ಅರ್ಥೈಸುತ್ತೇವೆ. ಆಶ್ರಯದುರ್ಗವಾದ ಪವಿತ್ರಾಲಯವು, ನಾಗರೀಕ ಅಧಿಕಾರದ ಪವಿತ್ರವಾದ ಆವರಣವನ್ನು ಅ ಸಮಯದಲ್ಲಿ ದೇವರು ಅನ್ಯಜನರಿಗೆ, ಈ ಲೋಕದ ಸಾಮ್ರಾಜ್ಯಗಳಿಗೆ ಒಪ್ಪಿಸಿಕೊಟ್ಟಿದ್ದು ಅದನ್ನು ಪ್ರಸ್ತುತ ರಾಜ್ಯಕ್ಕಾಗಿ ದಾಹಪಡುತ್ತಿದ್ದವರು ದುರ್ಬಲಗೊಳಿಸಿದರು, ಮತ್ತು ಪ್ರತಿಯೊಂದು ತಂತ್ರದಿಂದ ನಾಗರೀಕ ಅಧಿಕಾರವನ್ನು ಹೊಂದಿಕೊಂಡು ಅವುಗಳು ತಮ್ಮ ಕ್ರೈಸ್ತ ವ್ಯವಸ್ಥೆಯನ್ನು ಮುಂದುವರಿಸಲು ಸಹಾಯಕವಾಗಬಹುದೆಂದು ಬಯಸಿದ್ದ ಸಭೆಯಲ್ಲಿರುವ ಕೆಲವರು ಅದನ್ನು ಅಗೌರವಿಸುವವರಾದರು. ಮತ್ತು ನಾಗರೀಕ ಅಧಿಕಾರವನ್ನು ಹೊಂದುವುದಕ್ಕಾಗಿ ನಿರಂತರವಾಗಿ ಪ್ರಯತ್ನಿಸುತ್ತಿದ್ದ, ಮತ್ತು ಜನರ ಪ್ರಭಾವವನ್ನು ಹೊಂದಿದ್ದ ಇವರುಗಳಿಂದ ದೇವರ ಪವಿತ್ರಾಲಯವು (ಆತನ

ಪರಿಶುದ್ಧ ವಾಸಸ್ಥಳವು, ದೇವಾಲಯವು) ಕಲುಷಿತವಾಯಿತು. ಪೋಪನ ಸಾಮ್ರಾಜ್ಯವು ಭ್ರೂಣಾವಸ್ಥೆಯಲ್ಲಿದ್ದು ಅಧಿಕಾರದಲ್ಲಿ ಪಾದ್ರಿಗಳ ಪ್ರಬಲ ರಾಜ್ಯವಾಗಿ ಮೇಲೇಳಲು ಹೊಂಚು ಹಾಕಿತು.

ಅಮಲೇರಿದವರಾದ ಈ ಬಲಿಷ್ಟರು ದೇವರ ಯೋಜನೆಯನ್ನು ಕಡೆಗಣಿಸುತ್ತಿರುವುದಾಗಿ ನಾವು ಆಶ್ಚರ್ಯಪಡಬೇಕಾಗಿಲ್ಲ. ಅದು ಈಗಿರುವ ಅಧಿಕಾರಗಳಿಗೆ ಅಧೀನರಾಗಲು ನಮಗೆ ಒದಗಿಸಿದೆ. (ಆ ಅಧಿಕಾರವು ನಮಗೆ ದೇವರಿಂದ ನೇಮಿಸಲಾಗಿದ್ದು ನಮ್ಮ ಪ್ರಸ್ತುತ ಪರೀಕ್ಷೆಗೆ ಮತ್ತು ಮುಂದಿನ ಅಧಿಕಾರದ, ಮಹಿಮೆಯ ಮತ್ತು ಲೋಕದ ಪ್ರಭುತ್ವದ ಏಳಿಗೆಗೆ ನಾವು ಸಿದ್ಧಗೊಳ್ಳುವಂತೆ ದೇವರಿಂದ ಅಭಿಷೇಕ ಹೊಂದಿದೆ). ಇವರು ಸಾಧ್ಯವಾದರೆ ದೇವರ ಸಮಯಕ್ಕೆ ಮೊದಲೇ ಆಳುವ ನಿರ್ಧಾರ ಕೈಕೊಂಡ ಅಧಿಕಾರವು ಇದುವರೆಗೆ ದೇವರ ಯೋಜನೆಯೊಂದಿಗೆ ಸಾಮರಸ್ಯ ಹೊಂದಿಲ್ಲವಾಗಿದೆ, ಹಾಗೂ ಸತ್ಯದ ಸಾರವನ್ನು, ತಿರುಳನ್ನು ಕಳೆದುಕೊಂಡಿವೆ ಮತ್ತು ಕೇವಲ ರೂಪವನ್ನು ಅಂದರೆ ಬಾಹ್ಯ ಚಹರೆಯನ್ನು ಮಾತ್ರವೇ ಉಳಿಸಿಕೊಂಡಿವೆ. ಧರ್ಮಭ್ರಷ್ಟತೆಯ ಅತ್ಯಂತ ನಿರ್ಣಾಯಕವಾದ ಹಂತವೆಂದರೆ ನಿರಂತರವಾದ ನಿತ್ಯ ಹೋಮವನ್ನು ನಿಲ್ಲಿಸುವುದು. ರೋಮಿನ ಸಿದ್ಧಾಂತಗಳನ್ನು ಪ್ರತಿನಿಧಿಸುವ Transubstantiation (ದ್ರಾಕ್ಷಾರಸವು ರಕ್ತವಾಗಿ, ರೊಟ್ಟಿಯು ದೇಹವಾಗಿ ಪರಿವರ್ತನೆಯಾಗಿದೆ ಎಂಬ ತತ್ವ), Mass (ಸಾಮೂಹಿಕ ಪ್ರಾರ್ಥನೆ) ಇವುಗಳು ಸತ್ಯಬೋಧನೆಗಳನ್ನು ಅವನತಿಗೆ ತರುವ ಪರಾಕಾಷ್ಠತೆಯನ್ನು ತಲುಪಿದವು. ನಾವು ಕೆಲವನ್ನು ಇಲ್ಲಿ ಹೆಸರಿಸುತ್ತೇವೆ, ನಂತರದ ಅಧ್ಯಾಯದಲ್ಲಿ ಬರುವ ಮತ್ತೊಂದು ಪ್ರವಾದನೆಯೊಂದಿಗೆ ಅದರ ಪೂರ್ಣ ಪರೀಕ್ಷೆಯನ್ನು ಬಿಟ್ಟುಬಿಡುತ್ತೇವೆ. ಈ ಪ್ರಾಣಾಂತಿಕವಾದ ದೈವದೂಷಣಾ ತಪ್ಪಿನ ಪರಿಚರ್ಯಕ್ಕಾಗಿ ದೇವರು ಈ ಪದ್ಧತಿಯನ್ನು ಅಸಹ್ಯತೆಯೆಂದು ಕರೆಯುತ್ತಾನೆ; ಅದರ ನಂತರದಲ್ಲಿ ಅಧಿಕಾರಕ್ಕೆ ಏಳುವುದನ್ನು ಇಲ್ಲಿ ಅಸಹ್ಯಕರವಾದ ಸ್ಥಾಪನೆಯಿಂದ ನಾಶಗೊಳಿಸುವುದು ಎಂದು ಉಲ್ಲೇಖಿಸಲಾಗಿದೆ. ಈ ಹೆಸರನ್ನು ಪೋಪನ ಅಧಿಕಾರವು ಎಷ್ಟು ಚೆನ್ನಾಗಿ ಗಳಿಸಿಕೊಂಡಿದೆ, ಮತ್ತು ಅದರ ವಿನಾಶಕಾರಕ ಪ್ರಭಾವವು ಎಷ್ಟರಮಟ್ಟಿಗೆ ಭಂಗಪಡಿಸುವಂತಾದ್ದು ಎಂಬುದು ಕತ್ತಲೆಯ ಯುಗದ ಚರಿತ್ರೆಯು ಉತ್ತಮವಾಗಿ ಪ್ರಮಾಣೀಕರಿಸಿದೆ. ಅದರ ಕ್ಷಣಿಕ ದರ್ಶನವನ್ನು ಮಾತ್ರವೇ ನಾವು ಇದರ ಮುಂಚಿನ ಅಧ್ಯಾಯದಲ್ಲಿ ನೀಡಿದ್ದೇವೆ.

ವಚನ 32: “ನಿಬಂಧನ ದ್ರೋಹಿಗಳು ಅವನ ನಯನುಡಿಗಳಿಂದ ಕೆಟ್ಟು ಹೋಗುವರು; ತಮ್ಮ ದೇವರನ್ನು ಅರಿತವರೋ ದೃಢಚಿತ್ತರಾಗಿ ಕೃತಾರ್ಥರಾಗುವರು” ದೇವರ ನಿಬಂಧನೆಗಳಂತೆ ನಡೆಯಲು ಸೋತುಹೋದ ಸಭೆಯಲ್ಲಿರುವವರು ಸುಲಭವಾಗಿ ನಯನುಡಿಗಳಿಗೆ ಬಲಿಬಿದ್ದು ಪೋಪನ ಶ್ರೇಣಿ ವ್ಯವಸ್ಥೆಯ ಬಿರುದು ಬಾವಲಿ ಮುಂತಾದವುಗಳ ಪ್ರಭಾವಕ್ಕೆ ಮಾರುಹೋಗುತ್ತಾರೆ. ಕೆಲವರು ತಪ್ಪುಗಳಿಗೆ ಬಲಿಯಾದರೂ, ಎಲ್ಲರೂ ಅಲ್ಲ ಎಂದು ನಾವು ಓದುತ್ತೇವೆ. ಆದರೆ ತಮ್ಮ ದೇವರು ಬಲವುಳ್ಳಾತನು, ಧೀರತ್ವದಿಂದ ನಿಭಾಯಿಸುತ್ತಾನೆ ಎಂದು ತಿಳಿದ ಜನರು ತಮ್ಮ ತಿಳುವಳಿಕೆಯನ್ನು ಅನೇಕರಿಗೆ ತಿಳಿಸುತ್ತಾರೆ. ಈ ರೀತಿಯಲ್ಲಿ ಸಭೆಯು ದಾನಿಯೇಲ 8:11–14ರಲ್ಲಿ ವಿವರಿಸಿರುವಂತೆ ಪವಿತ್ರಾಲಯ ಮತ್ತು ದೇವಭಕ್ತಗಣ ಎಂಬ ಎರಡು ಗುರುತಿಸಲ್ಪಟ್ಟ ಗುಂಪುಗಳಾಗಿ ವಿಭಜನೆಗೊಂಡಿದೆ ಎಂದು ತೋರಿಸಲಾಗಿದೆ. ಒಂದು ವರ್ಗವು ಈ ಲೋಕದ ಹೊಗಳಿಕೆಗಳಿಂದ ಕೂಡಿದ ಗೌರವದಿಂದ ಭ್ರಷ್ಟವಾಗಿದೆ ಮತ್ತೂ ದೇವರ ನಿಬಂಧನೆಗಳನ್ನು ಉಲ್ಲಂಘಿಸಿದೆ. ಅದೇ ಸಮಯದಲ್ಲಿ ಮತ್ತೊಂದು ವರ್ಗವು ಬಂದ ಹಿಂಸೆಗಳಿಂದ ದೇವರ ಬಗೆಗಿನ ಅವರ ನಿಷ್ಠೆಯು ಪ್ರದರ್ಶಿತವಾಗಿ ಬಲಗೊಂಡಿದೆ. ಅನಂತರದ ವರ್ಗದಲ್ಲಿ ಕೆಲವರು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದಾರೆ ಮತ್ತು ಕ್ರಿಸ್ತವಿರೋಧಿಯು ಅಥವಾ ಪಾಪಿಯಾದ ಮನುಷ್ಯನು ಸಭೆಯಲ್ಲಿನ ಮಹಾ ಪತನದ ಕಾರಣ ಅಭಿವೃದ್ಧಿಗೊಳ್ಳುತ್ತಾನೆ ಎಂದು ಪರಿಶುದ್ಧ ಬರಹಗಳಲ್ಲಿ ಬರೆದಿದೆ ಎಂಬುದನ್ನು ನಂಬಿಗಸ್ತರಿಗೆ ಬೋಧಿಸುತ್ತಾರೆ.

ಸಮುದಾಯಗಳು ಮತ್ತು ಅಧಿಕಾರಗಳು, ಒಡಂಬಡಿಕೆಗಳನ್ನು ತೊರೆಯುವವರ ಕೈಯಲ್ಲಿತ್ತು, ಅವರುಗಳು ಸಾಮ್ರಾಜ್ಯಕ್ಕೆ ಸೇರಿಕೊಂಡರು ಮತ್ತು ಪ್ರಮಾಣಿಕರಾದ ಕೆಲವರನ್ನು ಹಿಂಸೆಪಡಿಸಲಾಯಿತು, ಬೇಟೆಮಾಡಲಾಯಿತು, ಸೆರೆಮನೆಗೆ ಹಾಕಲಾಯಿತು, ಬಲವಾಗಿ ಎಳೆದು ನೋವನ್ನುಂಟುಮಾಡಲಾಯಿತು, ಚಿತ್ರಹಿಂಸೆಪಡಿಸಲಾಯಿತು ಮತ್ತು ಅವರನ್ನು ನೂರು ಬಗೆಯ ಅಸಹ್ಯಕರ ರೀತಿಯಲ್ಲಿ ಮರಣಕ್ಕೊಳಪಡಿಸಲಾಯಿತು ಎಂಬುದನ್ನು ಇತಿಹಾಸದ ಪುಟಗಳು ಸ್ಪಷ್ಟವಾಗಿ ಪ್ರಮಾಣೀಕರಿಸುತ್ತವೆ ಮತ್ತು ಇಲ್ಲಿ ಪ್ರವಾದಿಯಿಂದ ಮುಂತಿಳಿಸಿರುವಂತೆ “ಅವರು ಬಹು ದಿವಸ ಕತ್ತಿ ಬೆಂಕಿ ಸೆರೆ ಸೂರೆಗಳಿಗೆ ಅಂತ್ಯ ಸಮಯದವರೆಗೆ ಸಿಕ್ಕಿಬೀಳುತ್ತಿರುವರು” (ವಚನ 33) [ಇಲ್ಲಿ ವಚನ 34ರ ಉಪವಾಕ್ಯವು ಮತ್ತು 35ರ ಒಂದು

ಭಾಗವು ಮಧ್ಯಪ್ರವೇಶಿಸುತ್ತದೆ]; ಯಾಕೆಂದರೆ ಅದು ಇನ್ನೂ (ಮುಂದೆ) ಕೆಲವು ಸಮಯಕ್ಕೆ ನೇಮಕವಾಗಿದೆ. ಈ ಹಿಂಸೆಯು ಮುಂದುವರೆಯಬೇಕಾದ ಸಮಯವು ಅದು ನಿಗದಿಪಡಿಸಿದಂತೆ ಮುಕ್ತಾಯಗೊಳ್ಳುವುದು ಎಂಬುದನ್ನು ಹೊರತುಪಡಿಸಿ ಇಲ್ಲಿ ಇನ್ನೂ ಪ್ರಾರಂಭವಾಗಿಲ್ಲ. ಬೇರೆ ಬರಹಗಳಿಂದ ನಾವು ಅದು 1260 ವರ್ಷಗಳು ಮತ್ತು ಅದು 1799ರಲ್ಲಿ ಮುಕ್ತಾಯಗೊಂಡಿತು ಎಂದು ತಿಳಿದುಕೊಳ್ಳುತ್ತೇವೆ. ಈ ದಿನಾಂಕವನ್ನು ದಾನಿಯೇಲ ಮತ್ತು ಪ್ರಕಟನೆಗಾರನು ಚರಿತ್ರೆಯಲ್ಲಿ ಪ್ರಧಾನವಾಗಿ ಗಮನಿಸಿದ್ದಾರೆ.

34 ಮತ್ತು 35ನೇ ವಚನಗಳು: ಈಗ ಅವರು ಬೀಳುವಾಗ, ಅವರುಗಳಿಗೆ ಸ್ವಲ್ಪ ಸಹಾಯವು ದೊರೆಯುವುದು. ಹಿಂಸೆಗಾರನ (ಪೋಪನ) ಅಧಿಕಾರದ ಪೂರ್ಣಾವಧಿಯು 1260 ವರ್ಷಗಳಾಗಿದ್ದು ಅದು 1799ರವರೆಗೆ ಮುಕ್ತಾಯಗೊಳ್ಳುವುದಿಲ್ಲ; ಆದರೆ ಅದು ಮುಕ್ತಾಯಗೊಳ್ಳುವ ಮುನ್ನ ದೇವರು ಸುಧಾರಣಾ ಚಳುವಳಿಯ ಮೂಲಕ ಸ್ವಲ್ಪ ಸಹಾಯವನ್ನು ಒದಗಿಸುತ್ತಾನೆ, ಅದು ಮೊದಲಲ್ಲಿ ಹಿಂಸೆಯು ಹೆಚ್ಚಾದದ್ದಾದರೂ, ನಂತರದಲ್ಲಿ ದೇವರ ವಾಕ್ಯದಲ್ಲಿ ನಿಷ್ಠೆಯಿಂದ ಇದ್ದವರು ಹಿಂಸೆಯಲ್ಲಿ ಬೀಳುವಾಗ ಅಲ್ಪಸ್ವಲ್ಪ ನೆಮ್ಮದಿಯನ್ನು ಮತ್ತು ರಕ್ಷಣೆಯನ್ನು ಒದಗಿಸಿದನು. ಸುಧಾರಣಾ ಚಳುವಳಿಕೆಯು ಲೋಕದಿಂದ ಸತ್ಯವನ್ನು ಸಂಪೂರ್ಣವಾಗಿ ತುಳಿಯುವುದನ್ನು ತಪ್ಪಿಸಿತು. ಆದರೆ, ಅಯ್ಯೋ! ಸ್ವಲ್ಪ ಸಹಾಯದೊಡನೆ ಹೊಗಳಿಕೆಗಾರರು ಮರಳಿ ಬಂದರು. ಹಿಂಸೆಯು ಕಡಿಮೆಯಾಗಲು ಪ್ರಾರಂಭವಾದ ಕೂಡಲೇ, ವಿರೋಧಿಯು ಅದೇ ತಂತ್ರವನ್ನು ಆಶ್ರಯಿಸುತ್ತಾನೆ. ಇದರಿಂದ ಈ ಮುಂಚೆ ಆತನು ಸಭೆಯನ್ನು ಭ್ರಷ್ಟಗೊಳಿಸಿ, ಹೀನೈಸುವಲ್ಲಿ ಜಯಶಾಲಿಯಾದಂತೆ, ಈಗ ಸುಧಾರಣಾ ಚಳುವಳಿಯನ್ನು ಜಯಶಾಲಿಯಾಗಲು ಪ್ರಯತ್ನಿಸುತ್ತಾನೆ. ರಾಜರುಗಳು, ಮತ್ತು ರಾಜಕುಮಾರರುಗಳು ಪ್ರೊತಸ್ತಾಂತರಿಗೆ ಗೌರವ ಮತ್ತು ಬಿರುದುಗಳನ್ನು ಕೊಡಲು ಪ್ರಾರಂಭಿಸಿ ಅವರೊಡನೆ ಒಂದಾಗಲು Protestantism ಪ್ರಾರಂಭಿಸಿದರು. ಆದರೆ ಅನೇಕರು ಅದಕ್ಕೆ ಮುಖಸ್ತುತಿಗಳೊಂದಿಗೆ ಅಂಟಿಕೊಂಡರು. ಇದು ನಾವು ಓದುವಂತೆ, ತೀವ್ರತರವಾದ ಕೆಟ್ಟ ಪರಿಣಾಮಗಳಿಗೆ ಮತ್ತು ಒಡಂಬಡಿಕೆಯಿಂದ ದಾರಿತಪ್ಪುವಂತೆ ನಡೆಸಿತು. ಅವರಲ್ಲಿ ತಿಳುವಳಿಕೆಯುಳ್ಳ ಕೆಲವರು (ನಾಯಕರುಗಳು, ಸುಧಾರಕರುಗಳು, ಬೋಧಕರುಗಳು ಪೋಪನ ಅನೇಕ ತಪ್ಪುಗಳ ಬಗ್ಗೆ ಸೂಕ್ತ ಸೂಚನೆ ನೀಡುವವರು) ಅವರನ್ನು (ಪ್ರಾಮಾಣಿಕರಾದ ಕೆಲವರನ್ನು) ಪರೀಕ್ಷೆಮಾಡುವಲ್ಲಿ, ನಿರ್ಮಲಗೊಳಿಸುವಲ್ಲಿ ಮತ್ತು ಶುಭ್ರಮಾಡುವಲ್ಲಿ ಬಿದ್ದುಹೋದರು.

ಪ್ರವಾದನೆಯನ್ನು ಮತ್ತೂ ಪತ್ತೆ ಹಚ್ಚುತ್ತಾ ಹೋಗುವಾಗ, ಹಿಂದಿನ ವಚನಗಳು ತೀಕ್ಷ್ಣ ರೀತಿಯಲ್ಲಿ ವಿವರಿಸಿದಂತೆ, ಪ್ರಮುಖ ಗುಣಲಕ್ಷಣಗಳು ಪ್ರಧಾನವಾಗಿ ರಾಜ್ಯಗಳು ಗ್ರೀಸಿಗೆ, ನಂತರದಲ್ಲಿ ರೋಮಿಗೆ ವರ್ಗಾಯಿಸಲ್ಪಡುವುದಕ್ಕೆ ಸಂಬಂಧಿಸಿವೆ. ನಂತರದಲ್ಲಿ, ಅದು ಕಪಟವಾಗಿ, ಕ್ರಮೇಣವಾಗಿ, ಗುಟ್ಟಾಗಿ ಪೋಪನ ಅಧಿಕಾರಕ್ಕೆ ಒಂದು ಶಕ್ತಿಯಾಗಿ ಆ ಶಕ್ತಿಯು ನಾಗರೀಕ ರೋಮಿನ ಹೊರಗೆ ಬೆಳೆಯುವಂತೆ ವರ್ಗಾಯಿಸಲ್ಪಡುತ್ತವೆ. ಹಾಗೆಯೇ ಅದು ಪೋಪನ ಅಧಿಕಾರವು ಎಲ್ಲಿ ಮುರಿದಿದೆ* ಎಂಬ ಮುಖ್ಯವಾದ ಅಂಶವನ್ನು ಗಮನಿಸಲು ಬರುವಾಗ, ಈ ಬದಲಾವಣೆಯಲ್ಲಿ ಭಾಗಿಯಾಗಿರುವ ಮುಖ್ಯ ಪಾತ್ರಧಾರಿ ನೆಪೋಲಿಯನ್‌ನನ್ನು ಗುರುತಿಸಬೇಕೆಂಬುದು ಸಮಂಜಸವಾಗುತ್ತದೆ. ಅದು ಆತನ ವೈಯುಕ್ತಿಕ ಮುಖಲಕ್ಷಣವನ್ನು ವಿವರಿಸುವುದರಿಂದ ಅಲ್ಲ. ಆದರೆ Augustus, Tiberius Caesar ಇವರುಗಳ ಲಕ್ಷಣಗಳನ್ನು ಸೂಚಿಸಿರುವಂತೆ ಆತನ ವಿಚಿತ್ರವಾದ ಗುಣಲಕ್ಷಣಗಳಿಂದ. ಅಂಥಾ: ವಿವರಣೆಯನ್ನು ನಾವು ಕಂಡುಕೊಳ್ಳುತ್ತೇವೆ. ಮತ್ತು ನೆಪೋಲಿಯನ್ ಬೋನಾಪಾರ್ಟೆಯ ವೃತ್ತಿ ಜೀವನವು ಈ ವಿವರಣೆಗೆ ಸರಿಯಾಗಿ ಹೊಂದಿಕೆಯಾಗುತ್ತದೆ. ವಚನಗಳು 31–35 ಪೋಪನ ಅಧಿಕಾರವನ್ನು, ಅದರ ತಪ್ಪುದೋಷಗಳನ್ನು, ಅಸಹ್ಯತೆಗಳನ್ನು, ಮತ್ತು ಸುಧಾರಣೆಗಳು ಅದರ "ಅಲ್ಪ ಸಹಾಯ" ಆದಾಗ್ಯೂ ಮುಖಸ್ತುತಿಗಳಿಂದ ಉಂಟಾದ ಅವುಗಳ ಭಾಗಶಃ ವಿಫಲತೆಗಳು ವಿವರಿಸುತ್ತದೆ ಮತ್ತು ಈ ವಚನಗಳು "ಅಂತ್ಯಕಾಲ"ಕ್ಕೆ ತರುತ್ತದೆ ಮತ್ತು ಒದಗಿಸಿದ

* ಪೋಪನ ಅಧಿಕಾರದ ರಾಜ್ಯವು ಈ ಶತಮಾನದ ಪ್ರಾರಂಭದಲ್ಲಿಯೇ ಗತಿಸಿಹೋಯಿತು ಎಂದು ಹೇಳುವುದು ಸೂಕ್ತವಾಗಿದೆ. ಯಾಕೆಂದರೆ ಫ್ರೆಂಚ್ ಕ್ರಾಂತಿಯ ನಂತರದಲ್ಲಿ ಆಳ್ವಿಕೆ ಮಾಡುವವರ ಮೇಲೆ ರೋಮಿನ ಅಧಿಕಾರವು ಆಳುವವರ ಮೇಲೆ, ರಾಜ್ಯಗಳ ಮೇಲೆ ಮತ್ತು ಇಟಲಿಯಲ್ಲಿ ಅವುಗಳ ಸರಹದ್ದುಗಳ ಮೇಲೆ ಕೇವಲ ಹೆಸರಿಗೆ ಮಾತ್ರವಾದುದು, ನಿಜವಾದುದಲ್ಲ ಮತ್ತು ಆ ಸಮಯದವರೆಗೆ ಫ್ರಾನ್ಸ್ ದೇಶವು ಎಲ್ಲಾ ದೇಶಗಳಲ್ಲಿ ಪೋಪನ ಅಧಿಕಾರಕ್ಕೆ ಅತ್ಯಂತ ಪ್ರಾಮಾಣಿಕವೂ, ಅಧೀನವೂ ಆಗಿತ್ತು ಎಂಬುದನ್ನು ನೆನಪಿನಟ್ಟುಕೊಳ್ಳಬೇಕು. ಅದರ ಅರಸರುಗಳು, ಅರಸುಕುಮಾರರುಗಳು, ಗಣ್ಯರು ಮತ್ತು ಜನರು ಪೋಪನ ಅನುಜ್ಞೆಗಳಿಗೆ ಅತ್ಯಂತ ವಿಧೇಯರಾದವರು ಕ್ರುಸೇಡ್ ಗಳನ್ನು ಏರ್ಪಡಿಸಿದರು, ಯುದ್ಧ ಮುಂತಾದವುಗಳಿಗೆ ಹೋದರು. ಅವರುಗಳು ಅಷ್ಟೊಂದು ನಿಷ್ಠೆಯುಳ್ಳವರಾಗಿದ್ದು ಪೋಪನ ಆಜ್ಞೆಯಂತೆ St Bartholomewದ ರಾತ್ರಿಯ ಸಾಮೂಹಿಕ ಹತ್ಯೆಯ ನಂತರ ಅವರ ಭೂಮಿಯಲ್ಲಿ ಪ್ರೊತಸ್ತಾಂತರನ್ನು ಜೀವಿಸಲು ಅನುಮತಿ ನೀಡಲಿಲ್ಲ. ಆದುದರಿಂದ, ಬೇರೆ ಯಾವ ದೇಶವೂ ಪೋಪನ ಅಧಿಕಾರವನ್ನು ಅಷ್ಟು ಆಘಾತಕಾರಿಯಾಗಿ ಮತ್ತು ವಿನಾಶಕಾರಿಯಾಗಿ ಹಚ್ಚಿಕೊಂಡಿರಲಿಲ್ಲ

"ಅಲ್ಪ ಸಹಾಯ"ವನ್ನು ತಾಳಿಕೊಳ್ಳಲಾರದೆ ಅನೇಕರು ಹಿಂಸೆಗಳಿಂದ ಪತನವಾಗುವ ಅದರ ಅಂತ್ಯಕಾಲದವರೆಗೆ ತರುತ್ತದೆ. ಅದು ಹೀಗಿತ್ತು: ಪೋಪನಿಗೆ ಅಧೀನವಾಗಿದ್ದ ಸ್ಪೈನ್, ಫ್ರಾನ್ಸ್ ಮುಂತಾದ ಎಲ್ಲಾ ದೇಶಗಳಲ್ಲಿ ತೀವ್ರವಾದ ವಿಚಾರಣೆಗಳಿಂದ "ವಿಚಾರಣಾ ಕ್ರಮ" (Inquisition) ಉಂಟಾದ ಹಿಂಸೆಗಳು ನೆಪೋಲಿಯನ್‌ನನ್ನು ಪರಿಣಾಮಕಾರಿಯಾಗಿ ಮುರಿದು ಹಾಕುವವರೆಗೆ ಮುಂದುವರೆದವು.

ಮುಂದೆ ನೆಪೋಲಿಯನ್ನನನ್ನು ವರ್ಣಿಸುವ ವಾಕ್ಯಗಳು ಅನುಸರಿಸುತ್ತಾ ಹೋಗುತ್ತದೆ. ಆತನು ದೈವೇಚ್ಛೆಯಂತೆ ಪೋಪನ ಅಧಿಕಾರವನ್ನು ಮುರಿಯಲು ಮತ್ತು ಅಕೆಗೆ ಚಿತ್ರಹಿಂಸೆಯನ್ನು ಆರಂಭಿಸಲು ನೇಮಿಸಲ್ಪಟ್ಟ ಸಾಧನವಾಗಿದ್ದಾನೆ. ಅದು ಸಂಪೂರ್ಣ ನಾಶನದೊಂದಿಗೆ ಮುಕ್ತಾಯಗೊಳ್ಳುವುದು, ಬರೆದಿರುವಂತೆ ನಂತರದ ಕಾಲದಲ್ಲಿ ಯಶಸ್ವಿ ಯಾಗುವುದು. "ಆ ಅಧರ್ಮ ಸ್ವರೂಪನು ಬರುವನು, ಅವನನ್ನು ಯೇಸುಕರ್ತನು ತನ ಬಾಯ ಉಸುರಿನಿಂದ ಕೊಲ್ಲುವನು" (2 ಥೆಸ. 2:8).

ಆತನ ಕಾಲದಲ್ಲಿಯೂ ಸಹ "ದೈವ ತೀರ್ಮಾನಕ್ಕೆ ನಿರ್ಧರಿಸಲ್ಪಟ್ಟ ಮನುಷ್ಯ"ನೆಂದು ಪರಿಚಿತನಾಗಿದ್ದ ನೆಪೋಲಿಯನ್ನನ ಸಾರ್ವಜನಿಕ ವೃತ್ತಿಜೀವನವು ಪ್ರವಾದನೀಯ ಹೇಳಿಕೆಯಲ್ಲಿ "ನಿಗದಿಪಡಿಸಿದ ಸಮಯ"ದ ದಿನಾಂಕವನ್ನು ಸ್ಥಿರಪಡಿಸುವಂತೆ ಬಹಳ ಸ್ಪಷ್ಟವಾಗಿ ಚಿತ್ರಿಸಲ್ಪಟ್ಟಿದೆ. ಈ ರೀತಿಯಲ್ಲಿ ದಿನಾಂಕವನ್ನು ಗೊತ್ತುಪಡಿಸುವುದು ನಿಷ್ಕೃಷ್ಟವಾದುದು. ಪ್ರವಾದನೆಗಳಲ್ಲಿ ಹೇಳಿರುವ ಘಟನೆಗಳು ಇತಿಹಾಸದಲ್ಲಿ ನೆಪೊಲಿಯನ್ನನ ವೃತ್ತಿ ಜೀವನದೊಂದಿಗೆ ಒಪ್ಪಿಗೆಯಾಗುವುದು ಎಂದು ನಾವು ತೋರಿಸುವವರಾದರೆ, ನಾವು ದಿನಾಂಕವನ್ನು ನಿಶ್ಚಿತವಾಗಿ ವಚನ 17, 20 ಮತ್ತು 21 ರಲ್ಲಿ ವಿವರಿಸಿರುವಂತೆ Augustus Caesar ಅಥವಾ Tiberius ಅಥವಾ Cleopatra ಇವರುಗಳ ಆಳ್ವಿಕೆಯ ಪ್ರಾರಂಭದಂತೆಯೇ ನಿರ್ಧರಿಸಬಹುದು. ಪ್ರವಾದನೆಯ ಬೆಳಕಿನಲ್ಲಿ ನೆಪೋಲಿಯನ್ನನ ವೃತ್ತಿ ಜೀವಿತದಲ್ಲಿ ಗುರುತುಪಡಿಸಿರುವ ಕ್ರಿ.ಶ. 1799 ಪೋಪನ 1260 ವರ್ಷಗಳ ಅಂತ್ಯವಾಗಿದೆ. ಈ ಅವಧಿಯ ಪ್ರಾರಂಭವನ್ನು ಅಂತ್ಯಕಾಲ ಎಂದು ಕರೆಯಲಾಗಿದೆ. ಪ್ರವಾದನೀಯ ವರ್ಣನೆಯು ಹೀಗೆ ಸಾಗಿದೆ :–

ವಚನ 36 : "ರಾಜನು ಮನಸ್ಸು ಬಂದ ಹಾಗೆ ನಡೆದು ತಾನು ಎಲ್ಲಾ ದೇವರುಗಳಿಗಿಂತ ದೊಡ್ಡವನೆಂದು ತನ್ನನ್ನು ಹೆಚ್ಚಿಸಿಕೊಂಡು ಉಬ್ಬಿ ದೇವಾಧಿದೇವನನ್ನು ಮಿತಿಮೀರಿ ದೂಷಿಸಿ (ನಿಮ್ಮ ಮೇಲಿನ) ದೇವೋಗ್ರವು ತೀರುವ ತನಕ ವೃದ್ಧಿಯಾಗಿರುವನು; ದೈವಸಂಕಲ್ಪವು ನೆರವೇರಲೇಬೇಕು. ನೆಪೋಲಿಯನ್ನನು ಒಬ್ಬ ಅರಸನಲ್ಲ, ಆದರೆ ಅರಸನೆಂಬ ಪದವು ಒಬ್ಬ ಶಕ್ತಿಶಾಲಿಯಾದ ಆಡಳಿತಗಾರರನ್ನು ಸೂಚಿಸುವ ಸಾಮಾನ್ಯ ಪದವಾಗಿದೆ. ಆತನು ಬಹುಶಃ ಎಲ್ಲಾ ಕಾಲದಲ್ಲಿ ಜೀವಿಸಿದ ಮನುಷ್ಯರಂತೆ ತನ್ನ ಇಚ್ಛಾನುಸಾರಕ್ಕೆ ಹತ್ತಿರವಾಗಿ ಎಲ್ಲವನ್ನೂ ಮಾಡಿದನು. ಆತನು ಸ್ವಚ್ಛಂದತನಕ್ಕೆ ಮತ್ತು ದೃಢಸಂಕಲ್ಪಕ್ಕೆ ಪ್ರಸಿದ್ಧಿಯಾಗಿದ್ದನು. ಅದು ಆತನ ಎಲ್ಲಾ ದುಸ್ತರವಾದ ಕಷ್ಟಗಳನ್ನು ಬಹುತೇಕ ಜಯಿಸಿದನು. ಮೇಲಿನ ವಚನದ ಸರಿಯಾದ ಅರ್ಥವನ್ನು ಪಡಕೊಳ್ಳುವಂತೆ, 'ದೇವರು' ಎಂಬ ಪದವು ಪರಾಕ್ರಮಿ (ಸರ್ವಶಕ್ತ) ಎಂಬುದನ್ನು ಸೂಚಿಸುತ್ತದೆ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು ಈ ಪದವನ್ನು ಪವಿತ್ರ ಬರಹಗಳಲ್ಲಿ ಆಗಿಂದ್ದಾಗ್ಗೆ ಅರಸರುಗಳು ಮತ್ತು ಆಡಳಿತಗಾರರನ್ನು ಉಲ್ಲೇಖಿಸುವಂತೆ ಉಪಯೋಗಿಸ ಲಾಗುತ್ತದೆ. ವಚನದಲ್ಲಿರುವಂತೆ "ದೇವರುಗಳ ದೇವರು"* ಎಂದು ಉಪಯೋಗಿಸಲಾಗುತ್ತದೆ. ಇಲ್ಲಿ "ದೇವರುಗಳ" ಎಂಬ ಪದವು ಆಳುವವರಿಗೆ, ಅರಸರುಗಳಿಗೆ, ರಾಜಕುಮಾರರುಗಳು ಮತ್ತು 'ದೇವರುಗಳ ದೇವರು' ಅಥವಾ "ಆಳುವವರನ್ನು ಆಳುವಾತನು" ಎಂಬ ಪದವು ಪೋಪನಿಗೆ ಉಲ್ಲೇಖಿಸಲ್ಪಟ್ಟಿದೆ. ಬಹಳ ಮಂದಿ ಯಾವುದಾದರೂ 'ಧಾರ್ಮಿಕ ಪ್ರಧಾನ'ನನ್ನು ಒಪ್ಪಿಕೊಂಡಿದ್ದಾರೆ, ಆದರೆ ನೆಪೋಲಿಯನನು ಯಾರನ್ನೂ ಒಪ್ಪಿಕೊಂಡಿಲ್ಲ. ಆತನಿಗೆ ಆತನದೇ ಆದ ಚಿತ್ತವಿತ್ತು, ತನ್ನದೇ ಆತನ ಯೋಜನೆ ಇತ್ತು. ಅದುವೇ ಎಲ್ಲಾ ಆಳುವವರಿಗಿಂತ ತಾನೇ ಹೆಚ್ಚಿನವನು ಎಂದು ತನ್ನನ್ನು ಏರಿಸಿಕೊಳ್ಳುವುದು, "ದೇವರುಗಳ ದೇವರು" ಎಂಬ ಪೋಪನನ್ನು ಸಹಾ ಆತನು ಅದ್ಭುತವಾದ ರೀತಿಯಲ್ಲಿ ಸಂಬೋಧಿಸುತ್ತಿದ್ದನು. ಪೋಪನು ಆತನಿಗೆ ಒಬ್ಬ ಸೇವಕನಂತೆ ಆತನ ವಿಧೇಯತೆಯನ್ನು ತನ್ನ ಹತೋಟಿಯಲ್ಲಿರುವಂತೆ ಬಯಸುವವನಾಗಿದ್ದನು. ಈ ರೀತಿಯಲ್ಲಿ ಲೋಕದ ಮೂಢನಂಬಿಕೆಗಳಿಗೆ ಮತ್ತು ಪೋಪನ ವಂಶಾನುಕ್ರಮದ ಘನತೆಗೆ ಆ ದಿನಗಳಲ್ಲಿ ಧಕ್ಕೆಯನ್ನುಂಟು ಮಾಡಿತು. ಇಲ್ಲಿ ಪ್ರಕಟಿಸಿದಂತೆ, ಆತನು ಪೋಪನ ಅಧಿಕಾರಕ್ಕೆ ಚಾವಟಿ ಬೀಸುವ ಮತ್ತು ಅದರ ಪ್ರಭಾವವನ್ನು ಜನರ ಮನದಲ್ಲಿ

* SCRIPURE STUDIES Vol II, 274, 275 ಪುಟಗಳನ್ನು ನೋಡಿರಿ

ಕುಗ್ಗಿಸುವ ತನ್ನ ನಿಯೋಗವನ್ನು ನೆರವೇರಿಸುವ ತನಕ ಅಭಿವೃದ್ಧಿಹೊಂದಿದನು. ಇದನ್ನು ರುಜುವಾತು ಪಡಿಸುವಂತೆ ಚರಿತ್ರೆಯು* ಹೀಗೆ ಹೇಳುತ್ತದೆ :–

"ಫ್ರೆಂಚರೊಡನೆ ಒಡಂಬಡಿಕೆ ಮಾಡಿಕೊಂಡಿರುವ ಜಾತ್ಯಾತೀತ ಅರಸರುಗಳು ಅವರೊಂದಿಗೆ ಒಳ್ಳೆಯ ವಿಶ್ವಾಸದಲ್ಲಿ ಅಂಟಿಕೊಳ್ಳುವುದುದನ್ನು ನಿರ್ಧರಿಸಿ, ಅವರಿಗೆ ಗೊತ್ತುಪಡಿಸಿದ ವಂತಿಗೆಯನ್ನು ನೀಡುತ್ತಿದ್ದಾಗ, ಸಾರ್ವಭೌಮನಾದ ಕ್ರೈಸ್ತ ಪಾದ್ರಿ ಗುರುವು ತನ್ನ ಕೆಲವೊಂದು ನಿಶ್ಚಿತ ಕಾರ್ಯಗಳ ಬಹಳಷ್ಟು ಬುದ್ಧಿಯಿಲ್ಲದ ಉಲ್ಲಂಘನೆಯ ಬಗ್ಗೆ ದೋಷ ಮನೋಭಾವವುಳ್ಳವನಾಗಿದ್ದನು. ಆತನ ಸಲಹೆಗಾರರಾಗಿದ್ದ ಪಾದ್ರಿಗಳಿಂದ ಸುತ್ತುವರೆಯಲ್ಪಟ್ಟಿದ್ದ ಪೋಪನು ತನ್ನ ಹಳೆಯ ಕುಯುಕ್ತಿಯುಳ್ಳ ಧರ್ಮಶ್ರದ್ಧೆಯ ವಂಚನೆಗಳ ಸಮಯೋಚಿತತೆಯ ಮೂಲಗಳನ್ನು ಹೊಂದಿದ್ದನು. ಜನರ ಮನಸ್ಸನ್ನು ಫ್ರೆಂಚರ ವಿರುದ್ಧವಾಗಿ ಉದ್ರೇಕಗೊಳಿಸುವಂತೆ ಮಹಾ ಪ್ರಯತ್ನಗಳನ್ನು ಮಾಡಲಾಯಿತು... ಪೋಪನ ಪ್ರಾಧಾನ್ಯತೆಯುಳ್ಳ ಕೈಥೋಲಿಕ ಸಭೆಯ ವಿಶ್ವಾಸವನ್ನು ಸಮರ್ಥಿಸುವಂತೆ ಮತ್ತು ಫ್ರೆಂಚರ ನಡತೆಯ ಬಗ್ಗೆ ದೇವರ ಅಸಂತೋಷವನ್ನು ತೋರಿಸುವಂತೆ ಅನೇಕ ಅದ್ಭುತ ಕಾರ್ಯಗಳನ್ನು ಜರುಗಿಸಲಾಯಿತು ಎಂಬುದು ಸಕಾರಾತ್ಮಕವಾಗಿ ಪ್ರತಿಪಾದಿಸಲ್ಪಟ್ಟಿದೆ. ಬೋನಾಪಾರ್ಟೆಯು ಅಂಥಃ ಸಂಗತಿಗಳು ರೋಮಿನ ನ್ಯಾಯಾಲಯವನ್ನು ಮರಳುಮಾಡುತ್ತೇವೆ, ಮತ್ತು ಆತನ ಶಾಂತಿ ಪ್ರಯತ್ನಗಳೆಲ್ಲವೂ ದೊರೆಯದೇ ಹೋಗುತ್ತವೆ ಎಂಬುದನ್ನು ಗ್ರಹಿಸಿ ತಕ್ಷಣದಲ್ಲಿ '(ಆತನ ಮರ್ಯಾದೆ) His Holiness'ನನ್ನು ಸ್ಥಿರ ಬುದ್ದಿಗೆ ಮರಳಿ ತರಲು ಬೇಕಾದ ಹೆಜ್ಜೆಗಳನ್ನು ಇಟ್ಟನು.

ಆತನು ಜನರಲ್ ವಿಕ್ಟರನಿಗೆ ಪೋಪನ ಭೂಭಾಗಗಳ ಮೇಲೆ ಆಕ್ರಮಣಮಾಡಲು ಆಜ್ಞಾಪಿಸಲು ಆತನು ಪೋಪ್‌ನ ಸೈನ್ಯವನ್ನು ಗಾಳಿಯು ಹೊಟ್ಟನ್ನು ಚದುರಿಸುವಂತೆ ಚದುರಿಸಿಬಿಟ್ಟನು. ಇದರಿಂದ ಕ್ರೈಸ್ತಸಾಮ್ರಾಜ್ಯದಲ್ಲೆಲ್ಲಾ ಸರ್ವಸಾಮಾನ್ಯವಾದ ಭೀತಿಯು ಹರಡಿತು..... 'His Holiness' ಈ ತುರ್ತು ಪರಿಸ್ಥಿತಿಯಲ್ಲಿ ತನಗೆ St.Petersನ ಯಾವುದೇ ಸಹಾಯವೂ ದೊರೆಯುದೆಂದು ಆತನು ಅರಿತುಕೊಂಡನು..... ಕೂಡಲೇ ಆತನು ತನ್ನ ಸಂಪೂರ್ಣ ಅಧಿಕಾರವನ್ನು ಹೊಂದಿದ ರಾಯಭಾರಿಗಳನ್ನು ಶಾಂತಿ ಸಂಧಾನಕ್ಕಾಗಿ ಬೋನಾಪಾರ್ಟೆಯು ಬಳಿ ಕಳುಹಿಸಿದನು. ಶಾಂತಿಯೇನೋ ದೊರೆಯಿತು.... ಆದರೆ ಸಾಕಷ್ಟು ಅವಮಾನಕರವಾಗಿತ್ತು. ಆದರೆ ಈ ಹಿಂದೆ ಮಾಡಿಕೊಂಡಿದ್ದ ತಾತ್ಕಾಲಿಕ ಒಪ್ಪಂದವನ್ನು ಪಾಲಿಸುವುದಲ್ಲದೆ ಪೋಪನು ತನ್ನ ಭೂಮಿಯ ಒಂದು ಭಾಗವನ್ನು ಒಪ್ಪಿಸಬೇಕಾಯಿತು ಮತ್ತು ಮೂವತ್ತು ಸಾವಿರ ಮಿಲಿಯನ್ ಫ್ರೆಂಚ್ Livres (ಅಂದರೆ ಸುಮಾರು ಆರು ಮಿಲಿಯನ್ ಡಾಲರುಗಳು) ಗಳನ್ನು ಸ್ನೇಹಭಂಗ ಮಾಡಿದ್ದಕ್ಕಾಗಿ ತೆರಬೇಕಾಯಿತು.

ಇದನ್ನು, ಪೋಪನು ಇತರೆ ಬೆಲೆಬಾಳುವ ವಸ್ತುಗಳಾದ ಚಿನ್ನ, ಬೆಳ್ಳಿ ಮತ್ತು ವರ್ಣಶಿಲ್ಪ ನಿರ್ಮಿತ ಚಿತ್ರಗಳಲ್ಲದೆ ಒಟ್ಟಾರೆ ನೀಡಿದ ಹತ್ತು ಮಿಲಿಯನ್ ಡಾಲರುಗಳ ಮೊದಲನೆಯ ತೆರಿಗೆಗೆ ಕೂಡಿಸಿ ಕೊಳ್ಳಲಾಯಿತು. ಒಬ್ಬ ರೋಮನ್ ಕೈಥೋಲಿಕ್ ಬರಹಗಾರನು ಹೀಗೆ ಬರೆಯುತ್ತಾನೆ:– ಈ ಷರತ್ತುಗಳನ್ನು ಪೂರೈಸುವುದು ಪೋಪನನ್ನು ನಾಶನದ ಅಂಚಿಗೆ ತಂದ ಈ ಕರಾರು ಫೆಬ್ರವರಿ 19, 1797ಕ್ಕೆ ಮುಕ್ತಾಯವಾಯಿತು.

ಪೋಪನ ಅಧಿಕಾರವನ್ನು ಜಯಪ್ರದವಾಗಿ ಬುಡಮೇಲು ಮಾಡಿರುವುದು ಈ ಲೋಕಕ್ಕೆ ಅರಸರುಗಳನ್ನು ಆಳಬೇಕು ಎಂಬಿತರ ಅದರ ದೈವಿಕ ಅಧಿಕಾರದ ಹಕ್ಕೇಳಿಕೆಯು ಕೇವಲ ಕಲ್ಪನೆಗಳಾಗಿವೆ ಎಂಬುದನ್ನು ರುಜುವಾತುಪಡಿಸಲು ಈ ಸಾರಾಂಶವು ಸಾಕಾಗಬಹುದು ಎಂಬ ಆಲೋಚನೆ ಇರಬಹುದು. ಇಲ್ಲವಾದಲ್ಲಿ, ನಿಜವಾಗಿಯೂ ಅಂತಿಮ ತಿದ್ದುಪಡಿಗಳನ್ನು ಮುಂದಿನ ವರ್ಷಕ್ಕೆ ಕೂಡಿಸಲಾಗಿದೆ. ಆಗ ಫ್ರೆಂಚ್ General Berthier ಎಂಬಾತನು ರೋಮ್ ಅನ್ನು ಪ್ರವೇಶಿಸಿ ಅಲ್ಲಿ 15ನೇ ಫೆಬ್ರವರಿ 1798ರಂದು ಪ್ರಜಾಪ್ರಭುತ್ವದ ವ್ಯವಸ್ಥೆಮಾಡಿದನು. ಐದು ದಿನಗಳ ನಂತರ ಪೋಪನನ್ನು ಕೈದಿಯಾಗಿಸಿ ಫ್ರಾನ್ಸಿಗೆ ಕೊಂಡೊಯ್ದನು. ಮಾರನೆಯ ವರ್ಷವೇ ಪೋಪನು ಅಲ್ಲಿ ತೀರಿಕೊಂಡನು. ಅಲ್ಲಿಂದ ಇಲ್ಲಿಯವರೆಗೆ, ಲೋಕದ ರಾಜ್ಯಗಳಲ್ಲಿ ಪೋಪನ ರಾಜ್ಯಗಳು ಹಿಂದಿನವುಗಳ ಛಾಯೆ ಮಾತ್ರವಾಗಿದೆ. ಅಲ್ಲಿಂದ ಅವು ಅರಸರನ್ನು ಮಾಡಲು ಅಥವಾ ಮಾಡದಿರಲು ಅವುಗಳ ಕಾಲ್ಪನಿಕ ಅಧಿಕಾರವನ್ನು ವಿರಳವಾಗಿ ಹೇಳಿಕೊಂಡಿವೆ, ವಾಸ್ತವವಾಗಿ 1800ರಲ್ಲಿ Pius VII ಎಂಬ ಹೆಸರಿನಲ್ಲಿ ಪೋಪ್ ಆದಾತನು ತನ್ನನ್ನೂ ಸೇರಿದಂತೆ ಒಂದು ಸಂದೇಶವನ್ನು ಪ್ರಕಟಿಸಿದನು. ಆದರಲ್ಲಿ ಆತನು ತನ್ನ ಸರ್ಕಾರವನ್ನೂ ಒಳಗೊಂಡಂತೆ ಎಲ್ಲರೂ

* ನೆಪೋಲಿಯನ್ನನ ದಂಡಯಾತ್ರೆ 89, 95, 96.

ಸ್ಥಾಪನೆಗೊಂಡ ಸರ್ಕಾರಗಳಿಗೆ ವಿಧೇಯು ರಾಗಬೇಕೆಂಬುದು ಸುವಾರ್ತೆಯ ಸಿದ್ಧಾಂತವಾಗಿದೆ ಎಂದು ಸಾರಿ ತಿಳಿಸಿದನು

ವಚನ 37: "ಆತನು ತನ್ನ ಪಿತೃಗಳ ದೇವರನ್ನಾಗಲೀ, ಸ್ತ್ರೀಯರು ಮೋಹಿಸುವ ದೇವರನ್ನಾಗಲೀ, ಯಾವ ದೇವರನ್ನಾಗಲೀ ಲಕ್ಷಿಸನು. ಎಲ್ಲಾ ದೇವರುಗಳಿಗಿಂತ ತನ್ನನ್ನೇ ಹೆಚ್ಚಿಸಿಕೊಳ್ಳುವನು"

ನೆಪೋಲಿಯನ್ನನು ತನ್ನ ಪಿತೃಗಳ ದೇವರನ್ನಾಗಲೀ, ಪೋಪನ ಅಧಿಕಾರವನ್ನಾಗಲೀ ಗೌರವಿಸಲಿಲ್ಲ ಅಥವಾ ಆತನು ಇಲ್ಲಿ ಸ್ತ್ರೀ* ಎಂಬುದಾಗಿ ಪ್ರತಿನಿಧಿಸಲ್ಪಟ್ಟ ಯಾವುದೇ ಪ್ರೊತಸ್ತಾಂತ ಪಂಥವನ್ನಾಗಲೀ ಆದರಿಸಲಿಲ್ಲ. ವಾಸ್ತವವಾಗಿ ಆತನ ಸ್ವಯಂ ಆಕಾಂಕ್ಷೆಯ ಹೊರತಾಗಿ ಆತನನ್ನು ಯಾವುದೂ ನಿಯಂತ್ರಿಸಲಿಲ್ಲ.

ವಚನ 38: "ಕುಲದೇವರಿಗೆ ಬದಲಾಗಿ ದುರ್ಗಾಭಿಮಾನಿ ದೇವರನ್ನು ಘನಪಡಿಸುವನು; ಪಿತೃಗಳಿಗೆ ತಿಳಿಯದ ದೇವರನ್ನು ಬೆಳ್ಳಿ ಬಂಗಾರದಿಂದಲೂ ರತ್ನಗಳಿಂದಲೂ ಅಮೂಲ್ಯ ವಸ್ತುಗಳಿಂದಲೂ ಸೇವಿಸುವನು".

ಇತರೆ ಯುದ್ಧವೀರರು ತಾವು ಪಡೆದ ವಿಜಯಗಳಿಗೆ ಯಾವುದೋ ಒಂದು ದೈವಿಕ ಶಕ್ತಿಯೇ ಕಾರಣ ಎಂಬುದಾಗಿ ಒಪ್ಪಿಕೊಂಡರು. ಅಲೆಗ್ಸಾಂಡರ್ ಮಹಾಶಯನು ಅನ್ಯಜನರ ದೇವಾಲಯವನ್ನು ಸಂದರ್ಶಿಸುವುದರ ಮೂಲಕ ತನ್ನ ವಿಜಯಗಳನ್ನು ಆಚರಿಸಿಕೊಂಡನು. ಅದರಂತೆ ಕೈಸರುಗಳೂ ಮಾಡಿದರು. ಮತ್ತು ನಂತರದ ಸಮಯಗಳಲ್ಲಿ, ಪೋಪನ ಅಧಿಕಾರದ ಅಡಿಯಲ್ಲಿ, ಯುದ್ಧದ ಎರಡೂ ಕಡೆಗಳವರೂ ದೇವರಿಗೆ, ಸಂತರುಗಳಿಗೆ, ಕನ್ಯೆಗೆ ಮತ್ತು ಪೋಪನಿಗೆ ಆಶೀರ್ವಾದಕ್ಕಾಗಿಯೂ, ಜಯಕ್ಕಾಗಿಯೂ ಮೊರೆ ಹೋಗುವುದು ಸಾಮಾನ್ಯವಾಯಿತು. ಮತ್ತು ವಿಜಯವು ದೇವರ ವರದಾನ ಎಂದು ಕನಿಷ್ಠ ಪಕ್ಷ ನಟಿಸುವುದು ಅಭ್ಯಾಸವಾಯಿತು. ಆದರೆ ನೆಪೋಲಿಯನ್ನನು ಈ ರೀತಿಯಾಗಿ ಏನನ್ನೂ ಮಾಡಲಿಲ್ಲ. ಆತನು ವಿಜಯವನ್ನು ತನಗೂ, ತನ್ನ ಪ್ರತಿಭೆಗೂ ಅನ್ವಯಿಸಿಕೊಂಡನು; ಸೈನ್ಯಗಳನ್ನು ಆತನು ಅವಲಂಬಿಸಿಕೊಂಡಿದ್ದನು; ಆತನು ಧೀರರಾದ, ತ್ವರಿತ ವ್ಯೂಹ ಯೋಜನೆಯುಳ್ಳ ಮತ್ತು ಸಮರ್ಥರಾದ ತನ್ನ ಸೇನಾಧಿಕಾರಿಗಳ ಮೇಲೆ ನಂಬಿಕೆ ಇಟ್ಟಿದ್ದನು ಮತ್ತು ಅವರುಗಳಿಗೆ ಮಾತ್ರವೇ ಆತನು ತನ್ನ ಮನವಿಗಳನ್ನು ಸಲ್ಲಿಸುತ್ತಿದ್ದನು.

ಆತನು ಐಗುಪ್ತದಿಂದ ಹಿಂದಿರುಗಿ ಬಂದನಂತರ, ಫ್ರಾನ್ಸಿನ ಸೈನ್ಯದ ಅಧಿಕಾರವನ್ನು ಪಡಕೊಂಡಾಗ ಪುರಾತನವಾದ ಫ್ರೆಂಚ್ ಕೌನ್ಸಿಲ್‌ನಲ್ಲಿ ಆತನು ತೆಗೆದುಕೊಂಡ ಪ್ರಮಾಣ ವಚನವು ಆತನ ಅವಲಂಬನೆಯು ಸ್ವತಃ ಆತನ ಮೇಲೆಯೂ ಆತನ ಸೈನ್ಯದ ಮೇಲೆಯೂ ಆಗಿತ್ತೆಂಬುದನ್ನು ತೋರಿಸುತ್ತದೆ. ಆತನು ದೇವರ ಹೆಸರಿನ ಮೇಲೆಯಾಗಲೀ, ಸತ್ಯವೇದದ ಮೇಲೆಯಾಗಲೀ, ಅಥವಾ ಪೋಪನ ಮೇಲೆಯಾಗಲೀ ಅಥವಾ ತನ್ನ ದೇಶವಾದ ಫ್ರಾನ್ಸಿನ ಮೇಲೆಯಾಗಲೀ ಪ್ರಮಾಣವನ್ನು ಸ್ವೀಕರಿಸದೆ "ನಾನು ಪ್ರಮಾಣ ಮಾಡುತ್ತೇನೆ! ನಾನು ನನ್ನ ಸ್ವಂತ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ, ಮತ್ತು ತನ್ನ ಶೂರ ಸಂಗಾತಿಗಳ ಹೆಸರಿನ ಮೇಲೆಯೂ ಪ್ರಮಾಣ ಮಾಡುತ್ತೇನೆ!" ಎಂದು ಹೇಳಿದನು. ಆತನು ತನ್ನ ಆಕಾಂಕ್ಷೆಗಳ ಸೇವೆಮಾಡುವಾಗ, ಆತನು ತಾನು ಜನರ ಸೇವೆ ಮಾಡುತ್ತಿರುವೆನೆಂದು ಹೇಳಿಕೊಳ್ಳುತ್ತಿದ್ದನು; ರೋಮ್‌ನ ಮತ್ತು ಆತನು ನಾಶಪಡಿಸಿದ ಮತ್ತಿತರ ನಗರಗಳ, ದೇಶಗಳ ಐಶ್ವರ್ಯವನ್ನು ತಾನೂ ತನ್ನ ಸೈನಿಕರೂ ಭಾಗಿಗಳಾಗಿರುವ ಫ್ರಾನ್ಸಿನ ಪ್ರಜೆಗಳಿಗೆ ಒಪ್ಪಿಸಿಬಿಟ್ಟನು.

ವಚನ 39: "ಅನ್ಯ ದೇವರ ಸಹಾಯದಿಂದ ಬಲವಾದ ಕೋಟೆಗಳನ್ನು ಆಕ್ರಮಿಸುವನು; ಯಾರನ್ನು ಕಟಾಕ್ಷಿಸುವನೋ ಅವರಿಗೆ ಮಹಿಮೆ ಹೆಚ್ಚುವುದು. ಬಹುಜನರ ಮೇಲೆ ಆಳಿಕೆಯನ್ನು ಕೊಡುವನು; ದೇಶವನ್ನು ಕ್ರಯಕ್ಕೆ ಹಂಚುವನು".

ನೆಪೋಲಿಯನ್ನನು, ಆತನ ಸ್ನೇಹಿತರನ್ನು ಮತ್ತು ವಿಶ್ವಾಸಾರ್ಹ ಸೇನಾಧಿಕಾರಿಗಳನ್ನು ತಾನು ಗೆದ್ದುಕೊಂಡ ಎಲ್ಲಾ ಯೂರೋಪ್ ದೇಶಗಳಲ್ಲಿನ ಅಧಿಕಾರ ಸ್ಥಾನಗಳಲ್ಲಿ ಇರಿಸಿದನು. ಈ ಅಧಿಕಾರಸ್ಥಾನಗಳು ಅವರಿಗೆ ಬಹುಮಾನವಾಗಿತ್ತು ಮತ್ತು ಅದನ್ನು ಅವರು ರಾಜನಿಷ್ಠೆಯ ಷರತ್ತಿಗೆ ಬದ್ಧರಾಗಿದ್ದರು. ಅವುಗಳು ಪುಕ್ಕಟೆಯಾಗಿದ್ದಾಗ್ಯೂ ಅದಕ್ಕೆ ಅವರ ರಾಜನಿಷ್ಠೆಯ ಬೆಲೆ ಇತ್ತು. ಈ ಬಗ್ಗೆ ಇತಿಹಾಸವು (Willard's Universal History, 452) ಹೇಳುವುದೇನೆಂದರೆ :–

"ನೆಪೋಲಿಯನ್ನನ ಮಹಾತ್ವಕಾಂಕ್ಷೆಯ ದೃಷಿಕೋನವು ಇನ್ನೂ ಸ್ಪಷ್ಟವಾಯಿತು. ಹಾಲೆಂಡ್

* ನಿಜವಾದ ಸಭೆಯನ್ನು ಕ್ರಿಸ್ತನ ಮದಲಗಿತ್ತಿ ಎಂದು ಕರೆಯುವುದರಿಂದಲೂ ರೋಮಿನ ಸಭೆಯು ಲೌಕಿಕತೆಯೊಂದಿಗೆ ಸಂಬಂಧ ಹೊಂದಿರುವುದರಿಂದಲೂ, ಆತನ ರಾಜ್ಯವನ್ನು 'ವೇಶ್ಯೆ' ಎಂಬುದಾಗಿ ಕರೆಯುವುದರಿಂದಲೂ, ಪ್ರೊತಸ್ತಾಂತ ಪಂಥವನ್ನು ಇಲ್ಲಿ ಸ್ತ್ರೀ ಎಂಬುದಾಗಿ ಕರೆಯಲಾಗಿದೆ.

ಹಿಂದಿನ ವರ್ಷ ಒಂದು ರಾಜ್ಯವಾಗಿ ರಚಿತವಾಯಿತು. ಲೂಯಿಸ್ ಬೋನಾಪಾರ್ಟೆ (Louis Bonaparte) ಎಂಬ ಆತನ ಸಹೋದರನನ್ನು ಅಲ್ಲಿನ ಅರಸನನ್ನಾಗಿ ಮಾಡಲಾಯಿತು. ನೇಪಲ್ಸ್ (Naples) ಅನ್ನು ಜೋಸೆಫ್ ಬೋನಾಪಾರ್ಟೆ (Joseph Bonaparte) ಎಂಬ ಆತನ ಅಣ್ಣನಿಗೆ ನೀಡಲಾಯಿತು. ಆತನಿಗೆ ಎರಡು ಸಿಸಿಲಿಯನ್ನರ ಅರಸೊತ್ತಿಗೆಯನ್ನು ವಹಿಸಲಾಯಿತು. ಡ್ಯೂಕನ ಪ್ರದೇಶಗಳನ್ನಾಗಿ ಅಥವಾ ಸಾಮ್ರಾಜ್ಯದ ಭವ್ಯ ಜಹಗೀರುಗಳನ್ನಾಗಿ ಅನೇಕ ಪ್ರಾಂತ್ಯಗಳನ್ನು ರಚಿಸಿ ಅವುಗಳನ್ನು ಚಕ್ರವರ್ತಿಯ ಸಂಬಂಧಿಗಳಿಗೆ ಮತ್ತು ಪ್ರೀತಿಪಾತ್ರರಿಗೆ ನೀಡಲಾಯಿತು. ಆತನ ಸಹೋದರಿ ಪೌಲಿನ್ (Pauline)ಳನ್ನು ಗಸ್ಟೆಲ್ಲಾ (Guastalla)ದ ರಾಜಕುಮಾರಿಯಾಗಿಯೂ, ಆತನ ಭಾವ ಮುರಾಟ್ (Murat) ಎಂಬಾತನನ್ನು ಡ್ಯೂಕ್ ಆಫ್ ಬರ್ಗ್ ಅಂಡ್ ಕ್ಲೀವ್ಸ್ (Duke of Berg and Cleaves) ಆಗಿಯೂ ಮಾಡಲಾಯಿತು ಮತ್ತು ಅದೇ ಸಮಯದಲ್ಲಿ ಆತನ ಹಿಂದಿನ ವಿವಾಹಿತ ಚಕ್ರವರ್ತಿನಿ ಜೋಸೆಫೈನ್ (Josephine)ಳ ಮಗನಾದ ಎಜಿನಿ ಬೀಅಹಾರ್ನಯ್ಸ್ (Eugene Beauharnais) ಇತಲಿಯ ವೈಸ್ ರಾಯ್ ಆಗಿ ಕಳುಹಿಸಲಾಯಿತು. ದಕ್ಷಿಣ ಮತ್ತು ಪಶ್ಚಿಮ ಜರ್ಮನಿಯಲ್ಲಿ ಹದಿನಾಲ್ಕು ಸಂಸ್ಥಾನಗಳನ್ನು ರೈನ್ (Rhine)ನ ರಾಷ್ಟ್ರಕೂಟಗಳನ್ನಾಗಿ ರಚಿಸಲಾಯಿತು. ಅವುಗಳನ್ನು ಜರ್ಮನಿಯ ಮುಖ್ಯಭಾಗದಿಂದ ಪ್ರತ್ಯೇಕಿಸಲಾಯಿತು ಮತ್ತು ನೆಪೋಲಿಯನ್‌ನ್ನನ್ನು ಪ್ರೊಟೆಕ್ಟರ್ (Protector) ಎಂಬ ಹೆಸರಿನಲ್ಲಿ ಅವುಗಳ ಮುಖ್ಯಸ್ಥನೆಂದು ಮಾನ್ಯ ಮಾಡಲಾಯಿತು..... ಸ್ವಿಜರ್‌ಲ್ಯಾಂಡನ್ನೂ ಫ್ರಾನ್ಸಿನ ಸಾಮ್ರಾಜ್ಯದಡಿ ತರಲಾಯಿತು. ನೆಪೋಲಿಯನ್ನನು ತನ್ನನ್ನು ಅದರ ಮಧ್ಯಸ್ಥನಾಗಿ (Mediator) ಆಗಿ ಸ್ವಯಂ ಘೋಷಿಸಿಕೊಂಡನು.

ನೆಪೋಲಿಯನ್ನನ ರಾಜನೀತಿಯು ಆತನ ಅಧಿಕಾರಿಗಳಿಗೆ, ಸೈನಿಕರುಗಳಿಗೆ ವಿವಿಧ ಗೌರವಾರ್ಹ ಮತ್ತು ಗೌರವಾರ್ಥ ಅಂತಸ್ತುಗಳನ್ನು ಸ್ಥಾಪಿಸಿ ಉದಾ: 'ಘನತೆಯ ಸೈನ್ಯ ದಳ' (Legion of Honor): 'ಉಕ್ಕಿನ ಕಿರೀಟದ ಶಿಸ್ತು/ಶಾಸನ' (The Order of the Iron Crown) ಎಂಬಿತ್ಯಾದಿಯಾಗಿ ಮಾಡುವಂತೆ ನಡೆಸಿತು.

ಈ ರೀತಿಯಾಗಿ ನೆಪೋಲಿಯನ್ನನು ತನ್ನ ಅನನ್ಯತೆಯನ್ನು ಸ್ಥಾಪಿಸುವ ನೆಲೆಯನ್ನು ಕಂಡುಕೊಂಡವನಾಗಿ, ಅವುಗಳ ಕಾರ್ಯಗಳು 'ಅಂತ್ಯಕಾಲದ ಪ್ರಾರಂಭವನ್ನು' (Time of End) ಗುರುತು ಮಾಡುವುದಾಗಿದ್ದು, ಆ ಸಮಯದ 'ಯಾವ ನಿರ್ದಿಷ್ಟ ಘಟನೆಯನ್ನು ಅರ್ಥಮಾಡಿಕೊಳ್ಳಬೇಕು' ಎಂಬುದನ್ನು ತೋರಿಸುವಂತೆ ಖಚಿತವಾದ ದಿನವು "ಅಂತ್ಯಕಾಲದ ಸಮಯ" ಖಂಡಿತವಾಗಿ ಸೂಚಿಸಿತು. ಪ್ರವಾದನೆಯು ಮುಂದುವರೆಯುತ್ತದೆ. ಈ ಘಟನೆಯನ್ನು ನೆಪೋಲಿಯನ್ನನ ಐಗುಪ್ತದ ಮೇಲಿನ ದಂಡಯಾತ್ರೆಯನ್ನಾಗಿ ತೋರಿಸಲಾಗಿದೆ. ಇದು ಸುಮಾರು ಒಂದು ವರ್ಷ ಐದು ತಿಂಗಳ ಅವಧಿಯನ್ನು ಆವರಿಸುತ್ತದೆ. ಆತನು ಮೇ 1798ರಲ್ಲಿ ತನ್ನ ಸಮುದ್ರಯಾನವನ್ನು ಪ್ರಾರಂಭಿಸಿ ಹಿಂತಿರುಗುವಾಗ 09 ಅಕ್ಟೋಬರ್ 1799ಕ್ಕೆ ಫ್ರಾನ್ಸಿನಲ್ಲಿ ಇಳಿದನು. ಈ ದಂಡಯಾತ್ರೆಯನ್ನು ವಚನ 40–45 ರಲ್ಲಿ ಸಚಿತ್ರವಾಗಿ ಕೆಲವೇ ಮಾತುಗಳಲ್ಲಿ ವಿವರಿಸಲ್ಪಟ್ಟಿದೆ.

ವಚನ 40: "ಅಂತ್ಯಕಾಲದಲ್ಲಿ ದಕ್ಷಿಣರಾಜನು (ಐಗುಪ್ತ) ಉತ್ತರರಾಜನ (ಐರೋಪ್ಯ) ಮೇಲೆ ಬೀಳಲು ಅವನು ರಥಾಶ್ವಬಲಗಳಿಂದಲೂ ಬಹುನಾವೆಗಳಿಂದಲೂ ಕೂಡಿ ದಕ್ಷಿಣ ರಾಜನ ಮೇಲೆ ಬಲವಾಗಿ ಬಿದ್ದು ನಾಡುನಾಡುಗಳಲ್ಲಿ ನುಗ್ಗಿ ತುಂಬಿ ತುಳುಕಿ ಹರಡಿಕೊಳ್ಳುವನು" (ಆಂಗ್ಲ ಸೇನೆಯಲ್ಲಿ ಅಡ್ಮೈರಲ್ ನೆಲ್ಸನ್ ಎಂಬಾತನ ವಶದಲ್ಲಿ ನೌಕಾ ಬಲವಿತ್ತು). ನೆಪೋಲಿಯನ್ನನು ದೇಶಗಳನ್ನು ಹೊಕ್ಕು ಅವುಗಳನ್ನು ನಾಶಪಡಿಸುವನು ಜಯಹೊಂದಿದವನಾಗಿ ಹಾದು ಹೋಗುವನು.

ಇತಿಹಾಸವು ನಮಗೆ ತಿಳಿಸುವುದೇನೆಂದರೆ, ಮುರತ್ ಬೇ (Murat Bey) ಎಂಬಾತನ ಅಧೀನದಲ್ಲಿದ್ದ ಐಗುಪ್ತದ ಸೈನ್ಯವು ಒಂದು ನಿರ್ಧಾರಿತ ಹೋರಾಟದ ನಂತರ ಹಿಮ್ಮೆಟ್ಟಿಸಲ್ಪಟ್ಟಿತು... ಫ್ರೆಂಚರ ಜಯವು ದೂರದ ಏಷ್ಯಾ ಮತ್ತು ಆಫ್ರಿಕಾದಲ್ಲಿ ಭೀತಿಯನ್ನುಂಟು ಮಾಡಿತು; ಮತ್ತು ಸುತ್ತಮುತ್ತಲ ಬುಡಕಟ್ಟು ಜನರು ಜಯಶಾಲಿಗೆ ಶರಣಾದರು.... ಆದರೆ ವಿಧಿ ಆತನಿಗೆ ಘೋರವಾದ ವ್ಯತಿರಿಕ್ತತೆಯನ್ನು ಸಿದ್ಧಮಾಡುತ್ತಿತ್ತು. ಯುದ್ಧನೌಕೆಗಳ ಬದಿಯಲ್ಲಿ ಸಾಲಾಗಿದ್ದ ಆತನ ಹದಿಮೂರು ನಾವೆಗಳುಳ್ಳ ನೌಕಾಬಲವು ಅಬೋಕಿರ್ ಕೊಲ್ಲಿ (Aboukir bay)ಯಲ್ಲಿ ಇಂಗ್ಲಿಷ್ ಕಮಾಂಡರ್ ನೆಲ್ಸನ್ನನಿಗೆ ಕಂಡುಬಂತು. ಆತನು ಇವುಗಳಿಗಾಗಿ ಬಹಳ ಕಾಲದಿಂದ ಬೆನ್ನತ್ತಿದ್ದನು. ಆತನು ಇದರ ಮೇಲೆ 01 ಅಕ್ಟೋಬರ್ 1798 ರಂದು ತನ್ನೆಲ್ಲಾ ಬಲ ಮತ್ತು ಕಾರ್ಯಾಚರಣೆಗಳೊಂದಿಗೆ ಸುಂಟರ ಗಾಳಿಯಂತೆ ಆಕ್ರಮಣಮಾಡಿದನು. ಅದನ್ನು ಹಡಗು ಯುದ್ಧ ಸಂಗ್ರಾಮದಲ್ಲಿ ಇದುವರೆಗೆ ಎಂದೂ ಮೀರಿಸಿಲ್ಲ".

ವಚನಗಳು 41– 43: "ಅಂದಚಂದದ ದೇಶಕ್ಕೂ ನುಗ್ಗುವನು; ಅನೇಕ ಸೀಮೆಗಳು ಅವನಿಂದ ಹಾಳಾಗುವುದು; ಆದರೆ ಎದೋಮ್ಯರೂ, ಮೋವಾಬ್ಯರೂ, ಅಮ್ಮೋನಿನ ಹೆಚ್ಚಿನ ಭಾಗದವರು, ಇವರುಗಳು ಅವನ ಕೈಯಿಂದ ತಪ್ಪಿಸಿಕೊಳ್ಳುವರು". (ನೆಪೋಲಿಯನ್ನನು ದಂಡೆಯಲ್ಲೇ ಉಳಿದನು, ಒಳಪ್ರವೇಶಿಸದೆ ಎಲ್ಲಾ ದೇಶಗಳನ್ನು ದಾಟಿ ಹೋದನು.) "ಅವನು ದೇಶಗಳ ಮೇಲೆ ಕೈಮಾಡಲು ಐಗುಪ್ತ ದೇಶವೂ ತನ್ನನ್ನು ರಕ್ಷಿಸಿಕೊಳ್ಳದು. ಅವನು ಬೆಳ್ಳಿ ಬಂಗಾರಗಳ ನಿಧಿನಿಕ್ಷೇಪಗಳನ್ನೂ ಐಗುಪ್ತ ಒಳ್ಳೊಳ್ಳೆಯ ಸಮಸ್ತ ವಸ್ತುಗಳನ್ನೂ ವಶಪಡಿಸಿಕೊಳ್ಳುವನು; ಲೂಬ್ಯರೂ, ಕೂಷ್ಯರೂ ಅವನನ್ನು ಹಿಂಬಾಲಿಸಿ ಹೋಗುವರು".

ವಚನಗಳು 44–45: "ಹೀಗಿರಲು, ಮೂಡಲಿಂದಲೂ, ಬಡಗಲಿಂದಲೂ ಬರುವ ಸುದ್ಧಿಯು ಅವನನ್ನು ಬಾಧಿಸುವುದು; ಅವನು ಅತಿರೋಷಗೊಂಡು ಬಹುಜನರನ್ನು ಧ್ವಂಸಿಸಿ ನಿರ್ನಾಮ ಮಾಡುವುದಕ್ಕೆ ಹೊರಡುವನು. ಸಮುದ್ರಕ್ಕೂ ಅಂದಚಂದದ ಪರಿಶುದ್ಧ ಪರ್ವತಕ್ಕೂ ನಡುವೆ ಅರಮನೆಯಂಥ ತನ್ನ ಗುಡಾರಗಳನ್ನು ಹಾಕಿಸಿಕೊಳ್ಳುವನು; ಆಹಾ, ಅವನು ಕೊನೆಗಾಣುವನು; ಯಾರೂ ಅವನಿಗೆ ಸಹಾಯ ಮಾಡರು." ಈ ಹೇಳಿಕೆಯು ತಾಬೋರ್ ಪರ್ವತ (Mt Tobor) ಮತ್ತು ಸಿನಾಯ್ ಪರ್ವತ (Mt Sinai) ಇವುಗಳಲ್ಲಿ ಒಂದಾಗಿರಬಹುದು, ಅವರೆಡೂ ಪವಿತ್ರವೂ, ಭವ್ಯವೂ ಆದ ಪರ್ವತಗಳು, ಹಾಗೂ ತಾಬೋರ್ ಪರ್ವತವು ನಮ್ಮ ಕರ್ತನು ರೂಪಾಂತರಗೊಂಡ ಸ್ಥಳ ಎಂಬುದಾಗಿ ಹೇಳುತ್ತಾರೆ. ಪೇತ್ರನು ಇದನ್ನು ಪವಿತ್ರ ಪರ್ವತ ಎಂದಿದ್ದಾನೆ. ಇವುಗಳ ನಡುವೆ ನೇಪೋಲಿಯನ್ನನ ಗುಡಾರಗಳು ಹಾಕಲ್ಪಟ್ಟವು ಮತ್ತು ಅಲ್ಲಿ ಆತನ ಬಹುಮುಖ್ಯವಾದ ಯುದ್ಧವು ನಡೆಯಿತು. ಸಿನಾಯ್ ಪರ್ವತವು ಪವಿತ್ರವೂ, ಭವ್ಯವೂ ಆಗಿದ್ದು ಅಲ್ಲಿ ದೇವರ ಮತ್ತು ಇಸ್ರಾಯೇಲ್ಯರ ನಡುವಣ ಪವಿತ್ರ ನಿಬಂಧನೆಗಳು ಊರ್ಜಿತವಾದವು. ಇದಕ್ಕೆ ನೆಪೋಲಿಯನ್ನನೂ ಮತ್ತು ಆತನ 'ಪರಿಣಿತ ಸೈನಿಕ ತಂಡ' ಹಾಗೂ ಆಯ್ದ ರಕ್ಷಕರು ಭೇಟಿಕೊಟ್ಟರು.

"ಮೂಡಲಿಂದಲೂ ಬಡಗಲಿಂದಲೂ ಬರುವ ಸುದ್ಧಿಯು ಆತನನ್ನು ಬಾಧಿಸಿದವು". ಹೀಗಾಗಿ ಅವನು ಅತಿರೋಷಾವೇಶಗೊಂಡು ಬಹುಜನರನ್ನು ಧ್ವಂಸಿಸಿ ನಿರ್ನಾಮಮಾಡಲು ಹೊರಡುವನು. ಆದಾಗ್ಯೂ ಆತನು ತನ್ನ ಅಂತ್ಯವನ್ನು ಕೊನೆಗಾಣುವನು. ಯಾರೂ ಅವನಿಗೆ ಸಹಾಯ ಮಾಡರು.

ಐಗುಪ್ತದಲ್ಲಿರುವಾಗ ಫ್ರಾನ್ಸಿನ ವಿರುದ್ಧವಾದ ನೂತನ ಮೈತ್ರಿಯ ಸುದ್ಧಿಯು ನೆಪೋಲಿಯನ್ನನಿಗೆ ತಲುಪಿತು. ತಕ್ಷಣವೇ ಆತನು ಫ್ರಾನ್ಸಿಗೆ ಹೊರಟನು. ಈ ಬಗ್ಗೆ ಚರಿತ್ರೆಯು ವಿಲ್ಲಾರ್ಡ್‌ರ ವಿಶ್ವ ಇತಿಹಾಸ, ಪುಟ 446 (Willard's Universal History, 446) ಹೇಳುವುದೇನೆಂದರೆ "ಯೂರೋಪಿನಿಂದ ಬಂದ ಗುಪ್ತಚರ ಸಮಾಚಾರವು ಆತನನ್ನು ಐಗುಪ್ತವನ್ನು ತೊರೆದುಬಿಡುವಂತೆ ಪ್ರೇರೇಪಿಸಿತು; ಆತನು ತನ್ನ ಸೈನ್ಯವನ್ನು ಕ್ಲೆಬರ್ (Kleber)ನ ವಶಕ್ಕೆ ಬಿಟ್ಟು ಗುಪ್ತವಾಗಿ, ಜಾಗ್ರತೆಯಿಂದ ಫ್ರಾನ್ಸಿಗೆ ಹಿಂತಿರುಗಿದನು.... ಫ್ರೆಂಚಿನ ವ್ಯವಹಾರಗಳಲ್ಲಿಯೂ ವ್ಯತಿರಿಕ್ತವಾದ ಸಂಗತಿಗಳು ನಡೆದಿದ್ದವು, ಫ್ರಾನ್ಸಿನ ವಿರುದ್ಧವಾಗಿ ಎರಡನೆಯ ಮೈತ್ರಿಯೊಂದು ರಚಿಸಲಾಗಿತ್ತು. ಅದರಲ್ಲಿ ಇಂಗ್ಲೆಂಡ್, ರಷ್ಯಾ, ನೇಪಲ್ಸ್, ಒಟ್ಟೋಮನ್ ಪೋರ್ಟೆ ಮತ್ತು ಆಸ್ಟ್ರಿಯಾ ಇವುಗಳು ಸೇರಿಕೊಂಡಿದ್ದವು. ಚರಿತ್ರೆಯ ಈ ಮಾತುಗಳನ್ನು ಪೂರ್ವ ಮತ್ತು ಉತ್ತರ ದಿಕ್ಕುಗಳ ವರ್ತಮಾನಗಳು ಆತನನ್ನು ಬಾಧಿಸಿದವು. ಹೀಗಾಗಿ ಆತನು ರೋಷಾವೇಶದಿಂದ ಬಹು ಜನಾಂಗಗಳನ್ನು ಧ್ವಂಸಿಸಿ ನಿರ್ನಾಮಮಾಡಲು ಹೊರಡುವನು" ಎಂಬ ಪ್ರವಾದನೆಯೊಂದಿಗೆ ಹೋಲಿಸಿರಿ. ನೆಪೋಲಿಯನ್ನನ ಮಹಾರೋಷವು, ಮತ್ತು ಯೂರೋಪಿನ ಎಲ್ಲಾ ದೇಶಗಳನ್ನೂ ನಿರ್ನಾಮ ಮಾಡುವ ಆತನ ಪ್ರಯತ್ನವು ಎಲ್ಲರಿಗೂ ಚೆನ್ನಾಗಿ ತಿಳಿದ ಸಂಗತಿಯಾಗಿದ್ದು ಇಲ್ಲಿ ಅದರ ಪುನಃರುಚ್ಚರಣೆಯ ಅಗತ್ಯವಿದೆ. ಆತನು ತನ್ನ ಮಹತ್ವಾಕಾಂಕ್ಷೆಯ ಸಂಕಲ್ಪಗಳಲ್ಲಿ ಬಹುವಾಗಿ ಸಫಲನಾಗಿದ್ದಾನೆ; ಆದಾಗ್ಯೂ, ಪ್ರವಾದಿಯು ಮುಂತಿಳಿಸಿರುವಂತೆ, ಕೆಲವೇ ವರ್ಷಗಳಲ್ಲಿ ಆತನ ಕಾಲದ ಈ ಅತ್ಯಂತ ಗಮನೀಯ ವ್ಯಕ್ತಿಯು, ದೇಶಭ್ರಷ್ಟನಾಗಿ ಮರಣವನ್ನಪ್ಪುತ್ತಾನೆ, ಎಲ್ಲರೂ ಆತನನ್ನು ತೊರೆದುಬಿಡುವರು.

ನಲ್ವತ್ತನೆಯ ವಚನವು ಪ್ರಕಟಿಸಿರುವಂತೆ ಐಗುಪ್ತದ ಮೇಲಿನ ಈ ದಂಡಯಾತ್ರೆಯು "ಅಂತ್ಯಕಾಲದಲ್ಲಿ" (ಡಾವೆ ಭಾಷಾಂತರದಲ್ಲಿ ಇದೇ ಅರ್ಥ ದೊರೆಯುತ್ತದೆ) ಅಥವಾ "ಮೊದಲೇ ನಿಗದಿತವಾದ ಕ್ಲುಪ್ತಸಮಯದಲ್ಲಿ" ನಡೆಯುತ್ತದೆ ಎಂಬುದು 29 ಮತ್ತು 30ನೇ ವಚನಗಳಲ್ಲಿಯೂ ಉಲ್ಲೇಖಿಸಲ್ಪಟ್ಟಿದೆ. ಇದನ್ನು ಮೊದಲಲ್ಲಿ ಉಪವಾಕ್ಯವನ್ನಾಗಿ ಪರಿಚಯಿಸಲಾಗಿದೆ. ನಾವು ವಚನ 25–28ರ ವಚನಗಳು ಐಗುಪ್ತದ ಮೇಲಿನ ಹಿಂದಿನ ಆಕ್ರಮಣದ ಬಗ್ಗೆ ಆಗಿವೆ ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕಾಗಿದೆ ಮತ್ತು 29–30 ವಚನಗಳಲ್ಲಿ ಮುಂದಿನ ಮಹಾದಂಡಯಾತ್ರೆಯು

"ಕ್ಲುಪ್ತಕಾಲದಲ್ಲಿ" ಅಂದರೆ ವಚನ 40–45ರಲ್ಲಿ ವಿವರಿಸಿರುವಂತೆ "ಅಂತ್ಯಕಾಲ"ದಲ್ಲಿ ನೆರವೇರುತ್ತದೆ ಎಂದು ತಿಳಿಸಲಾಗಿದೆ.

"ನಿಗದಿತ ಸಮಯದಲ್ಲಿ ಆತನು ಹಿಂತಿರುಗುವನು, ದಕ್ಷಿಣದ ಕಡೆಗೆ ಬರುವನು, ಆದರೆ ಅದು ಹಿಂದಿನ ಅಥವಾ ಎರಡನೆಯ ದಂಡಯಾತ್ರೆಯಂತೆ ಇರುವುದಿಲ್ಲ". ನೆಪೋಲಿಯನ್ನನು ಐಗುಪ್ತದ ಮೇಲೆ ನಡೆಸಿದ ಆಕ್ರಮಣವು ಕ್ಲಿಯೋಪಾತ್ರಳ ದಿನಗಳಲ್ಲಿ ಅಥವಾ ಅಕೆಯ ಸಂತತಿಯವಳಾದ ರಾಣಿ ಜೆನೊಬಿಯಾ (Zenobia)ಳ ದಿನಗಳಲ್ಲಿ ನೀಡಿದ ಫಲಿತಾಂಶಗಳನ್ನು ನೀಡಲಿಲ್ಲ. ನೆಪೋಲಿಯನು ಒಬ್ಬ ಸೇನಾನಿಯಾಗಿ ಐಗುಪ್ತದಲ್ಲಿ ಯಶಸ್ವಿಯಾದರೂ ಆತನ ಹಿಂದಿನವರಂಥಾಃ ಯಾವುದೇ ವಿಜಯವನ್ನು ಸಂಪಾಧಿಸಲಿಲ್ಲ. ಇದಕ್ಕೆ ಕಾರಣವನ್ನು ಮುಂದಿನ ವಚನದಲ್ಲಿ ವಿವರಿಸಲಾಗಿದೆ – "ಅವನಿಗೆ ವಿರುದ್ಧವಾಗಿ ಕಿತ್ತೀಮಿನ (ರೋಮಿನ–Douay) ಹಡಗುಗಳು ಬಂದವು" (ವಚನ 30). ಆಂಗ್ಲ ನೌಕಾಪಡೆಯು ನೆಪೋಲಿಯನ್ನನಿಗೆ ಬಹಳಷ್ಟು ಕಿರುಕುಳವನ್ನು ನೀಡಿತು ಮತ್ತು ಆತನ ವಿಜಯಕ್ಕೆ ಅಡಚನೆಗಳನ್ನುಂಟು ಮಾಡಿತು. ಇಂಗ್ಲೇಂಡ್ ಮಾತ್ರವಲ್ಲದೆ ಫ್ರಾನ್ಸ್ ಇವುಗಳು ಹಿಂದಿನ ರೋಮ್ ಸಾಮ್ರಾಜ್ಯದ ಭಾಗಗಳಾದುದ್ದರಿಂದ, ಮತ್ತು ಫ್ರಾನ್ಸ್ ಆ ಚಕ್ರಾಧಿಪತ್ಯದ ಶೇಷಭಾಗದ ಮೇಲೆ ಯುದ್ಧಮಾಡುತ್ತಿದ್ದುದರಿಂದ, ಅದನ್ನು ಗೆದ್ದುಕೊಳ್ಳಲು ಪ್ರಯಾಸಪಡುತ್ತಿದ್ದುದರಿಂದ, ನಾವು ಇವುಗಳ ಔಚಿತ್ಯತೆಯನ್ನು ರೋಮನ್ ಹಡಗುಗಳು ಎಂದು ಕರೆಯುತ್ತೇವೆ. "ಅವನು ಎದೆಗುಂದಿ ಹಿಂದಿರುಗಿ ಪರಿಶುದ್ಧ ನಿಬಂಧನೆಗಳ ಮೇಲೆ ಮತ್ಸರಗೊಂಡು ಮಾಡುವಷ್ಟು ಮಾಡುವನು" (ವಚನ 30). ಆತನು ಇದರಲ್ಲಿ ಜಯಹೊಂದುವನು.

ಈಜಿಪ್ಟ್‌ನಿಂದ ಹಿಂತಿರುಗಿದ ನಂತರ, ನೆಪೋಲಿಯನ್ ತನ್ನ ಹಿಂದಿನ ಪೋಪ್ ಆಳ್ವಿಕೆ ವಿರುದ್ಧವಾದ ಹಿಂಸಾತ್ಮಕ ವಿರೋಧಿನೀತಿಯನ್ನು ತ್ಯಜಿಸಿದನು ಮತ್ತು ಪೋಪ್‌ನೊಂದಿಗೆ ಕರಾರು ಅಥವಾ ಒಪ್ಪಂದಕ್ಕೆ ಸಹಿ ಹಾಕಿದನು. ಈ ಮೂಲಕ ರೋಮನ್ ಕ್ಯಥೋಲಿಕ್ ಧರ್ಮವನ್ನು ಫ್ರಾನ್ಸ್‌ನಲ್ಲಿ ಪುನಃ ಸ್ಥಾಪಿಸಲಾಯಿತು. ಇದು ಸತ್ಯದ ವಿರುದ್ಧದ ಕ್ರಮವಾಗಿತ್ತು. ಆದರೆ ಈ ನೀತಿಯಿಂದ ಅವನು ಗಣರಾಜ್ಯವನ್ನು ಉರುಳಿಸುವಲ್ಲಿ ಮತ್ತು ಸ್ವತಃ ಚಕ್ರವರ್ತಿಯಾಗಿ ಅಧಿಕಾರ ಸ್ಥಾಪಿಸುವಲ್ಲಿ ಯಶಸ್ವಿಗೊಳಿಸಬಹುದೆಂದು ಅವರು ನೋಡಿದನು ಹಾಗೂ ಯಶಸ್ವಿಯಾದನು. ಆದರೆ ಈ ನೀತಿಯು ಅವನು ಸಾಮ್ರಾಜ್ಯಶಾಹಿ ಅಧಿಕಾರವನ್ನು ಪಡೆದ ನಂತರ ಹೆಚ್ಚು ಕಾಲ ಉಳಿಯಲಿಲ್ಲ. ಪ್ರವಾದನೆಯು ಈ ಕೆಳಗಿನ ಪದಗಳಲ್ಲಿ ವಿವರಿಸಿದಂತೆ "ಅಧರ್ಮ ಸ್ವರೂಪನು" (Man of Sin) ಎಂಬ ವ್ಯವಸ್ಥೆಗೆ ವಿರುದ್ಧವಾಗಿ ಕೆಲಸ ಮಾಡಲು ಪ್ರಾರಂಭಿಸಿದನು ಮತ್ತು ಅವನು (ನೆಪೋಲಿಯನ್) ಹಿಂದಿರುಗುತ್ತಾನೆ (ಬದಲಾವಣೆ ಬಗ್ಗೆ) ಮತ್ತು ಶುದ್ಧೀಕರಣದ ಒಡಂಬಡಿಕೆಯನ್ನು ತೊರೆದವರ ವಿರುದ್ಧ ರೂಪಿಸುತ್ತಾನೆ. ಅಂದರೆ, ಅವನು ರೋಮನ್ ಧರ್ಮಭ್ರಷ್ಟ ಚರ್ಚ್ ವಿರುದ್ಧ ಯೋಜನೆ ಮತ್ತು ಕಾರ್ಯಾಚರಣೆ ನಡೆಸಲು ಪ್ರಾರಂಭಿಸಿದನು. ಇದರಲ್ಲಿ ಯಶಸ್ವಿ ಕೂಡ ಆದನು.

ಹೀಗೆ ತೀಕ್ಷ್ಣ ರೀತಿಯಲ್ಲಿ ದಾನಿಯೇಲ 11ನೇ ಅಧ್ಯಾಯವು ಪ್ರಪಂಚದ ಇತಿಹಾಸವನ್ನು ಪರ್ಷಿಯಾ ರಾಜ್ಯದಿಂದ ಪೋಪನ ರಾಜ್ಯವನ್ನು ಉರುಳಿಸುವವರೆಗೂ ಅದರ ಬಹು ಗಮನೀಯ ಗುಣಲಕ್ಷಣಗಳಿಂದ ಪತ್ತೆಹಚ್ಚುತ್ತದೆ. ಇಪ್ಪತ್ನಾಲ್ಕುನೂರು ವರ್ಷಗಳ ದೀರ್ಘಕಾಲವನ್ನು ಆವರಿಸಿದ್ದರೂ, ಅದು ಅಂತ್ಯಕಾಲದ ಪ್ರಾರಂಭ ವರ್ಷವನ್ನು ಕ್ರಿ.ಶ. 1799 ಎಂದು ಗುರುತುಪಡಿಸುವಲ್ಲಿ ತನ್ನ ಉದ್ದೇಶವನ್ನು ಯಶಸ್ವಿಯಾಗಿ ನಿರ್ವಹಿಸುತ್ತದೆ. ಆ ವರ್ಷದಿಂದ ಪೋಪನ 1260ವರ್ಷಗಳ ದಬ್ಬಾಳಿಕೆಯ ಅಧಿಕಾರದ ಮಿತಿಯು ಮುಕ್ತಾಯಗೊಂಡಿತು ಮತ್ತು ಅಂತ್ಯ ಕಾಲವು ಪ್ರಾರಂಭವಾಯಿತು. ಇದು ಪೋಪನ ಅಧಿಕಾರದ ಸಹಸ್ರಮಾನದ ಅಥವಾ ಆಳ್ವಿಕೆಯ ಒಂದು ಸಾವಿರ ವರ್ಷಗಳ ಕಡೆಯ ವರ್ಷ ಎಂಬುದನ್ನು ಉದಾಸೀನ ಮಾಡದೇ ಇರೋಣ. ಅದು ಹಿಂದಿನ ಸಂಪುಟದಲ್ಲಿ ತೋರಿಸಿದಂತೆ ಕ್ರಿ.ಶ.799ರಲ್ಲಿ ಪ್ರಾರಂಭವಾಗಿತ್ತು. ಆದರೆ ಕ್ರಿ. ಶ. 1799 ಅಂತ್ಯಕಾಲವೆಂದು ಕರೆಯುವ ಅವಧಿಯ ಪ್ರಾರಂಭವಷ್ಟೆ. ಆ ಸಮಯದೊಳಗಾಗಿ ವ್ಯವಸ್ಥೆಯ ಎಲ್ಲಾ ಕುರುಹುಗಳೂ ತೀರಿಹೋಗುವುವು.

ವಚನ 34, 35ರಲ್ಲಿನ ಕೆಲವೇ ಮಾತುಗಳಲ್ಲಿ ಸುಧಾರಣೆಯ ಅವನತಿ (Reformation) ಮತ್ತು ಅವುಗಳ ಕಾರಣಗಳನ್ನು ವಿವರಿಸಲಾಗಿದೆ ಎಂಬುದನ್ನು ಗಮನಿಸಿರಿ. ಲೋಕದ ಮೇಲಿನ ಪ್ರೀತಿ, ಮತ್ತು ಅಧಿಕಾರದಲ್ಲಿರಬೇಕೆಂಬ ಬಯಕೆ, ಪ್ರಭಾವ ಮತ್ತು ನಿಶ್ಚಿಂತತೆ ಇವುಗಳು ಸಭೆಯನ್ನು ಮೊದಲಿಗೆ ಭ್ರಷ್ಟಗೊಳಿಸಿ ಪೋಪನ ಅಧಿಕಾರವನ್ನು ಮುಂದಕ್ಕೆ ತಂದ ಪಾಶಗಳಾಗಿವೆ; ಅದೇ ಬಯಕೆಗಳು ಮತ್ತು ಪರಿಶ್ರಮಗಳು ಸುಧಾರಣೆಯನ್ನು ಭಂಗಪಡಿಸಿದವು. ಲೂಥರ ಮತ್ತು ಆತನ ಜೊತೆಗಾರರು ಮೊದಲಿಗೆ ಧೈರ್ಯವಾಗಿ

ಆಪಾದಿಸಿದರು. ಪೋಪನ ಬೇರೆ ತಪ್ಪುಗಳೊಡನೆ ಕ್ರೈಸ್ತ ಸಭೆ ಮತ್ತು ದೇಶದ ಅನ್ಯೋನ್ಯತೆಯನ್ನು ಖಂಡಿಸಿದರು, ಆದರೆ, ಬಲಶಾಲಿ ವಿರೋಧಗಳ ಧೀರತೆಯ ಪ್ರತಿರೋಧದ ಸ್ವಲ್ಪ ವರ್ಷಗಳ ನಂತರ, ಸುಧಾರಣೆಯು ಸಮುದಾಯದ ನಿಮಿತ್ತ ಪ್ರಭಾವಶಾಲಿಯಾಯಿತು, ರಾಜ ರಾಣಿಯರು ಸುಧಾರಕರನ್ನು ಮುಖಸ್ತುತಿ ಮಾಡಲು ತೊಡಗಿದಾಗ, ಮತ್ತು ಸಾಮಾಜಿಕ ಮತ್ತು ರಾಜಕೀಯ ಆದ್ಯತೆಗಳ ಮಾರ್ಗವು ಅವರಿಗೆ ತೆರೆದುಕೊಂಡಾಗ, ಸಭೆಯ ಮತ್ತು ರಾಜ್ಯದ ಅನ್ಯೋನ್ಯತೆಯಲ್ಲಿ ಕೆಡುಕುಗಳನ್ನೂ ಹಾಗೂ ಪೋಪನ ಅಧಿಕಾರವನ್ನು ಕಂಡು ಹಿಂದೆ ವಿರೋಧಿಸಿದವರಿಗೆ ಈಗ ಅವರ ದೃಷ್ಟಿಗೆ ಅದು ಮರೆಯಾಯಿತು. ಜರ್ಮನಿ, ಸ್ವಿಜರ್‌ಲ್ಯಾಂಡ್ ಮುಂತಾದ ಕಡೆಗಳಲ್ಲಿನ ಸುಧಾರಿತ ಕ್ರೈಸ್ತ ಸಭೆಗಳು ರೋಮಿನದೇ ಪಾದರಕ್ಷೆಯಲ್ಲಿ ಕಾಲು ತೂರಿಸಿದರು ಮತ್ತು ಯಾವುದೇ ರಾಜಕೀಯ ಪಕ್ಷದೊಂದಿಗೆ, ಅರಸರು ಮತ್ತು ಸರ್ಕಾರದೊಡನೆ ಕೂಡಿ ಅದರ ಪರವಾಗಿ ನಿಲ್ಲಲು ಅವುಗಳನ್ನು ಒಪ್ಪಿಕೊಂಡು ಮಾನ್ಯ ಮಾಡಲು ಸಿದ್ಧವಾದವು. ಹೀಗಾಗಿ ಕೆಲವೊಂದು ವಿವೇಚನಾ ಸಾಮರ್ಥ್ಯವು ಸೋತುಹೋದವು ಮತ್ತು ಸುಧಾರಣೆಯ ನಾಯಕರಾಗಿದ್ದವರು ಅವರ ಪ್ರಲೋಭನೆಗಳ ನಾಯಕರುಗಳಾದರು. ಈ ರೀತಿಯಲ್ಲಿ ಸುಧಾರಣಾ ಚಳುವಳಿಯು ಒಳ್ಳೇ ರೀತಿಯಲ್ಲಿ ಪ್ರಾರಂಭವಾಗಿದ್ದು, ಬಹಳ ಹೆಚ್ಚಾಗಿ ತಡೆ ಹೊಂದಿತು.

ಆದರೆ, ಇದರಿಂದ ದೇವರ ಯೋಜನೆಯನ್ನು ನಿಷ್ಫಲಗೊಳಿಸಲು ಸಾಧ್ಯವಾಗಲಿಲ್ಲ. ಆತನ ಜ್ಞಾನದಿಂದ ಒಳ್ಳೇದಕ್ಕಾಗಿ ಅದನ್ನು ತಳ್ಳಿಹಾಕಲಾಯಿತು. ಅದು ಪೋಪನ ತಪ್ಪುಗಳನ್ನು ಬಯಲುಪಡಿಸಿ ಮುಂದೆ ಭಕ್ತರನ್ನು ಅವರು ನಿಜವಾಗಿಯೂ ದೇವರ ಅನುಯಾಯಿಗಳೋ ಅಥವಾ ಮಾನವನ ಅನುಯಾಯಿಗಳೋ ಎಂಬುದನ್ನು ಪರೀಕ್ಷೆ ಮಾಡುವುದಾಯಿತು. ಅದು ಅಂದಿನಿಂದ ಇಂದಿನವರೆಗೂ ಈ ಉದ್ದೇಶ ನೆರವೇರುತ್ತಾ ಬಂದಿದೆ ಮತ್ತು "ಜನರು ಶೋಧಿಸಲ್ಪಟ್ಟ ಶುದ್ಧಿ ಹೊಂದಿ ಶುಭ್ರರಾಗುವರು".

ನಾವು ಅಂತ್ಯಕಾಲದ ಪ್ರಾರಂಭವನ್ನು 1799 ಎಂದು ಗೊತ್ತುಮಾಡುವುದು ಸರಿಯಾಗಿರುವುದಾದರೆ, ನಾವು ಸಭೆಯ ಮತ್ತು ರಾಜ್ಯದ ಒಕ್ಕೂಟಗಳ ತಪ್ಪುಗಳಲ್ಲಿ ಬೀಳುವದು ಸಾಕಷ್ಟು ನಿಲ್ಲುವದು ಎಂದು ನಿರೀಕ್ಷಿಸಬಹುದು. ಈ ಕೆಡುಕನ ಪಾಶದಿಂದ ಪೂರ್ಣವಾಗಿ ಸುಧಾರಿಸಿಕೊಳ್ಳಲು ಬಹಳ ಸಮಯವೇ ಹಿಡಿಯಬಹುದು. ಹಿಂದಿರುಗಿ ನೋಡುವಾಗ, ಸತ್ಯವು ಇದಕ್ಕೆ ಅನುಗುಣವಾಗಿರುವುದನ್ನು ನಾವು ನೋಡಬಹುದಾಗಿದೆ. ಆ ದಿನದಿಂದ ರಾಜ್ಯಗಳಿಗೂ, ಸಭೆಗಳಿಗೂ ಪ್ರತ್ಯೇಕತೆ ಉಂಟಾಯಿತು, ಆದರೆ ಯಾವುದೇ ಹೊಸ ಒಕ್ಕೂಟಗಳು ಉಂಟಾಗಲಿಲ್ಲ. ನಿಜವಾಗಿಯೂ ಈ ದಿನಾಂಕವು ಹೆಚ್ಚು ಗಣನೀಯ ಆಧಾರದಲ್ಲಿ ನೂತನ ಸುಧಾರಣೆಯ ಗುರುತಾಗಿದೆ. ಯೂರೋಪ್ ರಾಜ್ಯದ ಮೇಲೆ ಪೋಪನ ಅಧಿಕಾರದ ಪ್ರಭಾವವು ಈ ಹಿಂದೆ ಮಹತ್ವವಾಗಿದ್ದು ಅದರ ಶಾಪವು ರಾಷ್ಟ್ರಗಳನ್ನು ಕ್ಷೀಣಿಸುವ ರೋಗದಂತೆ ಭಯಪಡಿಸುತ್ತಿದೆ ಮತ್ತು ಅದರ ಆಶೀರ್ವಾದವು ರಾಷ್ಟ್ರದ ಅಭ್ಯುದಯವನ್ನು ಬಯಸುವಂತದ್ದಾಗಿದೆ. ಪ್ರೊತಸ್ತಾಂತರು ಪೋಪನ ಅಧಿಕಾರದಿಂದ ಬೇರ್ಪಟ್ಟಾಗ, ಈ ಲೋಕವು ಅವರನ್ನು ಪೋಪರ ಅಧಿಕಾರದಿಂದ ಕೇವಲ ಕಡಿಮೆ ಭ್ರಷ್ಟ ಬದಲಿಯಾಗಿ ಸ್ವೀಕರಿಸಿತು; ಮತ್ತು ಅವರ ಕೃಪೆ, ಬುದ್ಧಿವಾದ ಮತ್ತು ಮಂಜೂರಾತಿಗಳನ್ನು ಅದೇ ರೀತಿಯಲ್ಲಿ ಬಯಸಲಾಯಿತು. ಆದರೆ ನೆಪೋಲಿಯನ್ನನು ಪೋಪನ ಅಧಿಕಾರದ ಆಶೀರ್ವಾದ, ಶಾಪ ಇವುಗಳೆರಡನ್ನೂ ಕಡೆಗಣಿಸಿದ್ದಾಗ್ಯೂ, ಅಸಾಧಾರಣವಾಗಿ ಅಭ್ಯುದಯ ಹೊಂದಿದ್ದರಿಂದ, ಆತನ ಕ್ರಮವು ನಾಗರೀಕ ಸರಕಾರಗಳ ಮೇಲೆ ಪೋಪನ ಪ್ರಭಾವವನ್ನು ಬಹಳವಾಗಿ ಬಲಹೀನಗೊಳಿಸಿತಲ್ಲದೆ, ಸುಮಾರು ಎರಡೂವರೆ ಶತಮಾನ ಕಾಲಗಳಲ್ಲಿ ನಾಗರೀಕ ಮತ್ತು ರಾಜಕೀಯ ವಲಯಗಳಲ್ಲಿನ ಅತ್ಯಂತ ಪ್ರಭಾವಿತವಾಗಿದ್ದ ಪ್ರೊತಸ್ತಾಂತರ ವಿವಿಧ ವ್ಯವಸ್ಥೆಗಳನ್ನೂ ಬಲಹೀನಗೊಳಿಸಿತು.

ನೆಪೋಲಿಯನ್ನನ ದಿನಗಳಿಂದಲೂ ಜಾರಿಯಲ್ಲಿರುವ ಈ ಸುಧಾರಣೆಯು ಧಾರ್ಮಿಕ ಚಳುವಳಿಯಲ್ಲವಾದರೂ ಅಥವಾ ಧಾರ್ಮಿಕ ಮತಾಭಿಮಾನದಿಂದ ಉತ್ತೇಜಿಸಲ್ಪಡದೇ ಹೋದರೂ ಅದು ಲೂಥರನು ಮತ್ತು ಆತನ ಸಂಗಡಿಗರು ತಂದ ಸುಧಾರಣೆಗಿಂತ ಕಡಿಮೆಯಾದುದೇನಲ್ಲ. ಅದರ ಪಾತ್ರಧಾರಿಗಳಿಗೆ ತಾವು ಪ್ರವಾದನೆಗಳಲ್ಲಿ ನೂರಾರು ವರ್ಷಗಳ ಹಿಂದೆ ತಮಗಾಗಿ ಗುರುತುಪಡಿಸಿದ ಸತ್ಯವನ್ನು ನೆರವೇರಿಸುತ್ತಿದ್ದೇವೆಂಬುದು ತಿಳಿದಿರಲಿಲ್ಲ. ನೆಪೋಲಿಯನ್ನನು ಮತ್ತು ಆತನ ಜೊತೆ ಕಾರ್ಯಕರ್ತರು ದೇವರಿಲ್ಲದವರಾಗಿದ್ದರು. ಅಧಿಕಾರದ ಆಕಾಂಕ್ಷೆ ತಮ್ಮ ಸ್ವಂತ ಉತ್ಸಾಹದಿಂದ ಕೂಡಿದವರಾಗಿದ್ದರು. ಆದರೆ ದೇವರು, ಅವರಿಗೆ ತಿಳಿಯದ ಹಾಗೆ ಅವರ ಕ್ರಮವನ್ನು ತಳ್ಳಿಹಾಕಿ ಅದು ತನ್ನ ಸಂಕಲ್ಪಕ್ಕನುಸಾರವಾಗಿ ಕಾರ್ಯಗತಗೊಳ್ಳುವಂತೆ ಮಾಡಿದನು. ಅದು ಹಾಗೆಯೇ ಪರಿಣಾಮಕಾರಿಯಾಗಿ

ನೆರವೇರಿತು. ದೇವರು ಸಭೆಯಲ್ಲಿ ಮೊದಲು ಪ್ರಾರಂಭಿಸಿದ ಸುಧಾರಣೆಯು ಮುಂದುವರೆಯುತ್ತಿದ್ದರೆ, ಸುಧಾರಕರುಗಳು ಮತ್ತು ಅವರ ಸಂತತಿಯವರು ಸತ್ಯಕ್ಕೆ ನಿಷ್ಠೆಯುಳ್ಳವರಾಗಿ ಮುಂದುವರೆಯುತ್ತಿದ್ದರೆ, ಆತನ ಮಹಾ ಸಂಕಲ್ಪವು ಅವರ ಗೌರವಾರ್ಹ ಕಾರಣತ್ವದ ಮೂಲಕ ನೆರವೇರಬಹುದಿತ್ತು. ಆದರೆ ಅವರುಗಳು ಈ ಲೋಕದ ಮುಖಸ್ತುತಿಗೆ ಬಲಿಯಾಗಿದ್ದಾಗ ದೇವರು ತನ್ನ ಉದ್ದೇಶವನ್ನು ನೆರವೇರಿಸಲು ಬೇರೆ ಮಾರ್ಗಗಳೂ ಉಂಟೆಂಬುದನ್ನು ತೋರಿಸಿದನು.

ಫ್ರೆಂಚ್ ಚಳುವಳಿಯೊಂದಿಗೆ ನೆಪೋಲಿಯನ್ನನ ಕಾರ್ಯಗಳು ಧಾರ್ಮಿಕ ಮೂಢನಂಬಿಕೆಗಳ ಆಕರ್ಷಣೆಯು ಮುರಿದುಬಿತ್ತು. ತಮ್ಮನ್ನು ತಾವೇ ಹೆಚ್ಚಿಸಿಕೊಂಡಿರುವ ಧಾರ್ಮಿಕ ಪ್ರಭುಗಳ ಸೊಕ್ಕನ್ನು ಮುರಿಯಿತು. ಪ್ರಪಂಚವನ್ನು ಮಾನವತ್ವದ ಹಕ್ಕು ಮತ್ತು ವಿಶೇಷಾಧಿಕಾರದ ಪೂರ್ಣ ತಿಳುವಳಿಕೆಯತ್ತ ನಡೆಸಿತಲ್ಲದೇ, ಈ ಹಿಂದೆ ನಡೆದ ಧಾರ್ಮಿಕ ಸುಧಾರಣೆಗಳು ಪೋಪನ ಅಧಿಕಾರಕ್ಕೆ ಬಲವಾದ ಪೆಟ್ಟುಕೊಟ್ಟಿದ್ದಾಗ್ಯೂ ಈಗ ಗುಣಮುಖವಾಗಿದ್ದ (ಪ್ರಕಟನೆ 13:3) ಪೋಪನ ಪ್ರಭುತ್ವವನ್ನು ಮತ್ತೊಮ್ಮೆ ಹತ್ತಿಕ್ಕಲಾಯಿತು. ಕ್ರಿ.ಪೂ. 1799ರಲ್ಲಿ ಮುಕ್ತಾಯ ಗೊಳ್ಳುತ್ತಿರುವ ಯುಗವು ನೆಪೋಲಿಯನ್ನನ ಈಜಿಪ್ಟ್ ದಂಡಯಾತ್ರೆಯಿಂದಾಗಿ ಗುರುತಿಸಲ್ಪಟ್ಟಿತು ಮತ್ತು ವಿವಿಧ ದೇಶಗಳ ಮೇಲೆ ಪೋಪನ ಪ್ರಭುತ್ವದ ಇತಿಮಿತಿಗಳನ್ನು ನಿರೂಪಿಸಿತು. ಅಲ್ಲಿ, ನಿಗದಿತವಾದ ಸಮಯವು (1260 ವರ್ಷಗಳ ಅಧಿಕಾರವು) ತೀರಿತು, ವ್ಯವಸ್ಥೆಯ ವಿರುದ್ಧವಾಗಿ ಮುಂತಿಳಿಸಿದ ತೀರ್ಪು ಪ್ರಾರಂಭವಾಯಿತು. ಅದು ಅಂತಿಮವಾಗಿ "ಆತನ ದೊರೆತನವನ್ನು ಕಿತ್ತು ತೀರಾ ಧ್ವಂಸಮಾಡಿ ಕೊನೆಗಾಣಿಸಿತು" (ದಾನಿ. 7:26).

ಈ ದಿನಾಂಕವು ಆಲೋಚನಾ ಸ್ವಾತಂತ್ರ್ಯದ ಮತ್ತು ವೈಯುಕ್ತಿಕ ಹಕ್ಕುಗಳ ಮತ್ತು ಸವಲತ್ತುಗಳ ಗ್ರಹಿಕೆಯನ್ನುಂಟುಮಾಡುವ ನೂತನ ಯುಗವನ್ನು ಸ್ಪಷ್ಟವಾಗಿ ಗುರುತಿಸುತ್ತದೆ. ಈ ಅಂತಿಮ ಕಾಲಕ್ಕೆ ಗೊತ್ತುಪಡಿಸಿದ ಸಮಯವು ನೆರವೇರುವಂತೆ ಕಾರ್ಯದ ನಕ್ಷೆಯನ್ನು ನಿರೂಪಣೆಗೊಳಿಸಿದ್ದು ಅದು ಪೂರ್ಣ ನೆರವೇರಿಕೆಯ ಪ್ರಗತಿಯತ್ತ ತ್ವರಿತವಾಗಿ ದಾಪುಗಾಲು ಹಾಕುವುದರ ಮೂಲಕ ಈಗಾಗಲೇ ವ್ಯತ್ಯಾಸ ಕಂಡುಕೊಂಡಿದೆ. ಒಂದು ಏಕಾಂಗಿ ಉದಾಹರಣೆಯಾಗಿ, ವಿವಿಧ ಸತ್ಯವೇದ ಸಂಘಗಳ ಉದಯ ಮತ್ತು ಕಾರ್ಯಗಳನ್ನು ಗಮನಿಸಿರಿ. ರೋಮ್ ಇದನ್ನು 'ಹಾನಿಕರ ಸತ್ಯವೇದ ಸಂಘಗಳೆಂದು' ಕರೆದರೂ ಅವುಗಳಿಗೆ ತಡೆಯೊಡ್ಡಲು ಅವರಿಂದ ಸಾಧ್ಯವಿಲ್ಲ. ಒಮ್ಮೆ ಆ ಪವಿತ್ರವಾದ ಸಂಪುಟಗಳ ಸರಪಳಿಯಲ್ಲಿ ಬಂಧಿಸಿಟ್ಟು, ಸತ್ತ ಭಾಷೆಗಳಲ್ಲಿ ಮುಚ್ಚಿಟ್ಟು ತನ್ನ ಪ್ರಜೆಗಳು ಓದದಂತೆ ಮರುಳುಮಾಡಿದವುಗಳು ಮಿಲಿಯಾಂತರದ ಲೆಕ್ಕದಲ್ಲಿ ಲೋಕದ ಪ್ರತಿಯೊಂದು ಭಾಷೆಯಲ್ಲಿಯೂ ಹರಡುತ್ತಿವೆ. ಬ್ರಿಟಿಷ್ ಮತ್ತು ಇನ್ನಿತರ ವಿದೇಶಿ ಸತ್ಯವೇದ ಸಂಘಗಳು ಕ್ರಿ.ಶ. 1803ರಲ್ಲಿ, ನ್ಯೂಯಾರ್ಕ್ ಬೈಬಲ್ ಸಂಘವು ಕ್ರಿ.ಶ. 1804ರಲ್ಲಿ, ಬರ್ಲಿನ್–ಪ್ರೂಷಿಯನ್ ಸತ್ಯವೇದ ಸಂಘವು ಕ್ರಿ.ಶ. 1805ರಲ್ಲಿ, ಫಿಲಿಡೆಲ್ಫಿಯಾ ಸತ್ಯವೇದ ಸಂಘವು ಕ್ರಿ.ಪೂ. 1808ರಲ್ಲಿ ಮತ್ತು ಅಮೆರಿಕಾ ಸತ್ಯವೇದ ಸಂಘವು ಕ್ರಿ.ಪೂ. 1817ರಲ್ಲಿ ಸ್ಥಾಪಿತಗೊಂಡವು. ಈ ಸತ್ಯವೇದ ಸಂಘಗಳು ಈ ಶತಮಾನದಲ್ಲಿ ಕೈಗೊಂಡ ಕಾರ್ಯದ ಅಳತೆಯು ಅದ್ಭುತವಾದುದು. ಪ್ರತಿವರ್ಷವೂ ಮಿಲಿಯಾಂತರ ಸತ್ಯವೇದ ಪ್ರತಿಗಳು ಮುದ್ರಿತ ವಾಗುತ್ತಿದ್ದು ಅವುಗಳು ಅಗ್ಗದ ಕ್ರಯದಲ್ಲಿ ಮಾರಾಟವಾಗುತ್ತಿವೆ. ಸಾವಿರಾರು ಪ್ರತಿಗಳನ್ನು ಬಡವರಿಗೆ ಹಂಚಲಾಗುತ್ತಿದೆ. ಈ ಕಾರ್ಯದ ವಿಸ್ತಾರವಾದ ಪ್ರಭಾವವನ್ನು ಅಂದಾಜಿಸಲೂ ಕಷ್ಟಸಾಧ್ಯ. ಹೆಚ್ಚಿನವು ಸಂಶಾಯಾತೀತವಾಗಿ ಕಳೆದುಹೋಗಿರಬಹುದಾದರೂ, ಸರ್ವಸಾಮಾನ್ಯವಾದ ಫಲಿತಾಂಶವೆಂದರೆ ದಾಸತ್ವದ ಮತ್ತು ಮೂಢ ನಂಬಿಕೆಗಳ ರಾಜಕೀಯ ಮತ್ತು ಕ್ರೈಸ್ತ ಧರ್ಮದ ಬಂಧನಗಳನ್ನು ಮುರಿಯುವುದಾಗಿದೆ. ಪೋಪರುಗಳು, ಪಾದ್ರಿಗಳು, ಜನಸಾಮಾನ್ಯರು, ಮಾತ್ರವಲ್ಲದೆ ಅರಸರುಗಳು, ಸೇನಾಧಿಕಾರಿಗಳು ಮತ್ತು ಬಿಕ್ಷುಕರು ಇವರೆಲ್ಲರೂ ಒಬ್ಬನೇ ಕರ್ತನಿಗೆ ಲೆಕ್ಕ ಒಪ್ಪಿಸಬೇಕು – ಆತನೇ ಮಟ್ಟಗೊಳಿಸುವವರು ಮತ್ತು ಸರಿಸಮ ಮಾಡುವವರಲ್ಲಿ ಅತ್ಯಂತ ಶ್ರೇಷ್ಠನು ಎಂಬುದನ್ನು ಅರ್ಥೈಸುವುದೇ ಇದರ ಮೌನ ಬೋಧನೆಯಾಗಿದೆ.

ಧಾರ್ಮಿಕ ಸುಧಾರಣಾ ಚಳುವಳಿಯು ಯೂರೋಪಿನಾದ್ಯಂತ ಪೋಪನ ಪ್ರಭಾವವನ್ನು ಅಲ್ಲಾಡಿಸಿರಬಹುದಾದರೂ, ಕೆಲವೊಂದು ಸುಧಾರಿತ ಸಭೆಗಳು ಇನ್ನೂ ಆಕೆಯ ರಾಜತಾಂತ್ರಿಕ, ಲೋಕದ ಸಾಮ್ರಾಜ್ಯಗಳೊಡನೆ ಸಂಯೋಜನೆ ಮತ್ತು ಜನರ ಮೇಲೆ ಕ್ರೈಸ್ತ ಪಾದ್ರಿಗಳ ಅಧಿಕಾರ ಮತ್ತು ಪಾದ್ರಿಗಳು ಈ ಲೋಕದಲ್ಲಿ ದೇವರಿಂದ ನೇಮಿತವಾದ ಪ್ರಭುತ್ವವನ್ನು ಹೊಂದಿದ್ದಾರೆ ಎಂಬ ಹಕ್ಕೊಳಿಕೆಗಳು ಇವೇ ಮುಂತಾದ ಕೆಲವೊಂದು ಕಾರ್ಯನೀತಿಗಳನ್ನು ಈಗಲೂ ನಿಕಟವಾಗಿ ಅನುಕರಿಸುತ್ತಿದ್ದು ಸುಧಾರಣೆಯು ಮೊದಲ ಪರಿಣಾಮಗಳು ಬಹಳ ಪರಿಣಾಮಕಾರಿಯಾಗಿ ಮಾರ್ಪಾಟಾಯಿತು. ಇದರಿಂದ ಜನರು ಮತ್ತು

ನಾಗರೀಕ ಆಡಳಿತಗಾರರು ಸಭೆಯ ಅಧಿಕಾರವೆಂದು ಕರೆಯಲ್ಪಡುವ ಎಲ್ಲವುಗಳ ಅಂಧವಿಶ್ವಾಸದ ಭೀತಿಯಲ್ಲಿ ಬಿಡಲ್ಪಟ್ಟಿದ್ದಾರೆ. ಸುಧಾರಣೆಯು ಹಿಂದೆ ಪೋಪನ ಅಧಿಕಾರಕ್ಕೆ ಮಾತ್ರವೇ ಕೇಂದ್ರೀಕೃತವಾಗಿದ್ದ ಕೆಲವು ಅಂಧವಿಶ್ವಾಸದ ಮತ್ತು ಅಹಿತಕರ ಶ್ರದ್ಧೆಯು ಈಗ ಹಲವಾರು ಪಂಥಗಳೊಳಗೆ ವಿಭಜನೆಗೊಂಡಿದೆ. ಆದರೆ ಈ ಹತ್ತೊಂಬತ್ತನೆಯ ಶತಮಾನದಲ್ಲಿನ ರಾಜಕೀಯ ಸುಧಾರಣೆಯು ನಿರ್ದಿಷ್ಟವಾಗಿ ಹಿಂದಿನವುಗಳಿಗಿಂತ ಬಹಳ ಭಿನ್ನವಾಗಿದ್ದರೂ ಅಂತ್ಯಕಾಲ ಸಮಯವಾದ ಕ್ರಿ.ಶ. 1799ರಿಂದ ಆದದ್ದು ಸುಧಾರಣೆಯೇ ಹೌದು. ಅಮೇರಿಕಾದ ವಸಾಹತುಗಳ ಸುಧಾರಣೆ ಮತ್ತು ಸ್ವಾತಂತ್ರ್ಯ, ಯಾವುದೇ ರಾಜಮನೆತದವರ ಅಥವಾ ಪಾದ್ರಿ ವರ್ಗದ ಐಹಿಕ ಧೋರಣೆಗಳ ಮಧ್ಯಪ್ರವೇಶವಿಲ್ಲದೆ ಯಶಸ್ವಿಯಾಗಿ ಸ್ಥಾಪಿತವಾದ ಜನಗಳಿಂದ ಮತ್ತು ಜನರಿಗಾಗಿ ಪ್ರಜಾಪ್ರಭುತ್ವ ಎಚ್ಚತ್ತುಕೊಳ್ಳುವ ಜನರಿಗೆ ಹೊಸಪಾಠವನ್ನು ಸಿದ್ಧಪಡಿಸಿದೆ. ಅವರುಗಳು ಶತಮಾನಗಳ ಕಾಲದಿಂದ ದೇವದತ್ತವಾದ ತಮ್ಮ ಅಧಿಕಾರದ ಬಗ್ಗೆ, ದೇವರು ಸಭೆಯನ್ನು ಈ ಲೋಕದ ಪರಮ ಶ್ರೇಷ್ಟ ಆಡಳಿತಗಾರನನ್ನಾಗಿ ನೇಮಿಸಿದ್ದಾನೆ ಎಂಬ ತಿಳುವಳಿಕೆ ಇಲ್ಲದವರಾಗಿದ್ದರು ಮತ್ತು ಅವರು ಸಭೆಯು ದಯಪಾಲಿಸಿದ ಅರಸರುಗಳು ಮತ್ತು ಚಕ್ರವರ್ತಿಗಳಿಗೆ ಅವರ ಕೇಳಿಕೆಗಳು ಎಷ್ಟೇ ಅನ್ಯಾಯವಾಗಿದ್ದರೂ ಅವಕ್ಕೆ ವಿಧೇಯರಾಗಲು ಬದ್ಧರಾಗಿದ್ದರು. ಯಾಕೆಂದರೆ ಅವರುಗಳು ದೇವರ ಮೂಲಕವಾಗಿ ತನ್ನಿಂದ ನೇಮಕವಾಗಿದ್ದಾರೆ ಎಂದು ಘೋಷಿಸಿಸಲಾಗಿತ್ತು.

ದೀರ್ಘಕಾಲದಿಂದ ತುಳಿಯಲ್ಪಟ್ಟ ಮತ್ತು ಪಾದ್ರಿಗಳು ಎನಿಸಿಕೊಂಡವರಿಂದ ಸವಾರಿ ಮಾಡಲ್ಪಟ್ಟ ಜನರಿಗೆ ಅಮೇರಿಕವು ವಿಸ್ಮಯದ ಮೂಲವಾಯಿತು. ನಿಜವಾಗಿಯೂ ಅದು 'ಲೋಕಕ್ಕೆ ಸ್ವಾತಂತ್ರ್ಯದ ಜ್ಞಾನೋದಯ' ನೀಡುವ ಮೂಲವಾಯಿತು. ಅಂತಿಮವಾಗಿ ಪಾದ್ರಿವರ್ಗದ ಐಹಿಕ ಧೋರಣೆಯಿಂದ, ರಾಜಯೋಗ್ಯ ದುಂದುಗಾರಿಕೆ ಮುಂತಾದವುಗಳಿಂದ ಪೀಡಿತರಾಗಿದ್ದವರು, ಬೆಳೆಯ ನಿರಂತರವಾದ ವಿಫಲತೆಗಳ ಹೆಚ್ಚಾಗುವಿಕೆಗಳಿಗೆ ತುತ್ತಾಗಿ ಬಡತನಕ್ಕೆ ಒಳಗಾಗಿ ಬಹುಮಟ್ಟಿಗೆ ಉಪವಾಸಕ್ಕೆ ತುತ್ತಾದ ಫ್ರಾನ್ಸಿನ ಜನರು ಹತಾಶರಾಗಿ ಎದ್ದು ಆ ಅತ್ಯಂತ ಭಯಂಕರವಾದ ಕ್ರಾಂತಿಯನ್ನು ಕೈಕೊಂಡರು. ಅದು ಕ್ರಿ.ಶ. 1789ರಿಂದ ಕ್ರಿ.ಶ. 1804ರವರೆಗೆ ಹದಿನಾಲ್ಕು ವರ್ಷಗಳ ಕಾಲ ಮುಂದುವರೆಯಿತು.

ಅರಾಜಕತೆಯ ಸ್ಥಿತಿಯ ಮತ್ತು ಹಿಂಸೆಯ ದೃಶ್ಯಗಳು ದೀರ್ಘಕಾಲದಿಂದ ತುಳಿತಕ್ಕೆ ಒಳಗಾದ ಜನರ ಪ್ರತೀಕಾರದ ಪರಿಣಾಮವಾಗಿ ಹಾಗೂ ಅವರ ಅವಮಾನದ ಮತ್ತು ಹೀನಾಯ ಸ್ಥಿತಿಯ ಕಾರಣದಿಂದ ಭಯಂಕರವಾಗಿದ್ದವು ಮತ್ತು ಅವುಗಳು ಸ್ವಾಭಾವಿಕ ಫಲಗಳಾಗಿದ್ದವು. ಅದು ನಾಗರೀಕ ಮತ್ತು ಧಾರ್ಮಿಕ ಶಕ್ತಿಗಳು ಸುಂಟರಗಾಳಿಯಲ್ಲಿ ಕೊಯ್ಲುಮಾಡಿದಂತಿತ್ತು. ಅವರುಗಳು ದೇವರ ಮತ್ತು ಸತ್ಯದ ಹೆಸರಿನಲ್ಲಿ ಮತ್ತು ತಮ್ಮ ಉನ್ನತಿಗಾಗಿ ಜನರನ್ನು ಕುರುಡರನ್ನಾಗಿಯೂ, ಬಂಧಿಗಳನ್ನಾಗಿಯೂ ಮಾಡಿದ್ದರು. ಈ ಜನರಿಗಾಗಿಯೇ ಕ್ರಿಸ್ತನು ಮರಣವನ್ನಪ್ಪಿದನು.

ನಿಜವಾಗಿಯೂ ಅಂತಹ ಕಾರಣಕ್ಕಾಗಿ ಅಂತಹ ಪ್ರತಿಕ್ರಿಯೆಯು ಧರ್ಮದ್ರೋಹವಾಗುತ್ತದೆ. ಫ್ರಾನ್ಸ್ ಕೂಡಲೇ Voltaire ಮತ್ತು ಆತನ ಸಹಚರರ ಪ್ರಭಾವದ ಅಡಿಯಲ್ಲಿ ಅತ್ಯಂತ ಧರ್ಮನಿಂಧಕವಾಯಿತು. ಅವರುಗಳು ತಮ್ಮ ಬರಹಗಳ ಮೂಲಕ, ಕ್ರೈಸ್ತಧರ್ಮದ ಬಗ್ಗೆ ಅಪಹಾಸ್ಯವನ್ನು ತಿರಸ್ಕಾರವನ್ನು ಎಸೆದರು ಅಥವಾ ಬಹುಶಃ ರೋಮ್‌ನ ಧರ್ಮಭ್ರಷ್ಟ ಸಭೆಯ ಮೇಲೆ, ಫ್ರಾನ್ಸ್ ಜನರಿಗೆ ಪರಿಚಿತವಾಗಿದ್ದ ಕ್ರೈಸ್ತಧರ್ಮವನ್ನೇ ಪರಿಹಾಸ್ಯಮಾಡುವುದರ ಮೂಲಕ ಮುಳುಗಿಸಿಬಿಟ್ಟರು. ಅವರು ಅದರ ಅಸತ್ಯತ್ವಗಳ, ಅಸಂಬದ್ಧತೆಗಳ, ಅದರ ಕಪಟತನಗಳ, ಅದರ ಅನೀತಿಗಳ, ಕ್ರೂರತ್ವ ಮತ್ತು ಎಲ್ಲಾ ಕೆಡಕುತನಗಳನ್ನು ಎತ್ತಿ ತೋರಿಸಿ ಫ್ರೆಂಚಿನ ಜನರು ರೋಮಾನಿಸಂ ಮತ್ತು ಎಲ್ಲಾ ಧರ್ಮಗಳನ್ನೂ ನಿರ್ಮೂಲವಾಡುವಂತೆ ಹುರಿದುಂಬಿಸುವಂತೆ ತೀಕ್ಷ್ಣವಾದ ರೀತಿಯಲ್ಲಿ ಸೂಚಿಸಿದರು. ಅವರು ಈ ಹಿಂದೆ ಅವನ್ನು ಎತ್ತಿಹಿಡಿಯಲು ಉತ್ಸಾಹ ಹೊಂದಿದ್ದರು. ಹೀಗೆ ತಿರಸ್ಕರಣೀಯವಾಗಿ ಮೋಸಗೊಂಡ ಫ್ರೆಂಚರು ಸಹಸ್ರವರ್ಷಗಳ ಕಾಲ ಪೋಪನದ ಅಧಿಕಾರದ ಪ್ರಭಾವದಲ್ಲಿದ್ದರು. ಆತನು ಕ್ರಿಸ್ತ ವಿರೋಧಿಯಲ್ಲ, ನಿಜವಾದ ಕ್ರಿಸ್ತನೇ ಎಂದು ತಿಳಿದಿದ್ದವರು ಈಗ ಆತನು ನಮ್ಮ ಕ್ಷುದ್ರವಾದ ಪ್ರಭುವಾಗಿದ್ದನು ಎಂದು ತಿಳಿದು Voltaireನ ಮಾತುಗಳಲ್ಲಿಯೇ 'ಅಧಮನಿಗೆ ಧಿಕ್ಕಾರ' ಎಂದು ಕೂಗಿದರು. ಖಂಡನಾರ್ಹ ಕ್ರಿಸ್ತವಿರೋಧಿಯನ್ನು ಹೀನೈಸುವ ಅವರ ಪ್ರಯತ್ನವು ಫ್ರೆಂಚ್ ಕ್ರಾಂತಿಯ ಎಲ್ಲಾ ಭಯಾನಕಗಳನ್ನು ಸೃಷ್ಟಿಸಿತು, ಸಂತ ಬಾರ್ಥಲೋಮ್ಯನ ದಿನಗಳಲ್ಲಿನ ಭಯಾನಕ ಸಾಮೂಹಿಕ ಹತ್ಯೆಗಳಿಗೆ ಹೋಲಿಸುವಾಗ ಇದು ಮುಯ್ಯಿತೀರಿಸುವ ನ್ಯಾಯಕ್ಕೆ ಒಂದು ಅದ್ಭುತವಾದ ಉದಾಹರಣೆಯಂತಿತ್ತು ಮತ್ತು ಅಂಥಹುದೇ ಸಂಭವಗಳು ಪ್ರಚೋದನೆಗೊಂಡು ಈಗ ಪೋಪನ ಆಡಳಿತ ಮೇಲೆ ನಲಿಯಿತು.

ಧರ್ಮನಿಂದಕವಾದ ಫ್ರಾನ್ಸ್ ಇದ್ದಕ್ಕಿದ್ದಂತೆ ಪ್ರಬಲತೆಯೊಂದಿಗೆ ಎದ್ದಿತು, ಸೆರೆಮನೆಯನ್ನು ನಾಶಗೊಳಿಸಿತು, ಮಾನವನ ಹಕ್ಕುಗಳ ಬಗ್ಗೆ ತನ್ನ ಹೇಳಿಕೆಯನ್ನು ಘೋಷಿಸಿತು, ರಾಜ ರಾಣಿಯರನ್ನು ಹತ್ಯೆಗೈಯಿತು ಮತ್ತು ಅರಸರುಗಳ ವಿರುದ್ಧ ಯುದ್ಧ, ಮತ್ತು ಎಲ್ಲೆಡೆ ಇರುವ ಕ್ರಾಂತಿಕಾರರ ಪರವಾಗಿ ಸಹಾನುಭೂತಿಯನ್ನು ಸಾರಿತು. ಅದೇ ಸಮಯದಲ್ಲಿ ಲೋಕದ ಆಡಳಿತಗಾರರು ತಮ್ಮ ಪ್ರಜೆಗಳಲ್ಲಿಯೂ ಇಂಥಾಃ ಕ್ರಾಂತಿಕಾರಿ ಸೋಂಕು ಹರಡೀತೆಂದು ಉಸಿರುಕಟ್ಟುವಂತೆ ಭಯಭೀತರಾದರು. ಪ್ರಪಂಚದಾದ್ಯಂತ ನಿರಂಕುಂಶತ್ವದ ಭಯದಿಂದ ನಿಜವಾಗಿಯೂ ಅಪರೂಪವಾಗಿ ನಿಗ್ರಹಿಸಲ್ಪಟ್ಟ ಅವರು ತಮ್ಮನ್ನು ಪ್ರಜೆಗಳಿಂದ ರಕ್ಷಿಸಿಕೊಳ್ಳುವಂತೆ ಪರಸ್ಪರ ಮೈತ್ರಿಗಳನ್ನು ಮಾಡಿಕೊಂಡರು. ಫ್ರಾನ್ಸ್ ಕ್ರೈಸ್ತಧರ್ಮವನ್ನು ತಿರಸ್ಕರಿಸಿತು, ಮತ್ತು ರೋಮನ್ ಕ್ಯಥೋಲಿಕ್ ಸಭೆಯ ವಿಶಾಲವಾದ ಆಸ್ತಿಪಾಸ್ತಿಗಳನ್ನೂ, ಕಂದಾಯವನ್ನೂ ಮತ್ತು ಅರಸರುಗಳ ಆಸ್ತಿಗಳನ್ನೂ, ಶ್ರೀಮಂತಿಕೆಯನ್ನೂ ಮುಟ್ಟುಗೋಲು ಹಾಕಿಕೊಂಡಿತು. ಪುನಃ ಪ್ಯಾರಿಸ್ಸಿನ ಹಾದಿಯಲ್ಲಿ ಪ್ರೊತಾಸ್ತಾಂತರ ಬದಲಾಗಿ ಪಾದ್ರಿಗಳ, ಗಣ್ಯರ ಮತ್ತು ಅವರ ಬೆಂಬಲಿಗರ ರಕ್ತದ ಕೋಡಿ ಹರಿಯಿತು. ಒಟ್ಟು ಹತ್ಯೆಗೊಂಡವರ ಸಂಖ್ಯೆ ಸುಮಾರು 1,022,000 ಎಂದು ಅಂದಾಜಿಸಲಾಗಿದೆ. ಈ ಸಂದರ್ಭಕ್ಕಾಗಿ ಕಂಡುಹಿಡಿದ ನೂರಾರು ಕಾರ್ಯವಿಧಾನಗಳಿಂದ ಅವರನ್ನು ನಾಶಗೊಳಿಸಿದರು, ಬೇಟೆಯಾಡುವ ಮತ್ತು ಹತ್ಯೆಗೈಯುವ ವೇಳೆ ಪೋಪಿನ ಕಡೆಯವರು ಈ ಹಿಂದೆ ಪ್ರೊತಾಸ್ತಾಂತರ ಮೇಲೆ ನಡೆಸಿದ ದೌರ್ಜನ್ಯಗಳನ್ನು ಮತ್ತು ಅವರ ಸ್ವಂತ ಸಿದ್ಧಾಂತಗಳ ಸಾಧನೆಯು ಅಂತ್ಯವನ್ನು ಪ್ರತಿಪಾದಿಸುತ್ತದೆಂಬುದನ್ನು ಪಾದ್ರಿಗಳಿಗೆ ನೆನಪು ಮಾಡಿಸಿದರು. ಕ್ರಾಂತಿಕಾರರು ಕಡೆಯಲ್ಲಿ ಮನುಷ್ಯರ ಸ್ವಾತಂತ್ರ್ಯ ಧಾರ್ಮಿಕ ಮತ್ತು ರಾಜಕೀಯ ಬಿಡುಗಡೆಯನ್ನು ಬಯಸಿದರು; ಅದನ್ನು ವಿಧಿಸುವವರ ಮರಣವು ಅಗತ್ಯವಾಗಿತ್ತು ಮತ್ತು ಅದುವೇ ಖಚಿತವಾದ ಸಾಧನೆಯಾಗಿತ್ತು.

ಆ ಎಲ್ಲಾ ಸಂಗತಿಗಳಂತೆ, ಫ್ರೆಂಚ್ ಕ್ರಾಂತಿಯು ಮಹಾ ಕೆಡುಕುಳ್ಳದ್ದಾಗಿದ್ದು, ಮಿಲಿಯಾಂತರ ಜನರಿಗೆ ಬಹಳಷ್ಟು ದುರವಸ್ಥೆಯನ್ನು ಉಂಟುಮಾಡಿತು; ಆದಾಗ್ಯೂ ಬೇರೆ ಕೆಲವುಗಳಂತೆ ಅದು ಮಹಾ ತಪ್ಪಿನ ಭಾಗಶಃ ಪರಿಹಾರವಷ್ಟೇ; ಮತ್ತು ಇನ್ನೂ ಕೆಲವು ಸಂಗತಿಗಳಂತೆ, ಅದು ಒಳ್ಳೆದಕ್ಕಾಗಿಯೇ. ದೇವರ ಜ್ಞಾನದ ಹೆಚ್ಚಳಕ್ಕಾಗಿ, ಮತ್ತು ಪ್ರವಾದನೆಗಳಲ್ಲಿ ತೋರಿಸಿರುವಂತೆ ಆತನ ಯೋಜನೆಗಳನ್ನು ಮುಂದುವರಿಸುವುದಕ್ಕಾಗಿಯೇ ದೇವರಿಂದ ತಳ್ಳಿಹಾಕಲಾಯಿತು. ಇಲ್ಲಿ ನಾವು ಪ್ರೆಂಚ್ ಕ್ರಾಂತಿಯು ಪ್ರಕಟನೆಯ ಪುಸ್ತಕದಲ್ಲಿ ಈಗಾಗಲೇ ಪ್ರಧಾನವಾಗಿ ಗುರುತಿಸಿರುವ ಹೇಳಿಕೆಯನ್ನು ಒಳಹೊಕ್ಕುತ್ತೇವೆ. ಅದರಲ್ಲಿ ಕ್ರೈಸ್ತ ಸಾಮ್ರಾಜ್ಯದ ಮೇಲೆ ಬಂದ ಎಲ್ಲಾ ತೊಂದರೆಗಳೂ ಆ ಭಯಾನಕ ಆಳ್ವಿಕೆಯಲ್ಲಿ ಸ್ಪಷ್ಟವಾಗಿ ಉದಾಹರಿಸಲ್ಪಟ್ಟಿದೆ ಎಂದು ಹೇಳಲಾಗಿದೆ. ಫ್ರಾನ್ಸಿನಿಂದ ಸಮಸ್ತ ಲೋಕಕ್ಕೆ ಹರಡಿದ ಧರ್ಮನಿಂದನೆ ಮತ್ತು ಅರಾಜಕತೆಯ ಜಾಡ್ಯವು ಪೋಪನ ಆಡಳಿತದಲ್ಲಿ ಮಾತ್ರವಲ್ಲ, ಆದರೆ ಸರ್ವಸಾಮಾನ್ಯವಾದ ಸಂಪ್ರದಾಯವಾದಿಗಳಲ್ಲಿಯೂ ಇರುವ ಪರಿಶುದ್ಧ ಗ್ರಂಥದಲ್ಲಿ ಇಲ್ಲದ ಸಿದ್ಧಾಂತಗಳಿಗೆ ಮತ್ತು ಅಭ್ಯಾಸಗಳನ್ನು ತುಂಬಿಸಿ ಅವುಗಳನ್ನು ಪುಷ್ಟಿಗೊಳಿಸಿದೆ. ಹೆಸರು ಮಾತ್ರದ ಕ್ರೈಸ್ತ ಧರ್ಮವು ಈ ವ್ಯಾಧಿಯನ್ನು ಗುಣಪಡಿಸಲಿಲ್ಲ, ಮತ್ತು ಅದರ ಮುಂದಿನ ಹರಡುವಿಕೆಯನ್ನು ತಡೆಗಟ್ಟಲೂ ಅದು ನಿಶ್ಯಕ್ತವಾಗಿದೆ. ಇದನ್ನು ಪರಿಶುದ್ಧ ಗ್ರಂಥಗಳು ಈ ಜಗತ್ತಿಗೆ ತಿಳಿಸಬೇಕಾದ ಮಹಾಸಂಕಟ ಎಂದು ಮುಂತಿಳಿಸಿವೆ.

ಫ್ರೆಂಚಿನ ಧರ್ಮನಿಂದಕರ ಪ್ರಭಾವವನ್ನು ನೆಪೋಲಿಯನ್ನನ ಸೈನ್ಯವು ಯೂರೋಪಿನೆಲ್ಲೆಡೆ ಕೊಂಡೊಯ್ಯಿತು. ಅದು ಅರಸರ ಮತ್ತು ಪಾದ್ರಿಗಳ ಶಕ್ತಿಯನ್ನು ಬಹಳವಾಗಿ ಅವಗಣನೆಮಾಡಿತು. ಆದರೆ ನೆಪೋಲಿಯನ್ನನು ತಾನೊಬ್ಬ ಧರ್ಮನಿಂದಕ ಫ್ರಾನ್ಸಿನ ಪ್ರತಿನಿಧಿಯೋ ಎಂಬಂತೆ ಪೋಪನ ಅಧಿಕಾರವನ್ನು ಒರಟಾಗಿ ನಿರ್ವಹಿಸಿದ್ದು ಪರಾಕಾಷ್ಠತೆಯನ್ನು ಮೀರಿತು. ಎಲ್ಲದಕ್ಕಿಂತ ಹೆಚ್ಚಾಗಿ, ಅಂಧಶ್ರದ್ಧೆಯ ಭಕ್ತಿಯ ಸಂಕೋಲೆಯನ್ನು ಮುರಿಯಲು ಸಹಾಯವಾಯಿತು. ಅಲ್ಲಿಯವರೆಗೆ ಪಾದ್ರಿವರ್ಗವು ಸಾಮಾನ್ಯ ಜನರನ್ನು ಅವರಡಿಯಲ್ಲಿ ಇರಿಸಿಕೊಂಡಿದ್ದರು.

ಆದರೆ ಧೈರ್ಯಶಾಲಿಯಾದ ನೆಪೋಲಿಯನ್ನನು ಪೋಪ್ Pius VIನ ಬಹಿಷ್ಕಾರಗಳನ್ನು ತಿರಸ್ಕರಿಸಿದ್ದಲ್ಲದೆ, ತನ್ನ ಆಜ್ಞೆಗಳನ್ನು ಉಲ್ಲಂಘಿಸಿದ್ದಕ್ಕಾಗಿ ಆತನ ಮೇಲೆ ದಂಡಗಳನ್ನು ಸಹಾ ವಿಧಿಸಿದನು. ಅಂತ್ಯದಲ್ಲಿ 1000 ವರ್ಷಗಳ ಹಿಂದೆ Charlemagneಯ ಅನುದಾನವಾದ ಪೋಪನ ಪ್ರಾಂತ್ಯಗಳನ್ನು Franceಗೆ ಹಿಂತಿರುಗಿಸುವಂತೆ ಒತ್ತಾಯಮಾಡಿದನು. ಇದು ಪೋಪನ ಅಸತ್ಯ ಅಧಿಕಾರದ ಹಕ್ಕೇಳಿಕೆಯ ಬಗ್ಗೆ ಅಲ್ಲಿನ ಜನರ ಮತ್ತು ಯೂರೋಪಿನ ಚಕ್ರವರ್ತಿಗಳ ಕಣ್ಣು ತೆರೆಯಿಸಿತು. ಪೋಪನ ಅಧಿಕಾರದ ಬಗ್ಗೆ ಈ

ಸಮಯದಲ್ಲಿ ಜನಾಭಿಪ್ರಾಯದ ಮಹಾ ಕ್ರಾಂತಿಯು ನೆಪೋಲಿಯನ್ನನು ತಾನು Charlemagne ಎಂಬಾತನ ಸಂತಾನದವನು* ಎಂದು ಹೇಳಿ ಆತನ ಬಿರುದನ್ನು ಹೊಂದಿದ ನಂತರ ತಾನು ರೋಮ್ ಚಕ್ರವರ್ತಿ Charlemagneಯ ಉತ್ತರಾಧಿಕಾರಿ ಎಂದು ಘೋಷಿಸಿದನು. ಆತನು Charlemagne ಮತ್ತಿತರರು ಮಾಡಿದಂತೆ ಪೋಪನಿಂದ ಕಿರೀಟಧಾರಣೆ ಮಾಡಿಸಿಕೊಳ್ಳಲು ರೋಮಿಗೆ ಹೋಗಲಿಲ್ಲ, ಬದಲಾಗಿ ಪೋಪನೇ ಫ್ರಾನ್ಸಿಗೆ ಬಂದು ಕಿರೀಟಧಾರಣ ಸಮಾರಂಭದಲ್ಲಿ ಭಾಗವಹಿಸುವಂತೆ ಆಜ್ಞಾಪಿಸಿದನು. ಆಗಲೂ ಸಹ ಯಶಸ್ವಿ ಮುಖ್ಯಸ್ಥನಾದವನು ಒಂದಕ್ಕೂ ಹೆಚ್ಚು ಸಾರಿ ಪೋಪನ ಅಧಿಕಾರವನ್ನು ಕೊಳ್ಳೆಹೊಡೆದು, ಶಕ್ತಿಹೀನವನ್ನಾಗಿ ಮಾಡಿ, ದೀನವನ್ನಾಗಿ ಮಾಡಿದವನಾಗಿ, ಪೋಪನ ಅಧಿಕಾರದ ಯಾವುದೇ ಸ್ವೀಕಾರದೊಂದಿಗೆ ಸಾರ್ವಭೌಮಿಕ ಘನತೆಯನ್ನು ಪಡಕೊಳ್ಳುವಂತೆ ತನ್ನ ಕಿರೀಟಧಾರಣೆಯ ಬಗ್ಗೆ ಆತನು ಪೋಪನೊಡನೆ ಸಮಾಲೋಚಿಸಲಿಲ್ಲ, ಆದರೆ ಕೇವಲ ಪೋಪ್ ಪಯಸ್ VII ಎಂಬಾತನು ಸಮಾರಂಭದಲ್ಲಿ ಉಪಸ್ಥಿತನಿದ್ದು ಅದನ್ನು ಅನುಮೋದಿಸಿ, ಸ್ವೀಕರಿಸುವಂತೆ ಮತ್ತು ಕಿರೀಟವನ್ನು ಆಶೀರ್ವದಿಸುವಂತೆ ಮಾಡಿದನು. ನೆಪೋಲಿಯನ್ನನು ಆ ಕಿರೀಟವನ್ನು ಪವಿತ್ರಸ್ಥಾನದಿಂದ ತೆಗೆದುಕೊಂಡು ತಾನೇ ತನ್ನ ತಲೆಯ ಮೇಲೆ ಧರಿಸಿಕೊಂಡನು. ಇತಿಹಾಸಕಾರನು "ನಂತರದಲ್ಲಿ ಆತನು ಮುಕುಟವೊಂದನ್ನು ತೆಗೆದು ತನ್ನ ಮಹಾರಾಣಿಗೆ ತೊಡಿಸಿದುದರ ತನ್ನ ಅಧಿಕಾರವೇ ತನ್ನ ಸ್ವಂತ ಕ್ರಿಯೆಯ ಶಿಶುವಾಗಿದೆ ಎಂದು ತೋರಿಸಿದನು". ಇದು ಆತನ ಸಮಸ್ತ ನಾಗರೀಕ ಮತ್ತು ಸೈನಿಕ ಜಯದ ಫಲವಾಗಿದೆ. ಅಂದಿನಿಂದ ಯಾರೂ ಪೋಪನು ರೋಮಿನ ಚಕ್ರವರ್ತಿಗೆ ಕಿರೀಟವನ್ನು ದಯಪಾಲಿಸುವಂತೆ ಕೇಳಿಕೊಳ್ಳಲಿಲ್ಲ. ಒಬ್ಬ ರೋಮ್‌ನ ಕ್ಯಥೋಲಿಕ್ ಲೇಖಕನು** ಈ ಕಿರೀಟಧಾರಣೆಯ ಬಗ್ಗೆ ಹೀಗೆ ಹೇಳಿದ್ದಾನೆ :– ಇಂಥಾಃ ಸಂದರ್ಭಗಳಲ್ಲಿ ರೋಮ್‌ನ್ನು ಜೀರ್ಣೋದ್ಧಾರ ಮಾಡಿದ್ದ Charlemagne ಮತ್ತಿತರ ಚಕ್ರವರ್ತಿಗಳಿಂದ ಭಿನ್ನವಾಗಿ ವರ್ತಿಸಿ, ಆತನು (ನೆಪೋಲಿಯನ್) ಅಹಂಕಾರದ ಕಾರಣ ಪವಿತ್ರ ತಂದೆಯು (Holy Father) ತನ್ನ ಕಿರೀಟಧಾರಣೆಗೆ ಪ್ಯಾರಿಸ್ಸಿಗೆ ಬರಬೇಕೆಂದು ಆಗ್ರಹಪಡಿಸಿದನು. ಪೋಪನು ಈ ರೀತಿಯಲ್ಲಿ ತನ್ನ ಪುರಾತನ ಸಂಪ್ರದಾಯದಿಂದ ಪಕ್ಕಕ್ಕೆ ಸರಿಯಲು ಅತ್ಯಂತ ಅಸಂತುಷ್ಟನಾದನು. ನಿಜವಾಗಿಯೂ ಆತನು ಅದನ್ನು ತನ್ನ ಉನ್ನತ ಅಧಿಕಾರಸ್ಥಾನಕ್ಕೆ ಅವಮಾನವೆಂದೆಣಿಸಿದನು.

ಪೋಪ್ ಅಧಿಕಾರದ ಮೇಲೆ ನೆಪೋಲಿಯನ್ನನು ರಾಶಿ ಹಾಕಿದ ಅಪಮಾನಗಳ ಬಗ್ಗೆ ಚರಿತ್ರೆಯು*** ಹೇಳುವುದೇನೆಂದರೆ :

"ಪೋಪ್ ಪಯಸ್ VI ನೊಂದಿಗೆ ತಾತ್ಕಾಲಿಕ ಕದನವಿರಾಮವು ಮುಕ್ತಾಯಗೊಂಡಿತು (23 ಜೂನ್ 1796), ಅದರ ಕರಾರುಗಳು ಒಮ್ಮೆ ಯೂರೋಪಿನ ಬಲಶಾಲಿ ಸಾರ್ವಭೌಮನಾಗಿದ್ದ ಕ್ರೈಸ್ತಸಭೆಯ ಮುಖ್ಯಸ್ಥನಿಗೆ ಬಹಳಷ್ಟು ತೇಜೋಭಂಗ ಪಡಿಸುವುದಾಗಿದ್ದವು. ಒಮ್ಮೆ ಅರಸರುಗಳ, ಸಾರ್ವಭೌಮರುಗಳಾಗಿ ಮಾಡಲ್ಪಟ್ಟವರು, ಇನ್ನೂ ಮಾಡಲ್ಪಡದವರ ಕುತ್ತಿಗೆಯ ಮೇಲೆ ಚಲಾಯಿಸುತ್ತಿದ್ದ, ರಾಜ್ಯಗಳು ಮತ್ತು ದೇಶಗಳನ್ನು ಕ್ರಮದಲ್ಲಿಡುತ್ತಿದ್ದ ಪಾದ್ರಿಯು ಒಬ್ಬ ಮಹಾಯಾಜಕನಾಗಿ, ಈ ಲೋಕದಲ್ಲಿ ಸರ್ವಶಕ್ತ ದೇವರ ಪ್ರತಿನಿಧಿಯಾಗಿ ತನ್ನ ಅಧಿಕಾರವನ್ನು ಶ್ರೇಷ್ಠ ಪ್ರಭುವಾಗಿ ಸ್ಥಾಪಿಸಿಕೊಂಡಿದ್ದಾತನು, ಇತರೆ ಪರಮಾಧಿಕಾರವುಳ್ಳ ಚಕ್ರಾಧಿಪತ್ಯಗಳನ್ನು ಆಳುತ್ತಿದ್ದವನು, ಈಗ ನಮ್ರತೆಯೆಂಬ ಪಾತ್ರೆಯ ತಳದಲ್ಲಿರುವ ಮಡ್ಡಿಯನ್ನು ಕುಡಿಯುವಂತೆ ನಿರ್ಬಂಧಿಸಲಾಯಿತು. ಗುಟುಕು ಕಹಿಯಾದಲ್ಲಿ ಅದು ಆತನ ಹಿಂದಿನವರು ಉದಾರವಾಗಿ ಇತರರಿಗೆ ಹಂಚಿದುದಾಗಿದೆ. ಆತನು ತನ್ನ ಬಂದರುಗಳನ್ನು ಫ್ರೆಂಚ್ ಹಡಗುಗಳಿಗೆ ತೆರೆಯುವಂತೆ ಮತ್ತು ಪ್ರಜಾಪ್ರಭುತ್ವದ ಮೇಲೆ ಯುದ್ಧದಲ್ಲಿ ತೊಡಗಿದ್ದ ಎಲ್ಲಾ ದೇಶಗಳ ದ್ವಜಗಳನ್ನು ಪ್ರತಿಬಂಧಿಸುವಂತೆ, ಫ್ರೆಂಚ್ ಸೈನ್ಯವು Bologna ಮತ್ತು Ferrara ಮೇಲಿನ ನಿಯೋಗವನ್ನು ಮುಂದುವರಿಸುವ ಅನುಮತಿಯನ್ನು, ಅನ್ಕೊನಾ ಕೋಟೆಯನ್ನು ಒಪ್ಪಿಸುವಂತೆ, ಫ್ರೆಂಚರಿಗೆ ಪ್ಯಾರಿಸ್ಸಿನಿಂದ ರೋಮಿಗೆ ಕಳುಹಿಸಲ್ಪಟ್ಟ ಅವರ ಮುಖ್ಯಾಧಿಕಾರಿಗಳು ಆಯ್ಕೆಮಾಡುವ ನೂರು ವರ್ಣಚಿತ್ರಗಳನ್ನು, ಮಾನವನ ತಲೆ, ಭುಜ ಮತ್ತು ಎದೆಯುಳ್ಳ ವಿಗ್ರಹಗಳನ್ನು, ಪುಷ್ಪಕುಂಭ ಅಥವಾ ವಿಗ್ರಹಗಳನ್ನು ಮಾತ್ರವಲ್ಲದೆ, ಅದೇ ರೀತಿಯಲ್ಲಿ ಆಯ್ಕೆಗೊಂಡ 500 (ಪುರಾತನ ಮತ್ತು ಆಧುನಿಕ)

* ನೆಪೋಲಿಯನ್ನನ ಯೂರೋಪ್ ಮಹಾಯುದ್ಧಗಳು Charlemagneಯ ಅಧೀನದಲ್ಲಿದ್ದ ಚಕ್ರಾಧಿಪತ್ಯವನ್ನು ಒಂದುಗೂಡಿಸುವುದರ ಉದ್ದೇಶವನ್ನು ಹೊಂದಿತ್ತು.

** Chair of St Peter, 433

*** Campaigns of Nepoleon 89, 90

ಹಸ್ತಲೇಖನಗಳನ್ನು ನೀಡುವಂತೆ ಒತ್ತಾಯಿಸಲಾಯಿತು; ಎಲ್ಲವನ್ನೂ ಹಿತಗೊಳಿಸುವಂತೆ, His Holiness ಪ್ರಜಾಪ್ರಭುತ್ವಕ್ಕೆ 21,000,000 French Livres ಗಳನ್ನು ನೀಡಬೇಕು, ಅವುಗಳಲ್ಲಿ ಹೆಚ್ಚಿನವು ನಾಣ್ಯವಾಗಿರಬೇಕು ಅಥವಾ ಚಿನ್ನದ ಅಥವಾ ಬೆಳ್ಳಿಯ ಗಟ್ಟಿಗಳಾಗಿರಬೇಕು ಎಂಬುದಾಗಿಯೂ ಒತ್ತಾಯಿಸಲಾಯಿತು.

ಈ ದಂಡಗಳನ್ನು ಅವಿಳಂಬವಾಗಿ ಪೂರೈಸದ ಕಾರಣ ಶುಲ್ಕವನ್ನು 50,000,000 Livresಗಳಿಗೆ ಏರಿಸಲಾಯಿತು ಮತ್ತು ಕೆಲವೊಂದು ಪೋಪರ ಭೂಭಾಗಗಳನ್ನು ಫ್ರಾನ್ಸಿಗೆ ಸ್ವಾಧೀನಪಡಿಸುವಂತೆ ಒತ್ತಾಯಿಸಲಾಯಿತು. ಕಡೆಗೆ ಪೋಪನನ್ನೇ ಕೈದುಮಾಡಿ ಫ್ರಾನ್ಸಿಗೆ ಕೊಂಡೊಯ್ಯ ಲಾಯಿತು, ಆತನು ಅಲ್ಲಿಯೇ ತೀರಿಕೊಂಡನು.

7ನೇ ಪೈಯಸ್ (Pius VII)ಗೆ ಸಹ ಪೋಪನ ಅಧಿಕಾರದ ಗೌರವಗಳನ್ನು ಹಿಂದಕ್ಕೆ ಕೊಡಲಾಗಿತ್ತು, ಆತನು ಕ್ರಿ.ಶ. 1804ರಲ್ಲಿ ನೆಪೋಲಿಯನ್ನನ ಕಿರೀಟಧಾರಣಾ ಸಮಾರಂಭದಲ್ಲಿ ಹಾಜರಿದ್ದನು. ನಂತರದಲ್ಲಿ ನೆಪೋಲಿಯನ್ನನ (1808–1809) ಅಪ್ಪಣೆಯ ಪ್ರಕಾರ ತಾನು ದೋಚಿಕೊಂಡಿದ್ದ ಅಧಿಕಾರಗಳ ಎಲ್ಲಾ ತುಣುಕುಗಳನ್ನು ಕಳೆದುಕೊಂಡನು; ಎಲ್ಲಾ ಸ್ಮಾರಕಗಳೂ ಮತ್ತು ರೋಮಿನ ಕಲಾ ಸಂಪತ್ತನ್ನು ಫ್ರೆಂಚಿನ ಪಾಲನೆಗೆ ತೆಗೆದುಕೊಳ್ಳಲಾಯಿತು. ನೆಪೋಲಿಯನ್ ಉಪಯೋಗಿಸಿದ ಭಾಷೆಯು "ನನ್ನ ಖ್ಯಾತಿವೆತ್ತ ಪೂರ್ವಜ Charlemagneಯು Holyಗೆ ... ದಾನಮಾಡಿದ Urbino, Ancona, Macerata ಎಂಬ ಭೂಪ್ರದೇಶಗಳು ಎಂದಿಗೂ ಇಟಲಿ ರಾಜ್ಯಕ್ಕೆ ಸೇರಿದ್ದಾಗಿರುತ್ತವೆ" ಎಂದಾಗಿತ್ತು.

ಇದರ ಅರ್ಥಸೂಚನೆಯನ್ನು ರೋಮನ್ ಕ್ಯಥೋಲಿಕ್ ಲೇಖಕನೊಬ್ಬನು* ಈ ರೀತಿಯಾಗಿ ಹೇಳಿದ್ದಾನೆ –

"ಇದಕ್ಕೆ ಪೋಪನು ರೋಮಿನ ಬಿಷೋಪ್ ಆಗಿ ಮುಂದುವರೆಯುತ್ತಾನೆ, ಆತನ ಹಿಂದಿನಕಾಲದ ಆತನ ಪೂರ್ವಿಕರಂತೆ ತನ್ನ ಆಧ್ಯಾತ್ಮಿಕ ಕಾರ್ಯಗಳನ್ನು Charlemagne ಆಳ್ವಿಕೆಯ ಅಡಿಯಲ್ಲಿ ಮುಂದುವರೆಸಿ ದಂತೆಯೇ ಮುಂದುವರೆಸುತ್ತಾನೆ. ಮುಂದಿನ ವರ್ಷದಲ್ಲಿ, ತನ್ನ ಸೈನ್ಯದ ವಿಜಯದಿಂದ ಪ್ರೋತ್ಸಾಹಗೊಂಡು, ಚಕ್ರವರ್ತಿಯು ಪೋಪನು ತನ್ನ ಈಗಿನ ಸಾರ್ವಭೌಮತ್ವವನ್ನು ಕಳೆದುಕೊಳ್ಳಬೇಕೆಂದು ನಿರ್ಣಯಿಸಿದನು – ಲೌಕಿಕ ಅಧಿಕಾರದ ಕೇವಲ ಛಾಯೆಯು ಇನ್ನೂ ಆತನ ರಾಜಧಾನಿಯಲ್ಲಿ ಮತ್ತು ಅಕ್ಕಪಕ್ಕದ ಜಿಲ್ಲೆಗಳಲ್ಲಿ ಇನ್ನೂ ಉಳಿದಿರುತ್ತದೆ. (ಪೋಪನ ಅಧಿಕಾರವು Charlemagneಯು ಕೊಡುಗೆಯ ಸಮಕ್ಷಮ ಕ್ರಿ.ಶ. 539ಯಿಂದ ಅನೇಕ ವರ್ಷಗಳ ಕಾಲ ಇತ್ತು). ಅದೇ ಪ್ರಕಾರ ಆತನು ರೋಮ್ ಒಂದು ಸಾರ್ವಭೌಮಿಕ ನಗರವಾಗಿದೆ ಮತ್ತು ಅದರ ನಾಗರೀಕ ಆಡಳಿತವನ್ನು ಆಗ ನೇಮಿಸಲ್ಪಟ್ಟ ಮಂತ್ರಾಲೋಚಕರ ಸಭೆಯು ನೋಡಿಕೊಳ್ಳುವುದು, ಮತ್ತು ಅದರ ಸ್ಮಾರಕಗಳನ್ನು ಮತ್ತು ಕಲಾ ಸಂಪತ್ತನ್ನು ಫ್ರೆಂಚ್ ಪಾಲನೆಗೆ ತೆಗೆದುಕೊಳ್ಳಬೇಕು ಮತ್ತು ಪೋಪನು ತನ್ನ ಆಳ್ವಿಕೆಯನ್ನು ಕಳೆದುಕೊಂಡಿರುವಾಗ ಆತನ ಆದಾಯವನ್ನು ಆತನ "ಪವಿತ್ರತೆ" (Holiness)ಯ ಆಧಾರದಲ್ಲಿ ನಿರ್ಧರಿಸಬೇಕು ಎಂಬ ನೂತನ ಆಜ್ಞೆಯನ್ನು ಆಸ್ಟ್ರಿಯನ್ ಸೀಜರನ ಅರಮನೆಯಿಂದ ಹೊರಡಿಸಿದನು".

ಇದನ್ನು ಅನುಸರಿಸಿ 7ನೇ ಪಯಸ್‌ನು ನೆಪೋಲಿಯನ್ನನನ್ನು ಕ್ರೈಸ್ತ ಸಭೆಯಿಂದ ಬಹಿಷ್ಕರಿಸುವ ಪೋಪನ ಶಾಸನವೊಂದನ್ನು ಹೊರಡಿಸಲು, ಆತನನ್ನು ಕೈದಿಯಾಗಿ ಫ್ರಾನ್ಸಿಗೆ ಕೊಂಡೊಯ್ಯಲಾಯಿತು. ಅಲ್ಲಿ ಆತನು ಅಂತಿಮವಾಗಿ ದಿನಾಂಕ 25, ಜನವರಿ 1813ರ ಫಾಂಟೈನ್‌ಬ್ಲೂ ಮೈತ್ರಿ ಒಪ್ಪಂದಕ್ಕೆ (Concordat of Fontainebleau dated Jan 25, 1813) ಸಹಿ ಮಾಡಬೇಕಾಯಿತು. ಆ ಪ್ರಕಾರ ಬಿಷೋಪರುಗಳ ಮತ್ತು ಮೆಟ್ರೋಪಾಲಿಟನ್ನರುಗಳ ನೇಮಕವನ್ನು ನೆಪೋಲಿಯನ್ನನಿಗೆ ಕೈವಶಪಡಿಸಲಾಯಿತು. ಹೀಗೆ ಆತನು ವಾಸ್ತವಿಕವಾಗಿ ತನ್ನ ವಿಟೋ ಮತ್ತು ನೇಮಕಾತಿ ಅಧಿಕಾರವನ್ನು ಸ್ವತಃ ವಜಾಪಡಿಸಿಕೊಳ್ಳಬೇಕಾಯಿತು, ಒಂದು ರೀತಿಯಲ್ಲಿ ಆತನು ತನ್ನ ಪೋಪ್ ಅಧಿಕಾರವನ್ನೇ ನೆಪೋಲಿಯನ್ನನಿಗೆ ವಹಿಸಬೇಕಾಯಿತು. ಇದನ್ನೇ ನೆಪೋಲಿಯನ್ನನು ಬಹಳ ಕಾಲದಿಂದ ಬಯಸಿದ್ದನು.

ಪ್ರಸ್ತುತ ಶತಮಾನವನ್ನು ಪರಿಚಯಿಸಿದ ಘಟನೆಗಳ ಮಹತ್ವವನ್ನು ರೋಮನ್ ಕ್ಯಥೋಲಿಕರು ಗಮನಿಸಲು ವಿಫಲರಾಗಿಲ್ಲ. ಅವರು ಮೇಲೆ ಗಮನಿಸಿದ ನಷ್ಟಗಳನ್ನೂ, ಅಪಮಾನದ ಪೆಟ್ಟನ್ನು ಒಪ್ಪಿಕೊಂಡದ್ದಲ್ಲದೆ, ಪೋಪನ ಅಧಿಕಾರದ ಸಾವಿರ ವರ್ಷಗಳ ಆಡಳಿತವನ್ನು (Charlemagneಯು ಮೇಲೆ ಹೇಳಿದ ರಾಜ್ಯಗಳನ್ನು ಕ್ರಿ.ಶ. 800ರಲ್ಲಿ ಪೋಪನ ಅಧಿಕಾರಕ್ಕೆ ದಾನವಾಡಿದ್ದರಿಂದ ಸಹಸ್ರ ವರ್ಷಗಳು)

* Chair of St. Peter, 439,440

ನೆಪೋಲಿಯನ್ನನನ್ನು ಆ ರಾಜ್ಯಗಳನ್ನು ವಶಕೊಂಡಿಸಿಕೊಂಡಾಗ ಮುಕ್ತಾಯಗೊಂಡಿತೆಂದು ಹಕ್ಕೇಳಿಕೆ ನೀಡುತ್ತಾರೆ. ಆ ಕಾಲದಿಂದ ಬೇರೆ ಯಾವ ಕಾಲದಲ್ಲಿಯೂ ಅತಿಕನಿಷ್ಠ ಅಧಿಕಾರವನ್ನು ಪಡಕೊಳ್ಳಲಾಗಲಿಲ್ಲ. ಪೋಪನ ಅಧಿಕಾರದ ಹಕ್ಕೇಳಿಕೆ ಏನೆಂದರೆ, ಕ್ರೈಸ್ತ ರಾಜ್ಯವಾಗಿ, ದೇಶಗಳ ಮೇಲೆ ಆಳ್ವಿಕೆಮಾಡುವ ಪ್ರಕಟನೆ 20:1–4ರಲ್ಲಿರುವ ಭವಿಷ್ಯವಾಣಿಯಲ್ಲಿ ಅದು ನೆರವೇರಿದೆ. ಮತ್ತು ಅದರ ಮೇಲೆ ಈಗ ಬಂದಿರುವ ತೊಂದರೆಯ "ಸ್ವಲ್ಪ ಕಾಲವು" (little season) ಸಮಯದ್ದಾಗಿದ್ದು ಅದರಲ್ಲಿ 7ನೇ ಮತ್ತು 9ನೇವಚನಗಳಲ್ಲಿ ಹೇಳಿರುವಂತೆ ಸೈತಾನನನ್ನು ಸಡಿಲಬಿಡಲಾಗಿದೆ ಎಂಬುದೇ. ಯಾರು ಪೋಪನ ಅಧಿಕಾರದಲ್ಲಿರುವ ಕ್ರಿಸ್ತನ ನಕಲಿಗಾರನಾದ ಸೈತಾನನಲ್ಲಿ ಕಾಣುವರೋ ಮತ್ತು ಯಾರು ನಿಜವಾದ ಸಭೆಯನ್ನು ಮತ್ತು ನಿಜವಾದ ಆಡಳಿತವನ್ನು ಗುರುತಿಸುವವರೋ ಇವರು ಮಾತ್ರವೇ ಇದನ್ನು ಪೂರ್ಣವಾಗಿ ಮೆಚ್ಚಿಕೊಳ್ಳುತ್ತಾರೆ.

ಫ್ರೆಂಚ್ ಕ್ರಾಂತಿಯ ಮತ್ತು ನೆಪೋಲಿಯನ್ನನ ಶಕ್ತಿ ಇವುಗಳು ಪೋಪನ ಅಧಿಕಾರದ ಅವಧಿಯ ಗುರುತರವಾದ ಸಂಗತಿಗಳೆಂದು ನಿಮಗೆ ಮನದಟ್ಟು ಮಾಡಲು ನಾವು ಬಹುಶಃ ಸಾಕಷ್ಟು ಸಂಗತಿಗಳನ್ನು ನಿಮಗೆ ತಿಳಿಸಿದ್ದೇವೆ; ಆಗ ಪೋಪನ ಪ್ರಭಾವವು ಮುರಿಯಲ್ಪಟ್ಟಿದ್ದು ಪುನಃ ಎಂದಿಗೂ ಪಡೆದಿಲ್ಲ. ಕೆಲವು ಸಮಯಗಳಲ್ಲಿ ಕೆಲವೊಂದು ಒಲವು ದಯಪಾಲಿಸ ಲಾಯಿತಾದರೂ, ಅವುಗಳು ತಾತ್ಕಾಲಿಕವಾದವುಗಳು, ಮತ್ತು ನವೀಕರಿಸಿದ ಅನುಚಿತ ವರ್ತನೆಯೂ ಅವನ್ನು ಮುಂದುವರಿಸುತ್ತವೆ. 1870ರವರೆಗೆ ಪೋಪನ ಎಲ್ಲಾ ಲೌಕಿಕ ಅಧಿಕಾರಗಳು ಪುನಃ ಮುಕ್ತಾಯಗೊಂಡವು ಮತ್ತು ಅವುಗಳು ಎಂದಿಗೂ ಅದರ ಮೊದಲಿನಂತೆ ನವೀಕೃತಗೊಳ್ಳುವುದಿಲ್ಲ ಎಂಬುದನ್ನು ನಾವು ನಂಬುತ್ತೇವೆ. ನೆಪೋಲಿಯನ್ನನ ಸೈನಿಕರು ಕ್ಯಥೋಲಿಕ್‌ರಲ್ಲಿದ್ದ 'ವಿಚಾರಣಾ' ಕ್ರಮವನ್ನು (Inquisition) ಮುರಿದು ಹಾಕಿದರು ಮತ್ತು ಸಾರ್ವಜನಿಕ ಚಿತ್ರಹಿಂಸೆಗಳಿಗೆ, ಧಾರ್ಮಿಕ ನಿಶ್ಚಿತಾಭಿಪ್ರಾಯಕ್ಕಾಗಿ ನಡೆಯುತ್ತಿದ್ದ ಮರಣ ದಂಡನೆಗಳಿಗೆ ಮುಕ್ತಾಯ ಹಾಡಿದರು ಎಂಬುದನ್ನು ಸಹಾ ನೆನಪುಮಾಡಿಕೊಳ್ಳಿರಿ.

ಪಾದ್ರಿ ವರ್ಗದ ಐಹಿಕ ಧೋರಣೆಗಳ ಮತ್ತು ಮೂಢ ನಂಬಿಕೆಗಳ ಭಾಗಶಃ ಬೀಳುವಿಕೆಯ ಪರಿಣಾಮವಾಗಿ ಹೆಚ್ಚಿನ ಮುಕ್ತ ಧರ್ಮನಿಂದನೆಗೆ ನಡೆಸುತ್ತಿರುವಾಗ, ಆ ರೀತಿಯಾಗಿ ಅದು ಜನರ ಬಗ್ಗೆ ಇರುವ ಮೂಢನಂಬಿಕೆಯನ್ನು ತೆಗೆದುಹಾಕುವುದಾಗಿದ್ದು ಸಹಾ ದೇವರ ಪ್ರತಿಷ್ಠಿತರ ಪಾಲಿಗೆ ಹೆಚ್ಚಿನ ವಿವೇಕದ ಆಲೋಚನೆಯತ್ತ ನಡಿಸುತ್ತದೆ, ಅವರಲ್ಲಿ ಅನೇಕರು ಈ ಹಿಂದೆ ಯೋಚಿಸಲೂ, ತಾವಾಗಿ ದೇವರ ಪರಿಶುದ್ಧ ಗ್ರಂಥವನ್ನು ಓದಲೂ ಭಯಪಡುತ್ತಿದ್ದರು. ಹೀಗಾಗಿ ಈ ಕ್ರಾಂತಿಯು ಸತ್ಯದ ಮತ್ತು ನಿಜವಾದ ಕ್ರೈಸ್ತ ಧರ್ಮದ ಬೆಳವಣಿಗೆಗೆ ಸತ್ಯವೇದಾಧ್ಯಯನವನ್ನು ಉತ್ತೇಜಿಸುವ ಮೂಲಕ ಅನುಕೂಲಕರವಾಯಿತು. ಅದು ಲೂಥರನ ದಿನಗಳಲ್ಲಿ ಪ್ರಾರಂಭವಾದ ಸುಧಾರಣಾ ಚಳುವಳಿಯ ಒಳ್ಳೆಯ ಕಾರ್ಯಗಳನ್ನು ನಿಜವಾಗಿಯೂ ಮುಂದುವರೆಸಿತು. ಅದು ಅಜ್ಞಾನದ ಕಾರಣ, ಸಮೂಹಗಳ ಗುಲಾಮಗಿರಿಯ ಕಾರಣ, ಶಕ್ತಿ, ಘನತೆ ಮತ್ತು ಅಧಿಕಾರ ಮೋಹ, ಹಾಗೂ ಪಾದ್ರಿಗಳ ಅನಾಯಾಸವಾಗಿ ಇದ್ದ ಕಾರಣ ತಡೆಹಿಡಿಯಲ್ಪಟ್ಟಿತ್ತು.

ನಾವು ಈ ರೀತಿಯಾಗಿ 1799 ಅಂತ್ಯಕಾಲ ಎಂದು ಕರೆಯಲ್ಪಡುವುದರ ಪ್ರಾರಂಭವಾಗಿತ್ತೆಂದು ತೋರಿಸಿದ್ದೇವೆ; ಈ ಸಮಯದಲ್ಲಿ ಪೋಪನ ಅಧಿಕಾರವನ್ನು ಸ್ವಲ್ಪ ಸ್ವಲ್ಪವಾಗಿ ಮುಗಿಸಿಬಿಟ್ಟಿತು. ನೆಪೋಲಿಯನ್ನನು Charlemagneಯು ನೀಡಿದ್ದ ದಾನವಾದ ಭೂಪ್ರದೇಶಗಳನ್ನು ಅವನ್ನು ದಾನಮಾಡಿದ ಒಂದು ಸಾವಿರ ವರ್ಷಗಳ ನಂತರ ವಾಪಸ್ಸು ಪಡೆದನಲ್ಲದೆ, ನಂತರದಲ್ಲಿ, ರೋಮಿನಲ್ಲಿ ಜಸ್ಟಿನ್ನನ ಆಜ್ಞೆಯ ಮೇರೆಗೆ ವಾಸ್ತವವಾಗಿ ಓಸ್ಟ್ರೋಗೋತಿಕ್ Ostrogothic ಚಕ್ರಾಧಿಪತ್ಯದ ಅಪಜಯದ ನಂತರ, ಕ್ರಿ.ಶ. 539ರಲ್ಲಿ ಅಂದರೆ 1799ಕ್ಕೆ ಸರಿಯಾಗಿ 1260 ವರ್ಷಗಳ ಹಿಂದೆ ಘೋಷಣೆಯಾದ ಪೋಪನ ನಾಗರೀಕ ಅಧಿಕಾರ ವ್ಯಾಪ್ತಿಯನ್ನೂ ಕಸಿದುಕೊಂಡನು. ಪ್ರವಾದನೆಯಲ್ಲಿ ಪುನಃ ಪುನಃ ವಿವರಿಸಿದಂತೆ ಇದು ಒಂದು ಕಾಲ ಎರಡು ಕಾಲ ಅರ್ಧ ಕಾಲ ಎಂದು (ದಾನಿಯೇಲ 12:7) ನಿಖರವಾದ ಮಿತಿಯಾಗಿದೆ. ಕೆಲವು ಪ್ರಮಾಣದಲ್ಲಿ ಅಂದಿನಿಂದ ಪುನಃ ಸಾಧಿಸುವಂತೆ ಪೋಪನ ಅಧಿಕಾರವು ಇಂದು ಲೌಕಿಕ ಅಥವಾ ನಾಗರೀಕ ಅಧಿಕಾರದ ಯಾವುದೇ ಕುರುಹುಗಳಿಲ್ಲದೆ ಇದೆ, ಅವುಗಳು ಸಂಪೂರ್ಣವಾಗಿ ನಾಶವಾಗಿದೆ. ಕ್ರಿಸ್ತ ವಿರೋಧಿಯು, ನಾಗರೀಕ ಅಧಿಕಾರವನ್ನು ಕಳಕೊಂಡವನಾಗಿದ್ದರೂ ಈಗಲೂ ಜಂಬದ ವೇಷಕಟ್ಟಿ ನಿಲ್ಲುತ್ತಾನೆ; ಆದರೆ ನಾಗರೀಕವಾಗಿ ಅಧಿಕಾರವಿಲ್ಲದವ ನಾಗಿದ್ದಾನೆ, ಆತನು ಸಧ್ಯದಲ್ಲಿಯೇ ಕೆರಳಿದ ಸಮೂಹದವರಿಂದ ಸಂಪೂರ್ಣ ನಾಶವನ್ನು ಎದುರುನೋಡುತ್ತಾನೆ (ದೇವರನ್ನು ಅರಿಯದವರ ಪಾರುಪತ್ಯದಲ್ಲಿ) ಎಂಬುದಾಗಿ ಪ್ರಕಟನೆಯ ಗ್ರಂಥದಲ್ಲಿ ಸ್ಪಷ್ಟವಾಗಿ ತೋರಿಸಲ್ಪಟ್ಟಿದೆ.

ಈ ಅಂತ್ಯಕಾಲವು ಅಥವಾ ಯೆಹೋವನ ಸಿದ್ಧತಾ ದಿನವು ಕ್ರಿ.ಶ. 1799ರಲ್ಲಿ ಪ್ರಾರಂಭವಾಗಿದ್ದು ಕ್ರಿ.ಶ. 1914ರಲ್ಲಿ ಮುಕ್ತಾಯಗೊಳ್ಳುತ್ತದೆ, ಇದು ಹಿಂದಿನ ಯುಗಗಳಲ್ಲೆಲ್ಲಾ ಜ್ಞಾನದ ಮಹಾ ಹೆಚ್ಚಳದಿಂದ ಗುಣಲಕ್ಷಣಗಳನ್ನು ಹೊಂದಿದ್ದರೂ, ಲೋಕವು ಎಂದೂ ಅರಿಯದ ಮಹಾಸಂಕಟದ ಸಮಯದಲ್ಲಿ ತುತ್ತತುದಿಗೇರಬೇಕಾಗಿದೆ; ಆದರೆ ಅದೇನೇ ಇದ್ದರೂ ಬಹಳ ಕಾಲದಿಂದ ವಾಗ್ದಾನಮಾಡಿದ ಆ ಆಶೀರ್ವದಿತ ಸಮಯಕ್ಕೆ ಸಿದ್ಧತೆ ಮಾಡಿ ನಡೆಸುತ್ತದೆ. ಆಗ ದೇವರ ನಿಜವಾದ ರಾಜ್ಯವು ನಿಜವಾದ ಕ್ರಿಸ್ತನ ನಿಯಂತ್ರಣದಲ್ಲಿ ಕ್ರಿಸ್ತ ವಿರೋಧಿಯ ಸರ್ಕಾರಕ್ಕೆ ವ್ಯತಿರಿಕ್ತವಾದ ಒಂದು ವ್ಯವಸ್ಥಿತ ಸರ್ಕಾರವನ್ನು ಸಂಪೂರ್ಣವಾಗಿ ಸ್ಥಾಪಿಸುತ್ತದೆ. ಈ ಅವಧಿಯು ಸಿದ್ದತೆ ಮಾಡಿ ಒಂದು ಹೊಸ ರಾಜ್ಯಕ್ಕೆ ನಡೆಸುವುದರಿಂದ, ಅದು ಹಳೆಯ ಮತ್ತು ಹೊಸಕ್ರಮಗಳ ಸಂಘರ್ಷಕ್ಕೂ ಕಾರಣವಾಗುತ್ತದೆ ಮತ್ತು ಇದರಿಂದ ಎರಡನೆಯದು ಪರಿಚಯಿಸಲ್ಪಡುತ್ತದೆ. ಹಿಂದಿನ ಕ್ರಮಗಳು ಮುಗಿದುಹೋಗಬೇಕಾದರೂ, ಹೊಸದು ಅದನ್ನು ಅತಿಕ್ರಮಿಸಬೇಕಾದರೂ, ಈ ಬದಲಾವಣೆಯನ್ನು ಪ್ರಸ್ತುತ ಕ್ರಮದ ಲಾಭಪಡೆದವರು ಹಿಂಸಾಪೂರ್ವಕಾಗಿ ವಿರೋಧಿಸುತ್ತಾರೆ. ಲೋಕದಾದ್ಯಂತ ಕ್ರಾಂತಿಯು ಹೊರಬೀಳುತ್ತದೆ. ಇದರ ಫಲವಾಗಿ ಹಿಂದಿನ ಕ್ರಮವು ಸಂಪೂರ್ಣವಾಗಿ ನಾಶಗೊಳ್ಳುತ್ತದೆ ಮತ್ತು ನೂತನ ಕ್ರಮವು ಪರಿಚಯಿಸಲ್ಪಟ್ಟು ಸ್ಥಾಪನೆಗೊಳ್ಳುತ್ತದೆ.

ಎಲ್ಲಾ ಅನ್ವೇಷಣೆಗಳು (discoveries), ಹೊಸ ಸಂಶೋಧನೆಗಳು (inventions) ಮತ್ತು ಸೌಕರ್ಯಗಳು (advantages) ಇವೆಲ್ಲವೂ ನಮ್ಮ ದಿನಗಳನ್ನು ಪ್ರತಿದಿನವೂ ಉತ್ತಮವಾಗಿಸುತ್ತದೆ ಹಾಗೂ ಎಷ್ಟೊಂದು ಅಂಶಗಳು ಬರಲಿರುವ ಸಹಸ್ರಮಾನದ ಸಿದ್ಧತೆಗಾಗಿ ಅನೇಕ ಮೂಲವಸ್ತುಗಳು ಒಟ್ಟಾಗಿ ಕಾರ್ಯವೆಸಗುತ್ತಿವೆ. ಆಗ ನಿಜವಾದ ಆರೋಗ್ಯದಾಯಕ ಸುಧಾರಣೆಗಳು ಮತ್ತು ಎಲ್ಲಾ ದಿಕ್ಕುಗಳಲ್ಲಿಯೂ ಪ್ರತ್ಯಕ್ಷ ಮತ್ತು ತೀವ್ರಗತಿಯಲ್ಲಿ ಕ್ರಮಬದ್ಧವಾಗಿ ಎಲ್ಲರಿಗೂ, ಎಲ್ಲರಿಗಾಗಿಯೂ ಕಂಡುಬರುತ್ತವೆ.

### ನಿನ್ನ ದುಃಖದಿಂದ ಎಚ್ಚರವಾಗು !

ಚಿಯೋನಿನ ಪುತ್ರಿಯೆ, ನಿನ್ನ ದುಃಖದಿಂದ
ಎಚ್ಚರಗೊಳ್ಳು!

ಎದ್ದೇಳು ! ನಿನ್ನ ವೈರಿಗಳು ನಿನ್ನನ್ನು ಇನ್ನು ಮೇಲೆ
ಪೀಡಿಸರು.

ಗುಡ್ಡದ ಮೇಲೆ ಪ್ರಕಾಶಮಾನವಾಗಿ ಸಂತೋಷದ
ಬೆಳಗಿನ ಬೆಳಕು ಉದಯಿಸುವುದು.

ನಿನ್ನ ವೈರಿಗಳು ಬಲಿಷ್ಠರಿದ್ದರು. ಆದರೆ ಅವರನ್ನೂ
ಅಡಗಿಸಿದ,

ಅವರ ಸಮೂಹವನ್ನು ಚದುರಿಸಿದ ಬಾಹುವು
ಎಷ್ಟೂ ಪರಾಕ್ರಮಿಯಾದದ್ದು

ಅವರನ್ನು ಉಪದ್ರವವು ಹಿಮ್ಮೆಟ್ಟಿದಾಗ ಹೊಟ್ಟಿನಂತೆ
ಚದುರಿಹೋದರು

ಅವರ ಅಶ್ವಗಳು ಯುದ್ಧ ರಥಗಳು ವ್ಯರ್ಥವಷ್ಟೆ.

ಚಿಯೋನಿನ ಪುತ್ರಿಯೆ, ನಿನ್ನನ್ನು ರಕ್ಷಿಸಿದ

ಶಕ್ತಿಯನ್ನು ವೀಣೆಯಿಂದಲೂ ತಬಲದಿಂದಲೂ
ಸ್ತೋತ್ರಮಾಡತಕ್ಕದ್ದು.

ನಿನ್ನನ್ನು ಅಡಿಯಾಳನ್ನಾಗಿಸಿದ ವಿರೋಧಿಯನ್ನು
ನಾಶಪಡಿಸಿದ್ದಕ್ಕಾಗಿ ಗಟ್ಟಿಯಾಗಿ ಕೂಗು

ಪೀಡಿಸುವವರು ಸೋಲನ್ನಪ್ಪಿದ್ದಾನೆ. ಚಿಯೋನು
ಬಿಡುಗಡೆ ಹೊಂದಿದೆ.

### Awake from Thy Sadness !

"Daughter of Zion, awake from thy sadness!
Awake! for thy foes shall oppress thee no
more.
Bright o'er the hills dawns the day-star of
gladness:
Arise ! for the night of thy sorrow is o'er.

"Strong were thy foes, but the arm that
subdued them,
And scattered their legions, was mightier far:
They fled like the chaff from the scourge that
Pursued them;
Vain were their steeds and their chariots of
war.

"Daughter of Zion, the power that hath
saved thee,
Extolled with the harp and the timbrel
should be.
Shout! for the foe is destroyed that
enslaved thee,
Th' oppressor is vanquished and Zion is free".

* * * * * * *